


ಶಿಕ್ಷಣ ಚಿಂತಕ

ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ





ಲೇಖಕರು :
ವಿದ್ಯಾವತಿ ಬಲ್ಲೂರ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ.

Email : kasapabidar@gmail.com - www.kasapabidar.in







ಕರ್ನಾಟಕ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬೀದರ
ಸುವರ್ಣ ಮಹೋತ್ಸವ













ವಿಶಾಲ ಹಣೆ, ಅದರ ತುಂಬ ವಿಭೂತಿ, ಮುಖದಲ್ಲೆಲ್ಲ ನಗು, ನೇರ ಮಾತಿನ, ಮೃದು ಹೃದಯದ ಸತ್ಯಶುದ್ಧ ಕಾಯಕ ಜೀವಿ ವಿದ್ಯಾವತಿ ಬಲ್ಲೂರ (೦೧.೦೬.೧೯೭೦) ಎಂ.ಎ., ಎಂ.ಇಡಿ ಪದವಿಧರರು. ಔರಾದ ತಾಲ್ಲೂಕಿನ ಠಾಣಾಕುಶನೂರಿನ ಖೇಮಶೆಟ್ಟೆ ಪರಿವಾರದ ಪಾರಮ್ಮ ಚಂದ್ರಪ್ಪ ಅವರ ಮಗಳಾಗಿ ಜನಿಸಿದ್ದು, ಬಾಲ್ಯದಿಂದಲೂ ಓದು ಬರಹಗಳ ಕಡೆಗೆ ಹೆಚ್ಚು ಆಸಕ್ತಿ ತೋರಿದ್ದು, ಬಸವಾದಿ ಶರಣರ ಆದರ್ಶ ತತ್ವಗಳನ್ನು ಮೈಗೂಡಿಸಿಕೊಂಡು ಆ ತಳಹದಿಯಲ್ಲಿ ಬದುಕು ಸಾಗಿಸುವುದರೊಂದಿಗೆ, ಕವನ ಲೇಖನ, ಚಿಂತನ, ವಿಮರ್ಶೆ ಬರಹಗಳನ್ನು ಬರೆಯುತ್ತಿದ್ದಾರೆ. ಬಾಲ್ಯದ ಶಿಕ್ಷಣ ಪಡೆಯುತ್ತಿರುವಾಗಲೇ ಆಧ್ಯಾತ್ಮದತ್ತ ತುಂಬ ಆಸಕ್ತಿಯನ್ನು ಹೊಂದಿದ್ದ ಇವರು ಸನ್ಯಾಸತ್ವವನ್ನು ಸ್ವೀಕರಿಸಬೇಕೆಂಬ ಭಾವವನ್ನು ಮೂಡಿಸಿಕೊಂಡಿದ್ದರು. ಇದೇ ಸಮಯದಲ್ಲಿ ಸರಳ ಸಾತ್ವಿಕ ಸ್ವಭಾವದ ಬಲ್ಲೂರ ಬಸವರಾಜರನ್ನು ನೋಡಿ, 'ಕುಚ್ ತೊ ಮಜಾ ಹೈ ತೊ ಜಿಂದಗೀ ಮೇ ಹೀ' ಎಂದು ಮನಸ್ಸು ಬದಲಾಯಿಸಿ, ಬಸವರಾಜ ಬಲ್ಲೂರರ ಬದುಕ ಬಂಡಿಗೆ ಹೆಗಲಾಗಿ ಹಗಲು ರಾತ್ರಿ ಬೇಸರಿಸದೇ, ದುಡಿವ ಶ್ರಮಜೀವಿ. ಇವರು ಕಲಬುರ್ಗಿಯ ಮಹಮ್ಮದೀಯ ಶಿಕ್ಷಣ ಕಾಲೇಜು, ಆಶಾಜ್ಯೋತಿ ಡಿ.ಇಡಿ ಕಾಲೇಜು, ಬಸವಕಲ್ಯಾಣದ ಎಸ್.ಎಸ್. ಖೂಬಾ ಬಸವೇಶ್ವರ ಕಾಲೇಜುಗಳಲ್ಲಿ ಉಪನ್ಯಾಸಕಾರಾಗಿ ಸೇವೆ ಸಲ್ಲಿಸಿ ಇದೀಗ ಬೀದರನ ಎಂ. ಎಸ್ ಮುದ್ದಣ ಡಿ.ಇಡಿ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮೂಲತಃ ಆಧ್ಯಾತ್ಮಿಕ ಭಾವಗಳನ್ನು ಹೊಂದಿರುವುದರಿಂದ, ಈ ವಿಷಯದಲ್ಲಿ ಬಹಳಷ್ಟು ಉಪನ್ಯಾಸಗಳನ್ನು ಮಾಡಿದ್ದಾರೆ. ಚನ್ನಬಸವ ಪಟ್ಟದ್ದೇವರು ಮತ್ತು ಅಸ್ಪೃಶ್ಯತೆ ಕೃತಿ ಮೂಲಕ ಸಾಹಿತ್ಯ ಲೋಕವನ್ನು ಪ್ರವೇಶ ಮಾಡಿದ ಇವರ ಹಲವಾರು ಬಿಡಿ ಕವಿತೆ, ಲೇಖನಗಳು ಪ್ರಕಟವಾಗಿವೆ. ಹಲವಾರು ಸಾಹಿತಿಗಳ ಪರಿಚಯವನ್ನೂ ಮಾಡಿದ್ದಾರೆ. ಇವರ ಸಾಹಿತ್ಯ-ಸಾಂಸ್ಕೃತಿಕ ಸೇವೆಗಾಗಿ ಅಖಿಲ ಭಾರತ ೧೮ನೆಯ ಕವಯಿತ್ರಿಯರ ಕಾವ್ಯ ಸಮ್ಮೇಳನದಲ್ಲಿ 'ಅಮೃತಾ ಪ್ರೀತಮ ಪ್ರಶಸ್ತಿ' ಹಾಗೂ ಎಂ. ಜಿ. ದೇಶಪಾಂಡೆ ಸಾಹಿತ್ಯಕ, ಸಾಂಸ್ಕೃತಿಕ ಪ್ರತಿಷ್ಠಾನದ ರಾಜ್ಯ ಕವಿ ಕಾವ್ಯ ಸಾಹಿತ್ಯ ಸಮ್ಮೇಳನದಲ್ಲಿ 'ಕಾವ್ಯ ರತ್ನಾಂಜಲಿ ಪ್ರಶಸ್ತಿ' ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಪ್ರಸ್ತುತ ಬೀದರ ಜಿಲ್ಲಾ ಕಸಾಪದ ಸಾಂಸ್ಕೃತಿಕ ಚಿಂತಕರು ಮಾಲಿಕೆಯಲ್ಲಿ ಶಿಕ್ಷಣ ಚಿಂತಕ ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ ಅವರ ಜೀವನ ಸಾಧನೆ ಕುರಿತ ಮಹತ್ವಾಕಾಂಕ್ಷೆಯ ಕೃತಿ ಪ್ರಕಟವಾಗುತ್ತಿದೆ. ಇದರಲ್ಲಿ ಡಾ. ಬಸವರಾಜ ಜಿ. ಪಾಟೀಲ ಅಷ್ಟೂರವರ ಬದುಕಿನ ವಿವಿಧ ಆಯಾಮಗಳ ಸಮಗ್ರ ಚಿತ್ರಣ ಅಕ್ಷರ ರೂಪದಲ್ಲಿ ದಾಖಲಿಸಿದ್ದಾರೆ. ಸಿಕ್ಕ ಅವಕಾಶಗಳನ್ನು ಸದುಪಯೋಗಪಡಿಸಿ ಸದಾ ಕ್ರಿಯಾಶೀಲವಾಗಿರುವ ವಿದ್ಯಕ್ಕರಿಂದ ಇನ್ನೂ ಸಾಹಿತ್ಯ ಕೃತಿಗಳು ಮೂಡಲೆಂದು ಹಾರೈಸುವೆ.

• ರಜಿಯಾ ಬಳಬಟ್ಟಿ

ಬೀದರ ಜಿಲ್ಲಾ ೧೭ನೇ ಕನ್ನಡ ಸಾಹಿತ್ಯ ಸಮ್ಮೇಳನ ನಿಮಿತ್ತ
ಸಾಂಸ್ಕೃತಿಕ ಚಿಂತಕರು ಮಾಲಿಕೆ

ಶಿಕ್ಷಣ ಚಿಂತಕ

ಡಾ॥ ಬಸವರಾಜ ಜಿ. ಪಾಟೀಲ ಅಷ್ಟೂರ

ಲೇಖಕರು

ವಿದ್ಯಾವತಿ ಬಲ್ಲೂರ

ಬೀದರ

ಪ್ರಕಾಶಕರು
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ
೨೦೨೧

ಶಿಕ್ಷಣ ಚಿಂತಕ ಡಾ॥ ಬಸವರಾಜ ಜಿ. ಪಾಟೀಲ ಅಷ್ಟೂರ
ಲೇ: ವಿದ್ಯಾವತಿ ಬಲ್ಲೂರ,ಬೀದರ. -೫೮೫೪೦೧. ಮೊ. ೯೩೪೩೮೩೪೬೪೧
ಪ್ರಕಾಶಕರು ಃ **ಸುರೇಶ ಚನಶೆಟ್ಟಿ,**
ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ. ಮೊ: ೯೯೮೬೭೯೨೩೨೩
E-mail:kasapabidar@gmail.com, web: www.kasapabidar.in
ಪ್ರಥಮ ಮುದ್ರಣ ಃ ೨೦೨೧
ಹಕ್ಕುಗಳು ಃ ಲೇಖಕರದ್ದು
ಪುಟಗಳು ಃ ೪೮+೮೮=೧೩೬
ಬೆಲೆ ಃ ೧೫೦/-
ಅಕ್ಷರ ಜೋಡಣೆ ಃ ಪಾಟೀಲ ಕಂಪ್ಯೂಟರ್ಸ್, ಬೀದರ.
ಪುಸ್ತಕ ವಿನ್ಯಾಸ ಃ ಆರ್.ವ್ಹಿ. ಕುಂಬಾರ, ಬೀದರ.
ಮುಖಪುಟ ವಿನ್ಯಾಸಃ ಅಕ್ಷಯ ಗ್ರಾಫಿಕ್ಸ್, ಬೀದರ
ಮುದ್ರಕರು ಃ ವಿಶ್ವಾಸ ಪ್ರೆಸ್ ಬೆಂಗಳೂರು

ಪುಸ್ತಕ ಪ್ರಕಟಣೆ ಸಲಹಾ ಸಮಿತಿ

ಶ್ರೀ ಸುರೇಶ ಚನಶೆಟ್ಟಿ, ಅಧ್ಯಕ್ಷರು, ಜಿಲ್ಲಾ ಕಸಾಪ, ಬೀದರ
ಪೂಜ್ಯ ಶ್ರೀ ಅಕ್ಕ ಅನ್ನಪೂರ್ಣ, ಬೀದರ ಜಿಲ್ಲಾ ೧೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು
ಶ್ರೀ ಪಂಚಾಕ್ಷರಿ ಪುಣ್ಯಶೆಟ್ಟಿ, ಗೌರವಾಧ್ಯಕ್ಷರು, ಜಿಲ್ಲಾ ಕಸಾಪ, ಬೀದರ
ಶ್ರೀ ಎಂ.ಜಿ. ದೇಶಪಾಂಡೆ, ಹಿರಿಯ ಸಾಹಿತಿಗಳು, ಬೀದರ
ಶ್ರೀ ಎಸ್.ಎಂ. ಜನವಾಡಕರ್, ಹಿರಿಯ ಸಾಹಿತಿಗಳು, ಬೀದರ
ಶ್ರೀಮತಿ ಭಾರತಿ ವಸ್ತ್ರದ, ಹಿರಿಯ ಸಾಹಿತಿಗಳು, ಬೀದರ
ಡಾ. ಶಿವಗಂಗಾ ರುಮ್ಮಾ, ಮಹಿಳಾ ಸಾಹಿತಿಗಳು, ಬೀದರ
ಡಾ. ಬಸವರಾಜ ಬಲ್ಲೂರ, ಗೌ. ಕಾರ್ಯದರ್ಶಿ, ಜಿಲ್ಲಾ ಕಸಾಪ, ಬೀದರ
ಪ್ರೊ. ಶಿವಕುಮಾರ ಕಟ್ಟೆ, ಸಾಹಿತಿಗಳು ಹಾಗೂ ಗಡಿ ಪ್ರತಿನಿಧಿ, ಜಿಲ್ಲಾ ಕಸಾಪ, ಬೀದರ
ಡಾ. ರಘುಶಂಖ ಭಾತಂಬ್ರಾ, ಸಾಹಿತಿಗಳು, ಬೀದರ
ಡಾ. ಚಂದ್ರಪ್ಪ ಭತಮುರ್ಗೆ, ಸಾಹಿತಿಗಳು, ಬೀದರ
ಶ್ರೀ ಎಂ.ಎಸ್. ಮನೋಹರ, ಸಾಹಿತಿಗಳು ಹಾಗೂ ಅಧ್ಯಕ್ಷರು ತಾಲ್ಲೂಕು ಕಸಾಪ, ಬೀದರ
ಶ್ರೀ ಶಿವಶಂಕರ ಟೋಕರೆ, ಸಂಚಾಲಕರು ಜಿಲ್ಲಾ ಕಸಾಪ, ಬೀದರ.
ಪ್ರೊ. ಜಗನ್ನಾಥ ಕಮಲಾಪುರೆ, ಗೌರವ ಸಲಹೆಗಾರು, ಜಿಲ್ಲಾ ಕಸಾಪ, ಬೀದರ.



ಶ್ರೀ ಗುರು ಬಸವಲಿಂಗಾಯ ನಮಃ

ಪೂಜ್ಯ ಶ್ರೀ ಮ.ಘ.ಚ. ಡಾ. ಬಸವಲಿಂಗ ಪಟ್ಟದ್ದೇವರು

Pooja Shri Dr. Basavalinga Pattadevaru

ಹಿರೇಮಠ ಸಂಸ್ಥಾನ, ಭಾಲ್ಕಿ – 585 328 – ಜಿ.ಬೀದರ – ಕರ್ನಾಟಕ ರಾಜ್ಯ

Hiremath Samsthan BHALKI-585328-Dist Bidar-Karnataka State-Ph: 08484-262284

Mobile : 9448115404-9448947571-email : hiremathsamsthan.bhalki@gmail.com



ಸದಾಶಯ ನುಡಿ

ಶ್ರೀ ಬಸವರಾಜ ಪಾಟೀಲ ಅಷ್ಟೂರ ಕೇವಲ ವ್ಯಕ್ತಿಯಲ್ಲ. ಶಿಕ್ಷಣ ಕ್ಷೇತ್ರದ ಪ್ರಚಂಡ ಶಕ್ತಿಯಾಗಿದ್ದಾರೆ. ಸಮಾಜದ ಹಿತಚಿಂತಕರಾಗಿದ್ದಾರೆ. ಅಖಂಡವಾಗಿ ನಲವತ್ತು ವರ್ಷಗಳಿಂದ ತಮ್ಮನ್ನೇ ತಾವು ಅರ್ಪಿಸಿಕೊಂಡು ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಮಾಡುತ್ತಿದ್ದಾರೆ. ಶೈಕ್ಷಣಿಕ ರಂಗದಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಯಾವಾಗಲೂ ಸಮಾಜದ ಬಗ್ಗೆ ಚಿಂತನೆ ಮಾಡುತ್ತಾರೆ. ಹತ್ತು ಹಲವು ಯೋಜನೆ ಮಾಡುತ್ತ ಸಮಾಜಕ್ಕೆ ಸೇವೆ ಮಾಡುತ್ತಾರೆ.

ಉನ್ನತ ಸ್ಥಾನಕ್ಕೇರಿದರೂ ಅಹಂ ಒಂದಿಷ್ಟು ಸುಳಿದಿಲ್ಲ. 'ನಾ' 'ನಾ' ಎಂಬ ಭಾವವಿಲ್ಲ. 'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ', 'ಸದುವಿನಯವೇ ಸದಾಶಿವನ ಒಲುಮೆ' ಅಪ್ಪ ಬಸವಗುರುವಿನ ವಾಣಿ ನಿತ್ಯ ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆ. ಯಾರೇ ಹೋದರೂ ಪ್ರೀತಿ ಅಂತಃಕರಣದಿಂದ ಮಾತನಾಡುತ್ತಾರೆ. ಮಾತು ಕಡಿಮೆ ಕಾರ್ಯ ಹೆಚ್ಚು ಮಾಡುತ್ತಾರೆ. ಸದ್ದುಗದ್ದಲವಿಲ್ಲದ ಸೇವೆ ಮಾಡುತ್ತಾರೆ. ಪ್ರಚಾರ ಪ್ರಿಯರಲ್ಲ. ಆಡಂಬರ ಹಿಡಿಸುವುದಿಲ್ಲ. ಪದವಿ ಪುರಸ್ಕಾರಕ್ಕಾಗಿ ಹಪಾಹಪಿ ಪಟ್ಟವರಲ್ಲ. ಸರಳತೆ, ಸಹಜತೆ, ಪ್ರಾಮಾಣಿಕತೆ ಬದುಕಿನುದ್ದಕ್ಕೂ ಪಾಲಿಸಿಕೊಂಡು ಬಂದಿದ್ದಾರೆ. ತಮ್ಮದೇ ಆದ ವ್ಯ ಕ್ತಿತ್ವಗಳಿಸಿಕೊಂಡಿದ್ದಾರೆ. ರಾಜಕೀಯದಲ್ಲಿದ್ದರೂ ಇಲ್ಲದಂತೆ ಇದ್ದಾರೆ. ಆದರೆ ಅವರ ಅಂತರಂಗದಲ್ಲಿ ತುಂಬಾ ಶಿಕ್ಷಣದ ಪ್ರಗತಿ, ಜಿಲ್ಲೆಯ ಅಭಿವೃದ್ಧಿ ತುಂಬಿಕೊಂಡಿದ್ದಾರೆ. ಜನಸೇವೆಯೇ ದೇವಸೇವೆ ಎಂಬ ತತ್ವ ಆಚರಣೆಯಲ್ಲಿ ಕಾಣುತ್ತೇವೆ.

ಕನ್ನಡ ಸಾಹಿತ್ಯ ಪರಿಷತ್ತು ಅವರ ಬಗ್ಗೆ ಒಂದು ಗ್ರಂಥ ಪ್ರಕಟಿಸುತ್ತಿರುವುದು ಸಂತಸದ ವಿಷಯ. ನಮ್ಮಲ್ಲಿ ಅದೆಷ್ಟೋ ಕಾರ್ಯ ಮಾಡಿದ್ದರೂ ದಾಖಲೆ ಇಲ್ಲದ ಸಲುವಾಗಿ ಕಾಲನ ಗರ್ಭದಲ್ಲಿ ಮಾಯವಾಗುವುದೇ ಹೆಚ್ಚು. ಇದ್ದಾಗಲೇ ಅವರ ಸೇವೆ ಗುರುತಿಸಿ ಗ್ರಂಥ ರೂಪದಲ್ಲಿ ತರುವುದು ಅಪರೂಪದ ಕಾರ್ಯ. ಅದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಅಭಿನಂದನೆ.

ಶ್ರೀ ಬಸವರಾಜ ಪಾಟೀಲ ಅಷ್ಟೂರ ಇನ್ನೂ ಹೆಚ್ಚು ಹೆಚ್ಚು ಕಾರ್ಯ ಮಾಡಲಿ. ಅವರಿಗೆ ಆಯುಷ್ಯ ಆರೋಗ್ಯ ಬಸವತಂದೆಯವರು ಕರುಣಿಸಲೆಂದು ಹೃದಯಪೂರ್ವಕ ಶುಭ ಹಾರೈಸುತ್ತೇವೆ.

ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು
ಹಿರೇಮಠ ಸಂಸ್ಥಾನ, ಭಾಲ್ಕಿ ಜಿ: ಬೀದರ



ಜಗದೀಶ ಶೆಟ್ಟರ್
ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಸಾರ್ವಜನಿಕ ಉದ್ದಿಮೆಗಳ ಸಚಿವರು ಹಾಗೂ
ಬೆಳಗಾವಿ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರು

ಕೊಠಡಿ ಸಂಖ್ಯೆ 315-315ಎ
3ನೇ ಮಹಡಿ, ವಿಧಾನ ಸೌಧ
ಬೆಂಗಳೂರು-560 001
ದೂರವಾಣಿ ಸಂ. : 080-22252530
: 080-22033450
ಫ್ಯಾಕ್ಸ್ : 080-22252538

ದಿನಾಂಕ : 10-07-2021

ಸದಾಶಯ ನುಡಿ

ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ ಅವರು ಅಪರೂಪದ ಸಜ್ಜನ ರಾಜಕಾರಣಿ. ದಕ್ಷತೆ ಪ್ರಾಮಾಣಿಕತೆಗೆ ಹೆಸರಾದವರು. ಅವರು ನನಗೆ ತೀರಾ ಆಪ್ತರು. ರಾಜಕಾರಣದಲ್ಲಿದ್ದರೂ ರಾಜಿ ಮಾಡಿಕೊಳ್ಳದ ನಿಸ್ಪ್ರಹ ಹೃದಯವಂತರಾದ ಕಾರಣ ದ್ವೇಷ ರಾಜಕಾರಣ ಮಾಡದವರು. ಅವರೊಬ್ಬ ಮಹಾ ಮುತ್ಸದ್ದಿ. ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸುವ ಮೂಲಕ ಜನಹಿತ ಕಾರ್ಯ ಮಾಡುತ್ತಿದ್ದಾರೆ. ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅವರ ಬಗ್ಗೆ ಪುಸ್ತಕ ಹೊರತರುತ್ತಿರುವುದು ಅಭಿಮಾನದ ಸಂತಸದ ಸಂಗತಿ. ಕೆಲಸ ಮಾಡಿದವರನ್ನು ಸಮಾಜ ಮರೆಯಲಾರದು ಎಂಬುದಕ್ಕೆ ಈ ಕೃತಿ ನಿದರ್ಶನವಾಗಲಿ. ಅವರಿಂದ ಸಮಾಜಕ್ಕೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸೇವೆ ಸಲ್ಲಲೆಂದು ಶುಭ ಹಾರೈಸುವೆ.

(ಜಗದೀಶ ಶೆಟ್ಟರ್)



भगवंत खुबा
ಭಗವಂತ ಖೂಬಾ
BHAGAWANTH KHUBA

रसायन एवं उर्वरक एवं
नवीन एवं नवीकरणीय ऊर्जा राज्य मंत्री
भारत सरकार
Minister of State
Chemicals & Fertilizers and
New & Renewable Energy
Government of India

ಸದಾಶಯ ನುಡಿ

ಶಿಕ್ಷಣ ಪ್ರೇಮಿಗಳಾದ ಡಾ. ಬಸವರಾಜ ಜಿ. ಪಾಟೀಲ ಅವರು, ಶ್ರೀಮಂತ ಮನೆತನದಲ್ಲಿ ಹುಟ್ಟಿ ಬೆಳೆದು, ಎಂ.ಎಸ್ ಪದವಿ ಮುಗಿಸಿದರೂ ಅಹಂಕಾರ ಅವರ ಸಮೀಪ ಕೂಡ ಸುಳಿಯುವುದಿಲ್ಲ. ಜಾತ್ಯತೀತ ನಿಲುವಿಗೆ ಬದ್ಧರಾದ ಅವರು ಸ್ವಜನ ಪಕ್ಷಪಾತದ ರಾಜಕೀಯ ಮಾಡದೆ, ಮೇಲುಕೀಳೆಂದು ನೋಡದೆ, ಬಸವಾದಿ ಶರಣರ ನಾಡಿಗೆ ತಕ್ಕ ಗುಣಗಳನ್ನು ಮೈಗೂಡಿಸಿಕೊಂಡು ಈ ಭಾಗದ ಹೆಮ್ಮೆಯ ಪುತ್ರರಾಗಿದ್ದು ನಿಜಕ್ಕೂ ಹೆಮ್ಮೆಯ ವಿಷಯ.

ನಾನು ವ್ಯಾಸಂಗ ಮಾಡಿದ್ದು ಬಹು ಮುಖ್ಯವಾಗಿ ನನ್ನನ್ನು ರೂಪಿಸಿದ್ದು ಹೈದರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಬೀದರನ ಬಿ.ವಿ.ಭೂಮರೆಡ್ಡಿ ಕಾಲೇಜು. ಡಾ. ಬಸವರಾಜ ಜಿ. ಪಾಟೀಲರವರು ಹೈದರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಗೆ ಅನೇಕ ಸಲ ಆಡಳಿತ ಮಂಡಳಿಯ ಸದಸ್ಯರಾಗಿ ಆಯ್ಕೆಯಾದ ಮೇಲೆ ಬಿ.ವಿ.ಭೂಮರೆಡ್ಡಿ ಕಾಲೇಜನ್ನು ತುಂಬಾ ಅಭಿವೃದ್ಧಿಗೊಳಿಸಿದ್ದಾರೆ. ಬದಲಾದ ಕಾಲಗತಿಗೆ ತಕ್ಕಂತೆ ಈ ಕಾಲೇಜನ್ನು ಆಧುನೀಕರಣ ಗೊಳಿಸಿ ಶಿಕ್ಷಣದ ಗುಣಮಟ್ಟ ಹೆಚ್ಚಿಸಿದ್ದು ಅವರ ಕ್ರಿಯಾಶೀಲತೆಗೆ ಸಾಕ್ಷಿಯಾಗಿದೆ.

ಕಲ್ಯಾಣ ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ತನ್ನದೆ ಆದ ಛಾಪನ್ನು ಮೂಡಿಸಿರುವ ಇವರು ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿಯೂ ಸುಮಾರು ವರುಷಗಳಿಂದ ಸೇವೆ ಸಲ್ಲಿಸುತ್ತಿರುವ ಅವರು ಹಲವಾರು ವಿಧಾಯಕ ಕಾರ್ಯಗಳನ್ನು ಮಾಡಿದ್ದಾರೆ. ಆ ಕಾರಣಕ್ಕಾಗಿಯೇ ಕರಾಶಿ ಸಂಸ್ಥೆ ಅನೇಕ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಜಗತ್ತಿಗೆ ನೀಡಿದೆ. ಈ ಭಾಗದಲ್ಲಿಯೇ ಅತ್ಯುತ್ತಮ ಒಳಾಂಗಣ ಕ್ರಿಡಾಂಗಣ ಕಟ್ಟಿಸಿದ್ದು ಅದಕ್ಕೆ ಸಂಸದರ ಅನುದಾನದಲ್ಲಿ ಒಂದಿಷ್ಟು ಸಹಾಯ ಮಾಡಲು ಸಾಧ್ಯವಾಗಿದ್ದು ಸಹ ನನ್ನ ಸುದೈವ.

ಕರಾಶಿ ಸಂಸ್ಥೆಯಲ್ಲಿ ಓದಿದ ವಿದ್ಯಾರ್ಥಿಗಳು ಇಂದು ದೇಶದಾದ್ಯಂತ ಒಳ್ಳೆಯ ಹೆಸರು, ಕೀರ್ತಿಗಳಿಸಿದ್ದಾರೆ ಎಂದರೆ ಅದು ಹೆಮ್ಮೆಯ ಸಂಗತಿ. ಡಾ. ಬಸವರಾಜ ಜಿ. ಪಾಟೀಲ್‌ರವರು ಶಿಕ್ಷಣ ಪ್ರೇಮಿಯು, ಜೊತೆಗೆ ನಾಡು, ನುಡಿ, ದೇಶ, ಸಂಸ್ಕೃತಿ, ಸಂರಕ್ಷಣೆಯ ವಿಷಯ ಬಂದಾಗ ಎಲ್ಲರೊಂದಿಗೆ ಅವರು ಕೈಜೊಡಿಸಿ ಇವುಗಳ ಸಂರಕ್ಷಣೆಗೆ ನಿಲ್ಲುವುದು, ಅವುಗಳನ್ನು ಉಳಿಸಿ ಬೆಳೆಸುವುದರಲ್ಲಿ ಇವರ ಪಾತ್ರವು ಬಹುಮುಖ್ಯವಾಗಿರುತ್ತದೆ.

ಅನೇಕ ಬಡಮಕ್ಕಳಿಗೆ ಉಚಿತ ಶಿಕ್ಷಣ ನೀಡಿ ಹೃದಯ ಶ್ರೀಮಂತಿಕೆ ತೋರಿದವರಾಗಿದ್ದಾರೆ. ೪ ದಶಕಗಳ ಕಾಲ ಶಿಕ್ಷಣ ಕ್ಷೇತ್ರದಲ್ಲಿ ಇವರ ನೇತೃತ್ವದಲ್ಲಿ ಶಿಕ್ಷಣ ಸಂಸ್ಥೆಯು ನಡೆಸಿಕೊಂಡು ಬಂದಿರುವುದು ಸಾಮಾನ್ಯದ ಮಾತಲ್ಲಾ, ಇವರಲ್ಲಿ ತಾಳ್ಮೆ, ಜಾಣ್ಮೆ, ಹೃದಯ ಶ್ರೀಮಂತಿಕೆ ಇವೆಲ್ಲವುಗಳು ಇವರ ಯಶಸ್ಸಿನ ಸಾಧನಗಳಾಗಿವೆ ಎಂದರೆ ಅತಿಶಯೋಕ್ತಿಯಾಗಲಾರದು ಎಂಬುದು ನನ್ನ ಅಭಿಪ್ರಾಯ.

ಡಾ.ಬಸವರಾಜ ಜಿ. ಪಾಟೀಲರವರಿಗೆ ದೇವರು ಮುಂದಿನ ದಿನಗಳಲ್ಲಿಯೂ ಇನ್ನಷ್ಟು ಹೆಚ್ಚಿನ ಯಶಸ್ಸು ನೀಡಿ, ಅವರಿಂದ ನಮ್ಮ ನಾಡಿಗೆ ವಿಶೇಷವಾಗಿ ಕಲ್ಯಾಣ ಕರ್ನಾಟಕದ ಶಿಕ್ಷಣ ಕ್ಷೇತ್ರ ಇನ್ನಷ್ಟು ಅಭಿವೃದ್ಧಿಗೊಳ್ಳಲಿ ಎಂದು ಹರಸುತ್ತೇನೆ.

ಭಗವಂತ ಖೂಬಾ

Chemicals & Fertizers : Room No. 315, 'A'-Wing Shastri Bhawan, New Delhi-110001 Tel : 11-23382364, 23383686,23381768
Fax : 011-23381713, E-mail : mos-mocf@nic.in
New & Renawable Energy : Room No. 202, Iind Floor, 14th Block, CGO Complex, New Delhi-110003, Tel : 011-24360359



ಪ್ರಭು ಬಿ. ಚವ್ಹಾಣ್
ಪಶು ಸಂಗೋಪನೆ, ಹಾಗೂ
ಬೀದರ ಜಿಲ್ಲಾ
ಉಸ್ತುವಾರಿ ಸಚಿವರು,
ಕರ್ನಾಟಕ ಸರಕಾರ

ಕೊಠಡಿ ಸಂಖ್ಯೆ 442-443
4ನೇ ಮಹಡಿ, ವಿಕಾಸ ಸೌಧ
ಬೆಂಗಳೂರು-560 001
ದೂರವಾಣಿ ಸಂ. : 080-22257285
: 080-22035090

ಸಂಖ್ಯೆ:ಪಸಂಸ/ಬಿಡಿಆರ್/ /2021 ದಿನಾಂಕ : 24-07-2021

ಸದಾಶಯ ನುಡಿ

ಬೀದರ ಜಿಲ್ಲೆಯ ಹೆಸರಾಂತ ಶಿಕ್ಷಣ ತಜ್ಞರಾದ ಡಾ. ಬಸವರಾಜ ಜಿ. ಪಾಟೀಲರು ನಿಷ್ಠಾವಂತರು ಮತ್ತು ತಮ್ಮ ಕರ್ತವ್ಯ ಪ್ರಜ್ಞೆಗೆ ಹೆಸರಾದವರು. ಅವರ ದಕ್ಷತೆ, ಪ್ರಾಮಾಣಿಕತೆ ಮತ್ತು ಬಡಜನರ ಬಗ್ಗೆ ಅವರುಳ್ಳ ಒಲವಿನಿಂದಾಗಿ ಅವರ ಹೃದಯಶ್ರೀಮಂತಿಕೆ ಅರಿವು ಸರ್ವವೇದ್ಯ.

ಬಾಲ್ಯದಿಂದಲೇ ಅವರಿಗೆ ಶಿಕ್ಷಣದ ಬಗ್ಗೆ ಅಪಾರ ಒಲವಿದ್ದ ಕಾರಣ ಎಂ.ಎಸ್ ಪದವಿಯನ್ನು ಪೂರೈಸಿದರು. ಮನಸ್ಸು ಮಾಡಿದ್ದರೆ ಲಾಭದಾಯಕ ವೃತ್ತಿಯಾದ ವೈದ್ಯ ವೃತ್ತಿಯನ್ನು ಮುಂದುವರಿಸಬಹುದಿತ್ತು. ಆದರೆ ಲಾಭಮೂಲದ ವೈದ್ಯಕೀಯ ವೃತ್ತಿಯತ್ತ ಹೆಚ್ಚು ಗಮನ ಕೊಡದೇ ಸಮಾಜ ಸೇವೆಗೆ ನಿಂತಿರುವುದು ಸಂತೋಷದ ವಿಷಯ.

ರಾಜಕೀಯದ ಒಲವಿದ್ದರೂ ರಾಜಕೀಯ ಮಾಡದೇ, ಎಲ್ಲರನ್ನೂ ಒಳಗೊಳ್ಳುವ ಯಾರನ್ನೂ ಮೇಲು ಕೀಳೆಂದು ನೋಡದೆ, ಬಸವಾದಿ ಶರಣರ ತತ್ವಗಳಂತೆ ಗುಣಗಳನ್ನು ಮೈಗೂಡಿಸಿಕೊಂಡು ಈ ಭಾಗದ ಹೆಮ್ಮೆಯ ಪುತ್ರರಾಗಿದ್ದು ಸದಾ ಸಮಾಜ ಸೇವೆಗೆ ನಿಂತಿರುವುದು ನಿಜಕ್ಕೂ ಹೆಮ್ಮೆಯ ವಿಷಯ.

ಬೀದರ ಜಿಲ್ಲೆಯಲ್ಲಿ ಶೈಕ್ಷಣಿಕ ಹೆದ್ದಾರಿಗಳನ್ನು ನಿರ್ಮಿಸಿಕೊಟ್ಟಿರುವ ಹೆಚ್.ಕೆ.ಇ. ಸಂಸ್ಥೆಯ ಬಿ.ವಿ.ಭೂಮರೆಡ್ಡಿ ಕಾಲೇಜು. ಈ ಸಂಸ್ಥೆಗೆ ಡಾ. ಬಸವರಾಜ ಜಿ. ಪಾಟೀಲ ಅವರು ಆಡಳಿತ ಮಂಡಳಿಯ ಸದಸ್ಯರಾಗಿ ಅನೇಕ ಸಲ ಆಯ್ಕೆಯಾಗುವ ಮೂಲಕ ಬಿ.ವಿ.ಭೂಮರೆಡ್ಡಿ ಕಾಲೇಜನ್ನು ತುಂಬಾ ಅಭಿವೃದ್ಧಿಗೊಳಿಸಿದ್ದಾರೆ. ಇಲ್ಲಿ ಓದಿರುವ ಅನೇಕ ವಿದ್ಯಾರ್ಥಿಗಳು ತಮ್ಮ ತಮ್ಮ ಬದುಕನ್ನು ರೂಪಿಸಿಕೊಂಡು ಜೀವನ ನಿರ್ವಹಿಸುತ್ತಿದ್ದಾರೆ. ಈ ಕಾಲೇಜನ್ನು ಕಾಲಕಾಲಕ್ಕೆ ಅಭಿವೃದ್ಧಿಗೊಳಿಸಿ, ಆಧುನಿಕ ತಂತ್ರಜ್ಞಾನವನ್ನೊಳಗೊಂಡಂತೆ ಶಿಕ್ಷಣದ ಗುಣಮಟ್ಟ ಬದಲಾವಣೆಗೂ ಕಾರಣೀಭೂತರಾಗಿದ್ದಾರೆ.

ಅದರ ಜೊತೆ ಜೊತೆಗೆ ಕೆ.ಆರ್.ಇ. ಸಂಸ್ಥೆಯ ಅಧ್ಯಕ್ಷರಾಗಿಯೂ ಅನೇಕ ವರುಷಗಳಿಂದ ಸೇವೆ ಸಲ್ಲಿಸುತ್ತಿರುವ ಅವರು ಅಲ್ಲಿಯೂ ಕೂಡ ಮಹತ್ತರ ಬದಲಾವಣೆಗಳ ಮೂಲಕ ಅತ್ಯುತ್ತಮ ಕೆಲಸ ಕಾರ್ಯಗಳನ್ನು ನಿರ್ವಹಿಸಿ ಸದಾ ಸೈ ಎನಿಸಿಕೊಂಡಿದ್ದಾರೆ. ಶೈಕ್ಷಣಿಕವಾಗಿ ಈ ಭಾಗದ ಉನ್ನತಿಗೆ ಸದಾ ಕ್ರಿಯಾಶೀಲ ಮನಸ್ಥಿತಿಯೊಂದಿಗೆ ಕೆಲಸ ಮಾಡುವ ಶ್ರೀ ಬಸವರಾಜ ಜಿ. ಪಾಟೀಲರ ಕರ್ತೃತ್ವ ಶಕ್ತಿಯಿಂದಾಗಿ ಈ ಸಂಸ್ಥೆಯೂ ಅನೇಕ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ನಾಡಿಗೆ ನೀಡಿದೆ ಎನ್ನುವುದು ಸಂತೋಷದ ಸಂಗತಿಯೇ ಸರಿ. ಕ.ರಾ.ಶಿ. ಸಂಸ್ಥೆಗೆ ಸೇರಿದ ಕರ್ನಾಟಕ ಫಾರ್ಮಸಿ ಕಾಲೇಜಿನ ಆವರಣದಲ್ಲಿ ಉತ್ತಮ ಒಳಾಂಗಣ ಕ್ರೀಡಾಂಗಣ ಕಟ್ಟಿಸಿದ್ದಾರೆ.

ಡಾ. ಬಸವರಾಜ ಜಿ. ಪಾಟೀಲ್, ರವರು ತಮ್ಮ ಶೈಕ್ಷಣಿಕ ಸೇವೆಯ ಜೊತೆ ಜೊತೆಗೆ ನಾಡು, ನುಡಿ, ನೆಲ, ಜಲ, ಸಾಹಿತ್ಯ, ಸಂಸ್ಕೃತಿಯ ಬಲವರ್ಧನೆಗೂ ಸದಾ ಕಾಲ ಕೈಜೋಡಿಸುತ್ತಾರೆ. ಅನೇಕ ಬಡಮಕ್ಕಳಿಗೆ ಉಚಿತ ಶಿಕ್ಷಣವನ್ನೂ ನೀಡಿರುವುದಲ್ಲದೆ ಅವರ ಬದುಕು ರೂಪಿಸುವ ಮತ್ತು ಅವಶ್ಯಕತೆ ಇರುವಲ್ಲಿ ದಾನ ಧರ್ಮಾದಿಗಳನ್ನು ಕೊಡಮಾಡಿದ ಪಾಟೀಲರದ್ದು ನಿಜಕ್ಕೂ ಕೊಂಡಾಡಬಹುದಾದ ಕಾರ್ಯಗಳಿವೆ. ಅವರಲ್ಲಿರುವ ಸರಳ ಮತ್ತು ಸಹಜ ಜೀವನ, ಮತ್ತು ಹೃದಯ ಶ್ರೀಮಂತಿಕೆಯೇ ಅವರನ್ನು ಈ ಎತ್ತರಕ್ಕೆ ತಂದು ನಿಲ್ಲಿಸಿವೆ ಎಂದರೆ ತಪ್ಪಾಗಲಿಕ್ಕಿಲ್ಲ.

ಡಾ.ಬಸವರಾಜ ಜಿ. ಪಾಟೀಲರವರ ಶೈಕ್ಷಣಿಕ ಮತ್ತು ಸಮಾಜ ಸೇವೆ ಹೀಗೆಯೇ ಮುಂದುವರೆಯಲಿ, ಅವರಿಂದಾಗಿ ಕಲ್ಯಾಣ ಕರ್ನಾಟಕದಲ್ಲಿನ ಶೈಕ್ಷಣಿಕ ಅಭಿವೃದ್ಧಿಗೆ ಇನ್ನಷ್ಟು ವೇಗ ಸಿಗಲಿ ಎಂದು ಹಾರೈಸುತ್ತೇನೆ.

ಪ್ರಭು ಬಿ. ಚವ್ಹಾಣ್



ಈಶ್ವರ್ ಬಿ. ಖಂಡ್ರೆ, ಬಿ.ಇ.
ಶಾಸಕರು, ಭಾಲ್ಕಿ

ಭಾಲ್ಕಿ (ಮನೆ : 08484-262270
ಮೊ : 94481 31606

ದಿನಾಂಕ : 15-09-2021

ಸದಾಶಯ ನುಡಿ

ಆದರ್ಶ, ಸರಳ ಸಜ್ಜನಿಕೆಗೆ ಹೆಸರಾದ ಡಾ. ಬಸವರಾಜ ಜಿ.ಪಾಟೀಲ ಅಷ್ಟೂರ ಅವರದ್ದು ಅಪರೂಪದ ವ್ಯಕ್ತಿತ್ವ, ನನಗೆ ತೀರಾ ಆಪ್ತರು. ರಾಜಕಾರಣದಲ್ಲಿದ್ದರೂ ರಾಜಕೀಯ ಮಾಡದ ಶುದ್ಧ ಹಸ್ತದ ಮಹಾಮುತ್ಸದ್ದಿಗಳವರು. ಬಸವಾದಿ ಶರಣರ ಜಾತ್ಯತೀತ ನಿಲುವು,ದಾಸೋಹ ಜೀವನ, ಕಾಯಕ ನಿಷ್ಠತೆ, ಪ್ರಾಮಾಣಿಕತೆಗಳೆ ಜೀವನ ಮೌಲ್ಯವೆಂದು ನಂಬಿ ನಿಜಾಚರಣೆಯಲ್ಲಿ ತಂದವರು. ಶಿಕ್ಷಣದಲ್ಲಿ ಬದಲಾವಣೆ ಆಗಬೇಕು, ಬಡವರಿಗೆ, ದೀನ-ದಲಿತರಿಗೆ, ಮಹಿಳೆಯರಿಗೆ ಹೀಗೆ ಎಲ್ಲ ವರ್ಗದವರಿಗೂ ಗುಣಾತ್ಮಕ ಶಿಕ್ಷಣ ಸಿಗಬೇಕೆಂಬ ಸದಾಶಯದಿಂದ ನಾಲ್ಕು ದಶಕಗಳ ಅವರ ಸಾಮಾಜಿಕ, ಶೈಕ್ಷಣಿಕ ಸೇವೆ ಅನುಪಮವಾದದ್ದು. ಬೀದರನಲ್ಲಿ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಹಾಗೂ ಬಿ.ವಿ. ಭೂಮರೆಡ್ಡಿ ಕಾಲೇಜಿನ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಇವರದ್ದು ಸಿಂಹ ಪಾಲು. ಪಾಟೀಲವರ ೪೦ ವರ್ಷಗಳ ಪ್ರಗತಿಯ ಸಾಧನೆ ಸಾಮಾನ್ಯ ಸಂಗತಿಯಲ್ಲ. ಅಂತೆಯೆ ಶೈಕ್ಷಣಿಕ, ಸಾಂಸ್ಕೃತಿಕ ಚಿಂತಕರಾದ ಡಾ. ಬಸವರಾಜ ಜಿ.ಪಾಟೀಲ ಅಷ್ಟೂರ ಅವರ ಜೀವನ ಸಾಧನೆ ಕುರಿತು ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಾಂಸ್ಕೃತಿಕ ಚಿಂತಕರ ಮಾಲಿಕೆಯಲ್ಲಿ ಪುಸ್ತಕ ತರಲು ಮುಂದಾಗಿದ್ದು ಅಭಿನಂದನಾರ್ಹ ಸಂಗತಿ. ಇದೊಂದು ಅಕ್ಷರ ರೂಪದ ಸಾಂಸ್ಕೃತಿಕ ದಾಖಲೆ. ಯಾವತ್ತು ಹೊಸತನ್ನು ಆಲೋಚಿಸುವ ಮತ್ತು ಅದನ್ನು ಕಾರ್ಯರೂಪಕ್ಕೆ ತರುವ ಪಾಟೀಲರು ಹಲವಾರು ವಿಧಾಯಕ ಕಾರ್ಯ ಮಾಡುತ್ತಿದ್ದಾರೆ. ಈ ಕೃತಿಯ ಮೂಲಕ ಅವರ ಜೀವನ ಸಾಧನೆ ಇತರರಿಗೂ ಸತ್ಪ್ರೇರಣೆಯಾಗಲಿ. ಅವರಿಂದ ಇನ್ನಷ್ಟು ಈ ಭಾಗದ ಶೈಕ್ಷಣಿಕ ಅಭಿವೃದ್ಧಿಯಾಗಲಿ. ಅವರ ಬದುಕು ಹಸನಾಗಿ ಎಲ್ಲಾ ಯಶಸ್ಸು ದೊರೆಯಲೆಂದು ಶುಭ ಹಾರೈಸುವೆ.

ಈಶ್ವರ ಬಿ. ಖಂಡ್ರೆ
ಕಾರ್ಯಾಧ್ಯಕ್ಷರು
ಕ.ಪ್ರ.ಕಾಂ.ಸ., ಬೆಂಗಳೂರು,
ಶಾಸಕರು, ಭಾಲ್ಕಿ

Res : Flot No. 103, 1st Flooor, 1st Block, Krishna Appartment
Ali Asker Road, Bangalore - 560 052



ಬಾಬು ವಾಲಿ (ಲಿಂಗಪ್ಪಾ)
ಅಧ್ಯಕ್ಷರು
ಬೀದರ ನಗರಾಭಿವೃದ್ಧಿ ಪ್ರಾಧಿಕಾರ
ಉದಗೀರ ರಸ್ತೆ, ನೌಬಾದ,
ಬೀದರ–585402

Babu Wali (Lingappa)
Chairman
Bidar Urban Development Authority Bidar
Udgir Road, Naubad, Bidar-585402 (K.S.)

ಸದಾಶಯ ನುಡಿ

ಆದರಣೀಯ ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ ಅವರು ಒಬ್ಬ ಸಜ್ಜನ ಶಿಕ್ಷಣ ಪ್ರೇಮಿ. ಕಲ್ಯಾಣ ಕರ್ನಾಟಕದಲ್ಲಿ ಚಿರ ಪರಿಚಿತರು ಸ್ನೇಹ ಜೀವಿ ಇವರ ಪ್ರಾಮಾಣಿಕ ಶಿಕ್ಷಣ ಸೇವೆಯಿಂದ ನಮ್ಮ ಜಿಲ್ಲೆ ಶ್ರೀಮಂತವಾಗಿದೆ.

ಕನ್ನಡ ನಾಡು ನುಡಿಗೆ ಇವರ ಸಹಾಯ ಸದಾ ಸ್ಮರಣೀಯ, ಗಡಿ ಜಿಲ್ಲೆ ಬೀದರ ಮಹಾರಾಷ್ಟ್ರ, ತೆಲಂಗಾಣ ಪ್ರದೇಶಕ್ಕೆ ಹೊಂದಿಕೊಂಡಿದ್ದು ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಬಿ.ವಿ.ಬಿ. ಮಹಾವಿದ್ಯಾಲಯ ಬೀದರ ಜಿಲ್ಲೆಯನ್ನು ರಾಜಕೀಯವಾಗಿ ಧಾರ್ಮಿಕವಾಗಿ, ಸಾಮಾಜಿಕವಾಗಿ ಎಷ್ಟೊ ಜನರನ್ನು ನಾಡಿನ ಸೇವೆಗೆ ನೀಡಿದ ಕಾಲೇಜು. ಇದರ ಆಡಳಿತ ಮಂಡಳಿ ಸದಸ್ಯರಾಗಿ ಸೋಲಿಲ್ಲದ ಸರದಾರ ಡಾ. ಬಸವರಾಜ ಪಾಟೀಲ ಅಷ್ಟೂರ ಅವರು.

ಕೆ.ಆರ್.ಈ. ಶಿಕ್ಷಣ ಸಂಸ್ಥೆ ಅಧ್ಯಕ್ಷರಾಗಿ ತಮ್ಮ ಶೈಕ್ಷಣಿಕ ಕ್ಷೇತ್ರದ ಅನುಭವದಿಂದ ಆಧುನಿಕರಿಸಿ ಅಭಿವೃದ್ಧಿಗೊಳಿಸಿ ಪಾರದರ್ಶಕ ಆಡಳಿತ ನೀಡಿ ಇತಿಹಾಸ ಸೃಷ್ಟಿಸಿದ್ದು, ಡಾ. ಅಷ್ಟೂರ ಅವರು.

ಡಾ. ಬಸವರಾಜ ಪಾಟೀಲ ಅಷ್ಟೂರ ಅವರ ಒಡನಾಟ ನನಗೆ ವಿದ್ಯಾರ್ಥಿ ಜೀವನದಿಂದಲೇ ಬಂತು.

ಬಿ.ವ್ಹಿ.ಬಿ. ಮಾಹಾವಿದ್ಯಾಲಯದಲ್ಲಿ ನಾನು ಡಿಗ್ರಿ ಓದುವಾಗ ಅಂದಿನಿಂದ ಇಂದಿಗೂ ನಮ್ಮ ಒಡನಾಟ, ಆತ್ಮೀಯತೆ ಅವರ ಮಾರ್ಗದರ್ಶನ ಸದಾ ನಮ್ಮ ಮೇಲಿದೆ. ಇವರ ಸಹಕಾರದಿಂದ ನನ್ನ ಎಷ್ಟೋ ಗೆಳೆಯರಿಗೆ ಆಪ್ತರಿಗೆ ಜೀವನೋಪಾಯ ಸಿಕ್ಕಿದೆ. ಎಷ್ಟೋ ಜನರ ಬಾಳಿನ ದೀಪ ಬೆಳಗಿಸಿದ್ದು ಸ್ಮರಿಸಬೇಕು. ನೇರ ನಡೆ ನುಡಿ, ಸತ್ಯಕ್ಕೆ ಇವರು ಕನ್ನಡಿ ಇದ್ದಂತೆ.

ವಚನ ಕ್ರಾಂತಿ ಕನ್ನಡ ದಿನ ಪತ್ರಿಕೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿ ಅವರು ನನ್ನನು ಹಾರೈಸಿದ ಆಶೀರ್ವಾದಿಂದ ನಮ್ಮ ಪತ್ರಿಕೆಗೆ ಅವರು ಇಂದಿಗೂ ಅಧಾರ ಸ್ಥಂಬವಾಗಿ ಹಿರಿಯರಾಗಿ ನಮ್ಮ ಸರ್ವತೋಮುಖ ಅಭಿವೃದ್ಧಿಗೆ ಇವರ ಅರ್ಶಿವಾದವಿದೆ. ೧೭ನೇ ಸಾಹಿತ್ಯ ಸಮ್ಮೇಳನದ ನಿಮಿತ್ಯ ಪ್ರಕಟಸಲಿರುವ ಸಾಹಿತ್ಯ ಮಾಲೆಯಲ್ಲಿ ಡಾ. ಬಸವರಾಜ ಪಾಟೀಲ ಹೆಸರಿನ ಆಯ್ಕೆ ಅರ್ಥಪೂರ್ಣವಾಗಿದೆ. ಎಂದು ಹೇಳಲು ವಚನ ಕ್ರಾಂತಿ ಕನ್ನಡ ಪ್ರಾದೇಶಿಕ ದಿನ ಪತ್ರಿಕೆ ಸಂಪಾದಕರಾಗಿ ಹೇಳಲು ನಾನು ಹರ್ಷಿಸುತ್ತೇನೆ.

ಬಾಬು ವಾಲಿ (ಲಿಂಗಪ್ಪಾ)
ಅಧ್ಯಕ್ಷರು
ಬೀದರ ನಗರಾಭಿವೃದ್ಧಿ ಪ್ರಾಧಿಕಾರ, ಬೀದರ

Tele : 08482-232707 (O), Cell : 9448114413 (P)
Email Id : babuwali123@ gmail.com(P) Email Id : udabidar@gmail.com (O)

ಲಿಂ. ಶ್ರೀ ಗುಣವಂತರಾವ
ಲಿಂ. ಶ್ರೀಮತಿ ಗಂಗಮ್ಮ



ಡಾ. ಬಸವರಾಜ ಜಿ. ಪಾಟೀಲ ಅವರ
ತಂದೆ ತಾಯಿಯವರು



ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ

ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ



ಶ್ರೀಮತಿ ಉಮಾದೇವಿ ಅವರೊಂದಿಗೆ ಮದುವೆ ೨೯.೧೨.೧೯೮೩

ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ ಅವರ ಸುಖಿ ಪರಿವಾರ



ಪತ್ನಿ ಶ್ರೀಮತಿ ಉಮಾದೇವಿ
ಮಗಳು ಶ್ರದ್ಧಾ, ಮಗ ಅರವಿಂದ.
ಮೊಮ್ಮಕ್ಕಳು ಆರವ್, ಅದ್ವಿಕ್.

ವಿದ್ಯಾರ್ಥಿ ಜೀವನ



ಹೌಸ್ ಸರ್ಜನ್ ಚುನಾವಣೆಯಲ್ಲಿ ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ ಆಯ್ಕೆ



ವಿದ್ಯಾರ್ಥಿ ಯುನಿಯನ್ ಉಪಾಧ್ಯಕ್ಷರಾಗಿ ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ



ವೈದ್ಯರುಗಳ ಉಪವಾಸ ಸತ್ಯಾಗ್ರಹ



ಖಾಸಗಿ ವೈದ್ಯಕೀಯ ಕಾಲೇಜು ವಿರುದ್ಧ
ರೈಲು ರೋಕೋ ಆಂದೋಲನ



ಖಾಸಗಿ ವೈದ್ಯಕೀಯ ಕಾಲೇಜು ವಿರುದ್ಧ ಜನಪರ
ಹೋರಾಟಕ್ಕಾಗಿ ಪೋಲೀಸರಿಂದ ಭಂಧನ



ಖಾಸಗಿ ವೈದ್ಯಕೀಯ ಕಾಲೇಜು ವಿರುದ್ಧ ಜನಪರ ಹೋರಾಟಕ್ಕಾಗಿ
ಜೈಲಿನಲ್ಲಿ ವಾಸ



ಡಾ. ಪಿ.ಎಸ್ ಶಂಕರ ಅವರಿಗೆ ಡಾ. ಬಸವರಾಜ ಜಿ. ಪಾಟೀಲ ಅಷ್ಟೂರವರಿಂದ ಸನ್ಮಾನ




ಅಂತರ್‌ರಾಷ್ಟ್ರೀಯ ಸರ್ಜನ್ ಅಧಿವೇಶನ
ಡಾ. ನರಸಣಗಿ ಅವರೊಂದಿಗೆ ಪಶುಪತಿ ದೇವಾಲಯ ಖಟ್ಮಂಡು

ವಿದೇಶ ಪ್ರವಾಸ




ರಷ್ಯಾದಲ್ಲಿ



ಹಾಂಗ್‌ಕಾಂಗ್‌ನಲ್ಲಿ



ಸಿಂಗಾಪೂರ ಪ್ರವಾಸ



ಮನೇಲಾ ಪ್ರವಾಸ.

ಕರ್ನಾಟಕದ ಮುಖ್ಯ ಮಂತ್ರಿಗಳೊಂದಿಗೆ



ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪ.



ಮಾಜಿ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ಹಾಗೂ
ಮಾಜಿ ಸಚಿವರಾದ ಬಂಡೆಪ್ಪಾ ಖಾಶೆಂಪೂರ ಅವರೊಂದಿಗೆ



ಮಾಜಿ ಮುಖ್ಯಮಂತ್ರಿ ಶ್ರೀ ಜಗದೀಶ ಶೆಟ್ಟರ್ ಹಾಗೂ
ಬೀದರ ಜಿಲ್ಲಾ ಉಸ್ತುವಾರಿ ಮಂತ್ರಿ
ಶ್ರೀ ಪ್ರಭು ಚವ್ಹಾಣ ಅವರೊಂದಿಗೆ



ಮಾಜಿ ಮುಖ್ಯ ಮಂತ್ರಿ ಶ್ರೀ ಸದಾನಂದ ಗೌಡ ಅವರೊಂದಿಗೆ.



ಮಾಜಿ ಮುಖ್ಯಮಂತ್ರಿ ಶ್ರೀ ಎನ್ ಧರ್ಮಸಿಂಗ್ ಅವರಿಗೆ ಸನ್ಮಾನ



ಮಾಜಿ ಮುಖ್ಯಮಂತ್ರಿ ಶ್ರೀ ಜಗದೀಶ ಶೆಟ್ಟರ್,
ಕೇಂದ್ರ ಸಚಿವ ಶ್ರೀ ಅನಂತ ಕುಮಾರ,
ಬೀದರ ಮಾಜಿ ಶಾಸಕ ಶ್ರೀ ರಮೇಶಕುಮಾರ ಪಾಂಡೆ ಇತರರು.



ಮಾಜಿ ಪ್ರಧಾನಿ, ಶ್ರೀ ಎಚ್.ಡಿ. ದೇವೇಗೌಡ ಅವರಿಗೆ
ಪೊಲ್ಯುಷನ್ ಟ್ರೀಟ್‌ಮೆಂಟ್ ಪ್ಲಾಂಟ್‌ಗಾಗಿ ಮನವಿ
ಬಸವರಾಜ ಪಾಟೀಲ ಅಟ್ಟೂರ,
ಶ್ರೀ ಗುರುಪಾದಪ್ಪಾ ನಾಗಮಾರಪಳ್ಳಿ ಇತರರು.



ಕೇಂದ್ರ ನವೀಕರಿಸಬಹುದಾದ ಇಂಧನ ಮೂಲ
ಹಾಗೂ ರಾಸಾಯನಿಕ ಮತ್ತು ರಸಗೊಬ್ಬರ ರಾಜ್ಯಸಚಿವರಾದ
ಶ್ರೀ ಭಗವಂತ ಖೂಬಾ ಅವರಿಗೆ ಕ.ರಾ.ಶಿ. ಸಂಸ್ಥೆಯಿಂದ ಸನ್ಮಾನ



ಎಂ.ಎಲ್.ಎ ಚುನಾವಣೆ ನಾಮಪತ್ರ ಸಲ್ಲಿಕೆ.



ಎಂ.ಎಲ್ ಸಿ ಚುನಾವಣೆಗಾಗಿ ನಾಮ ಪತ್ರ ಸಲ್ಲಿಕೆ.




ಮಾಜಿ ಶಿಕ್ಷಣ ಸಚಿವರಾದ ಶ್ರೀ ಎಚ್. ವಿಶ್ವನಾಥ,
ಎಂ.ಜಿ.ಮುಳೆ ಅವರೊಂದಿಗೆ.



ಮಾಜಿ ಸಚಿವರುಗಳಾದ ಶ್ರೀ ಬಸವರಾಜ ಪಾಟೀಲ ಹುಮನಾಬಾದ,
ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ ಶ್ರೀ ಬಂಡೆಪ್ಪಾ ಖಾಶೆಂಪುರ



ಮಾಜಿ ಸಚಿವರಾದ ಶ್ರೀ ಬಸವರಾಜ ಪಾಟೀಲ ಹುಮನಾಬಾದ,
ಕೇಂದ್ರ ಸಚಿವರಾದ ಅನ್ಸಾರಿ ಅವರೊಂದಿಗೆ.



ಮಾಜಿ ಆರೋಗ್ಯ ಸಚಿವರಾದ
ಡಾ.ಎ.ಬಿ ಮಾಲಕರೆಡ್ಡಿ ಅವರೊಂದಿಗೆ.



ಕೋಟಿ ವೃಕ್ಷ ಆಂದೋಲನ : ಸಂಸದರಾದ
ಶ್ರೀ ಭಗವಂತ ಖೂಬಾ ಅವರೊಂದಿಗೆ



ಕೇಂದ್ರ ಸಚಿವೆ ಶ್ರೀಮತಿ ಉಮಾಭಾರತಿ ಅವರೊಂದಿಗೆ,



ಕೇಂದ್ರ ಸಚಿವ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ.

ಐ.ಎಂ.ಎ (**I.M.A**) ಕಟ್ಟಡ ಉದ್ಘಾಟನೆ



ಐ.ಎಂ.ಎ (**I.M.A**) ಕಟ್ಟಡ ಉದ್ಘಾಟನೆ ಸಮಾರಂಭ ಡಾ.ಬಿ.ಜಿ. ಜವಳಿ, ಸಾರಿಗೆ ಸಚಿವರಾಗಿದ್ದ ಶ್ರೀ ಭೀಮಣ್ಣಾ ಖಂಡ್ರೆ



ಸಂಸದರಾದ ಡಾ.ಬಿ.ಜಿ.ಜವಳಿ, ಸಾರಿಗೆ ಸಚಿವರಾದ ಶ್ರೀ ಭೀಮಣ್ಣಾ ಖಂಡ್ರೆ ಅವರೊಂದಿಗೆ,

ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಕಾರ್ಯಚಟುವಟಿಕೆಗಳು



ಮಾಜಿ ಕೇಂದ್ರ ಸಚಿವರಾದ ಡಾ. ಸುಬ್ರಮಣಿಯನ್ ಸ್ವಾಮಿ, ಹಾಗೂ
ಸಂಸದ ಶ್ರೀ ಭಗವಂತ ಖೂಬಾ



ಮಾಜಿ ಕೇಂದ್ರ ಸಚಿವರಾದ ಡಾ. ಸುಬ್ರಮಣಿಯನ್ ಸ್ವಾಮಿ,
ಹಾಗೂ ಶ್ರೀ ಬಿ.ಜಿ. ಶೆಟಕಾರ



NAAC ರಾಷ್ಟ್ರೀಯ ವಿಚಾರ ಸಂಕಿರಣ
NCTE ದೆಹಲಿಯ ಅದ್ಯಕ್ಷರಾದ
ಪ್ರೊ. ಸಂತೋಷ ಪಾಂಡಾ ಅವರೊಂದಿಗೆ



NAAC ರಾಷ್ಟ್ರೀಯ ವಿಚಾರ ಸಂಕಿರಣ
NAAC ಬೆಂಗಳೂರು ಸಂಯೋಜಕರಾದ
ಡಾ. ಸುಜಾತಾ ಶಾನಭಾಗ ಅವರೊಂದಿಗೆ



ರಸಾಯನ ಶಾಸ್ತ್ರ ವಿಭಾಗದ ರಾಷ್ಟ್ರೀಯ ವಿಚಾರ ಸಂಕಿರಣ
ಸೊಲಾಪೂರ ವಿಶ್ವವಿದ್ಯಾಲಯದ
ಕುಲಪತಿಗಳಾದ ಪ್ರೊ. ಎನ್.ಎನ್. ಷಾ ಅವರಿಗೆ ಸನ್ಮಾನ



ಸಸ್ಯ ಶಾಸ್ತ್ರ - ರಸಾಯನ ಶಾಸ್ತ್ರ ವಿಭಾಗದ ರಾಷ್ಟ್ರೀಯ ವಿಚಾರ ಸಂಕಿರಣ
ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ
ಪ್ರೊ. ಎಸ್.ಆರ್. ನಿರಂಜನ ಅವರೊಂದಿಗೆ



ಗಣಕ ವಿಜ್ಞಾನ ಅಂತರ್‌ರಾಷ್ಟ್ರೀಯ ಸಮ್ಮೇಳನ
ಉದ್ಘಾಟನಾ ಸಮಾರಂಭ



ಗಣಕ ವಿಜ್ಞಾನ ಅಂತರ್‌ರಾಷ್ಟ್ರೀಯ ಸಮ್ಮೇಳನ
ಪ್ರೊ. ಯುಜಿನ ಎನ್.ಐ.ಹೆಚ್. ಅಮೇರಿಕಾ,
ಪ್ರೊ. ಅಣ್ಣ ನಾಸಾ ಯುಎಸ್‌ಎ. ಅವರೊಂದಿಗೆ




ವಿಧಾನ ಪರಿಷತ್ ಸದಸ್ಯರಾದ ಶ್ರೀ ಅಮರನಾಥ ಪಾಟೀಲ
ಅವರ ಎಂ.ಎಲ್.ಸಿ ಅನುದಾನ 10 ಲಕ್ಷ ರೂಪಾಯಿ ಧನ ಸಹಾಯದೊಂದಿಗೆ
ಕೌಶಲ್ಯ ಅಭಿವೃದ್ಧಿ ಕೇಂದ್ರದ ಉದ್ಘಾಟನಾ ಸಮಾರಂಭ



ಬಾಟನಿಕಲ್ ಗಾರ್ಡನ್ ಉದ್ಘಾಟನೆ



ಎನ್.ಪಿ.ಟಿ.ಇ.ಎಲ್., ಐಐಟಿ. ಮದ್ರಾಸ್ ಸಹಯೋಗದಲ್ಲಿ
ಕಾರ್ಯಗಾರ
ಶ್ರೀಮತಿ ಭಾರತಿ ಬಾಲಾಜಿ ಐಐಟಿ. ಮದ್ರಾಸ್ ಅವರಿಗೆ ಸನ್ಮಾನ



ಪಾಚಿ ವೈವಿಧ್ಯತೆ ಅನ್ವೇಷಣೆಯಲ್ಲಿ ಫೋಲ್ಡ್‌ಸ್ಕೋಪ್
ಉಪಯೋಗ ಕಾರ್ಯಗಾರ
ಕಲಕತ್ತಾ ವಿಶ್ವವಿದ್ಯಾಲಯದ ಡಾ. ರುಮಾಪಾಲ ಅವರಿಗೆ ಸನ್ಮಾನ



ಅಂತರ್‌ರಾಷ್ಟ್ರೀಯ ಉಪನ್ಯಾಸ ಕಾರ್ಯಕ್ರಮ
ಡಾ॥ ಸಂತೋಷ ಕೆ.ಸಿ. ಡಕೋಟ ವಿಶ್ವವಿದ್ಯಾಲಯ ಅಮೇರಿಕಾ
ಅವರೊಂದಿಗೆ



ಮಾನವ ಹಕ್ಕುಗಳ ಶಿಕ್ಷಣ ವಿಶೇಷ ಕಾರ್ಯಗಾರ
ನ್ಯಾಯಮೂರ್ತಿ ಶ್ರೀ ಜೀವನರಾವ ವಿ. ಕುಲಕರ್ಣಿ ಹೆಚ್ಚುವರಿ ಸಿವಿಲ್ ನ್ಯಾಯಾದೀಶರವರಿಗೆ ಸನ್ಮಾನ
ಮಾನವ ಹಕ್ಕುಗಳ ರಕ್ಷಣಾ ಸಂಘ ಉಡುಪಿ ಅಧ್ಯಕ್ಷ ಡಾ॥ ರವೀಂದ್ರನಾಥ ಶಾನಭಾಗ
ಅವರೊಂದಿಗೆ



ಅಂತರ್‌ರಾಷ್ಟ್ರೀಯ ಸಮ್ಮೇಳನ
ಪ್ರೊ. ಯುಜಿನ ಎನ್.ಐ.ಹೆಚ್. ಅಮೇರಿಕಾ,
ಪ್ರೊ. ವಿಟೊ ಅಂಟೋನಿಯೋ ಇಟಲಿ
ಪ್ರೋ. ಅತುಲ್‌ನೇಗಿ ಹೈದ್ರಾಬಾದ ಅವರೊಂದಿಗೆ



ಜಿಲ್ಲಾಧಿಕಾರಿ ಡಾ. ಹೆಚ್.ಆರ್.ಮಹಾದೇವ ಅವರ ಮೂಲಕ
ಕೋವಿಡ್ ಪರಿಹಾರ ನಿಧಿಗೆ ಕ.ರಾ.ಶಿ. ಸಂಸ್ಥೆ ವತಿಯಿಂದ ರೂ. 5 ಲಕ್ಷ ದೇಣಿಗೆ
ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ, ಶ್ರೀ ಬಸವರಾಜ ಜಾಬಶೆಟ್ಟಿ,
ಶ್ರೀ ಪ್ರಭುಶೆಟ್ಟಿ ಮುದ್ದಾ, ಡಾ. ಚನ್ನಬಸಪ್ಪಾ ಹಾಲಹಳ್ಳಿ,



ಅಮಾನ್ಯೀಕರಣ ಸಂವಾದ ಕಾರ್ಯಕ್ರಮ
ಮೈಸೂರು ಸಂಸದ ಶ್ರೀ ಪ್ರತಾಪಸಿಂಹ ಅವರಿಗೆ ಸನ್ಮಾನ



ಅಂತರ್‌ರಾಷ್ಟ್ರೀಯ ಹಿಂದಿ ಸಮ್ಮೇಳನ
ಪ್ರೊ. ವಿಷ್ಣುಲಾಲ ಕಮಲ್ ನೇಪಾಲ್ ಅವರೊಂದಿಗೆ



ರಾಷ್ಟ್ರೀಯ ಶಿಕ್ಷಣ ನೀತಿ 2020 ರಾಷ್ಟ್ರಮಟ್ಟದ ವಿಚಾರ ಸಂಕಿರಣ ಉದ್ಘಾಟನೆ
ಗುಲಬರ್ಗಾ ವಿಶ್ವವಿದ್ಯಾಲಯ ಕುಲಪತಿಗಳಾದ ಪ್ರೊ. ದಯಾನಂದ್ ಅಗಸರ ಅವರಿಂದ

ಕರಾಶಿ. ಸಂಸ್ಥೆಯ ಕರ್ನಾಟಕ ಕಾಲೇಜು ಸುವರ್ಣ ಮಹೋತ್ಸವ ಸಮಾರಂಭ



ಸುವರ್ಣ ಮಹೋತ್ಸವ ಸ್ಮರಣಾರ್ಥ ಪಿ.ಜಿ. ಬ್ಲಾಕ್ ಕಟ್ಟಡ ಉದ್ಘಾಟನೆ ಶ್ರೀ ಈಶ್ವರ ಖಂಡ್ರೆ



ಸುವರ್ಣ ಮಹೋತ್ಸವ ಸಮಾರಂಭ ಉದ್ಘಾಟನೆ ಪೂಜ್ಯಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳು, ಶ್ರೀ ಈಶ್ವರ ಖಂಡ್ರೆ



ಕರಾಶಿ ಸಂಸ್ಥೆ ಅಧ್ಯಕ್ಷರಾದ ಡಾ. ಬಸವರಾಜ ಜಿ. ಪಾಟೀಲ್ ಅವರಿಂದ ಅಧ್ಯಕ್ಷತೆ ನುಡಿ

ಕರ್ನಾಟಕ ಪದವಿ ಪೂರ್ವ ಕಾಲೇಜು ಸುವರ್ಣ ಮಹೋತ್ಸವ



ಕರ್ನಾಟಕ ಪದವಿ ಪೂರ್ವ ಕಾಲೇಜು ಸುವರ್ಣ ಮಹೋತ್ಸವ ಸ್ಮರಣಾರ್ಥ ನೂತನ ಕಟ್ಟಡ



ಕರ್ನಾಟಕ ಪದವಿ ಪೂರ್ವ ಕಾಲೇಜು ನೂತನ ಕಟ್ಟಡದ ಬಸವ ಪೂಜೆ ಡಾ. ಬಸವರಾಜ ಜಿ. ಪಾಟೀಲ ಅವರಿಂದ



ಪ.ಪೂ.ಕಾ.ನೂತನ ಕಟ್ಟಡ ಉದ್ಘಾಟನೆ ಉನ್ನತ ಶಿಕ್ಷಣ ಸಚಿವ ಡಾ. ಅಶ್ವಥ್‌ನಾರಾಯಣ್‌ರವರಿಂದ

ಸುವರ್ಣ ಮಹೋತ್ಸವ ಸ್ಮರಣಾರ್ಥ ವಿವಿಧ ಕಟ್ಟಡಗಳ ಉದ್ಘಾಟನೆ



ಕರ್ನಾಟಕ ಪ.ಪೂ. ಕಾಲೇಜು ಉದ್ಘಾಟನೆ ಉನ್ನತ ಶಿಕ್ಷಣ ಸಚಿವ ಡಾ. ಅಶ್ವಥ್‌ನಾರಾಯಣ್‌ರವರಿಂದ



ಕ.ರಾ.ಶಿ. ಸಂಸ್ಥೆಯ ಪರೀಕ್ಷಾ ಭವನ ಉದ್ಘಾಟನೆ ಕೇಂದ್ರ ಸಚಿವರಾದ ಶ್ರೀ ಭಗವತ್ ಖೂಬಾರವರಿಂದ



ಕ.ರಾ.ಶಿ. ಸಂಸ್ಥೆಯ ವಾಣಿಜ್ಯ ಸಂಕೀರ್ಣ ಉದ್ಘಾಟನೆ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಪ್ರಭು ಬಿ. ಚವ್ಹಾಣ್ ಅವರಿಂದ

ಸುವರ್ಣ ಮಹೋತ್ಸವ ಸಮಾರಂಭ



ಉದ್ಘಾಟನಾ ಸಮಾರಂಭ ಉನ್ನತ ಶಿಕ್ಷಣ ಸಚಿವ ಡಾ. ಅಶ್ವಥ್‌ನಾರಾಯಣ್ ಹಾಗೂ ಗಣ್ಯರಿಂದ



ಕರ್ನಾಟಕ ಪದವಿ ಪೂರ್ವ ಕಾಲೇಜು ಸುವರ್ಣ ಮಹೋತ್ಸವ ಸ್ಮರಣಸಂಚಿಕೆ ಬಿಡುಗಡೆ




ಕ.ರಾ.ಶಿ. ಸಂಸ್ಥೆಯ ಅಧ್ಯಕ್ಷರಾದ ಡಾ. ಬಸವರಾಜ ಜಿ. ಪಾಟೀಲ್ ಅಷ್ಟೂರ್ ಅವರಿಗೆ ಅಭಿಮಾನಿಗಳಿಂದ ಸನ್ಮಾ

ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಕಾರ್ಯಚಟುವಟಿಕೆಗಳು



ನ್ಯಾಷನಲ್ ಇಂಗ್ಲಿಷ ಮಾಧ್ಯಮ ಶಾಲೆ ಉದ್ಘಾಟನಾ ಸಮಾರಂಭ.
ನಗರಾಡಳಿತ ಸಚಿವರಾದ ಶ್ರೀ ಈಶ್ವರ ಖಂಡ್ರೆ,
ಹೈ.ಕ.ಶಿ.ಸಂಸ್ಥೆ ಅಧ್ಯಕ್ಷರಾದ ಶ್ರೀ ಬಸವರಾಜ ಭೀಮಳ್ಳಿ
ಬೀದರ ಶಾಸಕ ರಹೀಂ ಖಾನ್ ಅವರೊಂದಿಗೆ



ಬಿ.ವಿ.ಬಿ. ಕಾಲೇಜಿನ ಸುವರ್ಣ ಮಹೋತ್ಸವ ಸಮಾರಂಭ
ಮುಖ್ಯ ಮಂತ್ರಿ ಎನ್. ಧರ್ಮಸಿಂಗ್ ಅವರಿಗೆ ಸನ್ಮಾನ.

ಹೈ.ಕ.ಶಿ. ಸಂಸ್ಥೆಯ ಬಿ.ವಿ.ಬಿ. ಕಾಲೇಜಿನ ಕಾರ್ಯಚಟುವಟಿಕೆಗಳು



ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರ್ಗಿಯ ಕುಲಪತಿಗಳಾದ
ಪ್ರೊ. ಎಸ್.ಆರ್. ನಿರಂಜನ್, ಹಾಗೂ ಕುಲ ಸಚಿವ (ಮೌ) ಡಾ.ಸಿ.ಎಸ್ ಪಾಟೀಲ,
ಪ್ರಾಚಾರ್ಯ ಡಾ. ಎಸ್.ಕೆ. ಸಾತನೂರ ಅವರೊಂದಿಗೆ



ಅಂತರ್‌ರಾಷ್ಟ್ರೀಯ ವಿಚಾರ ಸಂಕೀರ್ಣ
ಉದ್ಘಾಟನಾ ಸಮಾರಂಭ



ಅಂತರ್‌ರಾಷ್ಟ್ರೀಯ ವಿಚಾರ ಸಂಕೀರ್ಣ
ವಿಶೇಷ ಸಂಚಿಕೆ ಬಿಡುಗಡೆ



ಅಂತರ್‌ರಾಷ್ಟ್ರೀಯ ಸಮ್ಮೇಳನ
ಹೈ.ಕ.ಶಿ.ಸಂ., ಅಧ್ಯಕ್ಷರಾದ ಡಾ. ಭಿಮಾಶಂಕರ ಬಿಲಗುಂದಿ,
ಉಪಾಧ್ಯಕ್ಷರಾದ ಡಾ. ಶಿವಾನಂದ ದೇವರಮನಿ,
ಸಂಸದ ಶ್ರೀ ಭಗವಂತ ಖೂಬಾ ಅವರೊಂದಿಗೆ



ಭೌತ ಶಾಸ್ತ್ರ ಹಾಗೂ ಸಂಬಂಧಿತ ವಿಜ್ಞಾನಗಳ
ಅಂತರ್‌ರಾಷ್ಟ್ರೀಯ ವಿಚಾರ ಸಂಕೀರ್ಣ
ಸಮಾರೋಪ ಸಮಾರಂಭ



ಗುಲಬರ್ಗಾ ವಿಶ್ವ ವಿದ್ಯಾಲಯ ಕುಲಪತಿ
ಡಾ. ಬಿ.ಜಿ.ಮೂಲಿಮನಿ ಅವರಿಗೆ ಗೌರವ ಸನ್ಮಾನ.



ಅಖಿಲ ಕರ್ನಾಟಕ ರಾಷ್ಟ್ರೀಯ ಮಕ್ಕಳ ವಿಜ್ಞಾನ ಅಧಿವೇಶನದಲ್ಲಿ
ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ ರವರು



ಬಿ.ವ್ಹಿ.ಬಿ. ಕಾಲೇಜು ಸುವರ್ಣ ಮಹೋತ್ಸವ
ಕರ್ನಾಟಕ ರಾಜ್ಯ ಡಿ.ಜಿ.ಪಿ. ಶ್ರೀ ರಾಘವೇಂದ್ರ ಔರಾದಕರ ಅವರೊಂದಿಗೆ.



ಹೈ.ಕ ಶಿಕ್ಷಣ ಸಂಸ್ಥೆಯ ಬಸವೇಶ್ವರ ಶಿಕ್ಷಣ ಕಾಲೇಜಿನ
ಅಗ್ರಶ್ರೇಣಿಯ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ,
ಡಾ. ಮಲ್ಲಿಕಾರ್ಜುನ ಕನಕಟ್ಟೆ, ಡಾ. ಬಸವರಾಜ ಜಿ. ಪಾಟೀಲ ಇತರರು



ಎಫ್.ಪಿ.ಎ.ಐ ಉಪಾಧ್ಯಕ್ಷರಾದ ಇ.ಎನ್ ಲಾಲಾ ಅವರೊಂದಿಗೆ.

ಶರಣ ಸಂಸ್ಕೃತಿ ಉತ್ಸವ ಚಿತ್ರದುರ್ಗ
ಡಾ. ಶಿವಮೂರ್ತಿ ಮುರುಘಾ ಶರಣರಿಂದ



ಡಾ. ಬಸವರಾಜ ಪಾಟೀಲ ಅಷ್ಟೂರ ಅವರಿಗೆ

ವೈದ್ಯಶ್ರೀ ಪುರಸ್ಕಾರ.



ಪೂಜ್ಯ ಶ್ರೀ ಮೌನ ತಪಸ್ವಿ ಜಡೆ ಶಾಂತಲಿಂಗೇಶ್ವರ ಸ್ವಾಮಿಜಿ ಅವರಿಗೆ ತುಲಾಭಾರ ಸಮಾರಂಭ.



ಚಿತ್ರದುರ್ಗ ಡಾ. ಶಿವಮೂರ್ತಿ ಮುರುಘಾ ಶರಣರು ಡಾ. ಬಸವರಾಜ ಜಿ.ಪಾಟೀಲ ಅಷ್ಟೂರ ಅವರ ಕುಟುಂಬದ ಸದಸ್ಯರೊಂದಿಗೆ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬೀದರ
ಕಾರ್ಯಕಾರಿ ಸಮಿತಿ
ಅಧ್ಯಕ್ಷರು
ಸುರೇಶ ಚನಶೆಟ್ಟಿ

ಗೌರವಾಧ್ಯಕ್ಷರು
ಪಂಚಾಕ್ಷರಿ ಪುಣ್ಯಶೆಟ್ಟಿ

ಗೌರವ ಕಾರ್ಯದರ್ಶಿ
ಡಾ.ಬಸವರಾಜ ಬಲ್ಲೂರ
ಡಾ. ರಾಜಕುಮಾರ ಹೆಬ್ಬಾಳೆ

ಗೌರವ ಕೋಶಾಧ್ಯಕ್ಷರು
ಟಿ.ಎಂ.ಮಚ್ಚೆ

ಉಪಾಧ್ಯಕ್ಷರು
ಜಯದೇವಿ ಯದಲಾಪೂರೆ
ವಿಜಯಕುಮಾರ ಗೌರೆ,
ವಿರೂಪಾಕ್ಷ ಗಾದಗಿ

ಮಹಿಳಾ ಪ್ರತಿನಿಧಿ
ಕಸ್ತೂರಿ ಪಟಪಳ್ಳಿ

ಮಹಿಳಾ ಸಾಹಿತಿ
ಮೇನಕಾ ಪಾಟೀಲ

ಮಹಿಳಾ ಘಟಕ ಅಧ್ಯಕ್ಷರು
ಜಯಶ್ರೀ ಸುಕಾಲೆ

ಮಕ್ಕಳ ಘಟಕ ಅಧ್ಯಕ್ಷರು
ರಜಿಯಾ ಬಳಬಟ್ಟಿ

ಪರಿಶಿಷ್ಟ ಜಾತಿ ಪ್ರತಿನಿಧಿ
ಡಾ.ಮಲ್ಲಿಕಾರ್ಜುನ ನಿಂಗದಳ್ಳಿ

ಪರಿಶಿಷ್ಟ ಪಂಗಡ ಪ್ರತಿನಿಧಿ
ಡಾ. ರಾಜಕುಮಾರ ಅಲ್ಲೂರೆ

ಸಂಘ ಸಂಸ್ಥೆ ಪ್ರತಿನಿಧಿ
ಸುಬ್ರಹ್ಮಣ್ಯ ಪ್ರಭು

ಜಿಲ್ಲಾ ವಾರ್ತಾಧಿಕಾರಿ
ಗವಿಸಿದ್ದಪ್ಪ ಹೊಸಮನಿ

ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು
ಸಿದ್ರಾಮ ಸಿಂಥೆ

ನಿಕಟಪೂರ್ವ ಅಧ್ಯಕ್ಷರು
ಪ್ರೊ. ಸಿದ್ರಾಮಪ್ಪ ಮಾಸಿಮಾಡೆ

ಜಿಲ್ಲಾ ಶಿಕ್ಷಣಾಧಿಕಾರಿ
ಡಾ. ಮಹಮದ್ ಗುಲ್ಷನ್

ಗಡಿ ಪ್ರತಿನಿಧಿ
ಪ್ರೊ. ಶಿವಕುಮಾರ ಕಟ್ಟೆ
ವಸಂತ ಹುಣಸನಾಳೆ,

ಸಂಚಾಲಕರು
ಶಿವಶಂಕರ ಟೋಕರೆ

ಅಧ್ಯಕ್ಷರು
ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು
ಎಂ. ಎಸ್. ಮನೋಹರ, ಬೀದರ
ಜಗನ್ನಾಥ ಮೂಲಗೆ, ಔರಾದ
ಸಚ್ಚಿದಾನಂದ ಮಠಪತಿ, ಹುಮನಾಬಾದ
ಡಾ. ರುದ್ರಮಣಿ ಮಠಪತಿ,
ಬಸವಕಲ್ಯಾಣ
ಶಶಿಧರ ಕೊಸಂಬೆ ಭಾಲ್ಕಿ
ಪ್ರಶಾಂತ ಮಠಪತಿ ಕಮಾಲನಗರ
ಡಾ. ಶಿವಲೀಲಾ ಮಠಪತಿ, ಹುಲಸೂರ
ಅನಿಲಕುಮಾರ ಸಿಂಥೆ, ಚಿಟಗುಪ್ಪ

ಸಂಘಟನಾ ಕಾರ್ಯದರ್ಶಿ
ಉಮಾಕಾಂತ ವಾರದ,
ಶಾಂತಲಿಂಗ ಮಠಪತಿ
ವೀರಶೆಟ್ಟಿ ಪಟ್ನೆ

ಗೌರವ ಸಲಹೆಗಾರರು
ಡಾ. ಬಸವರಾಜ ಪಾಟೀಲ ಅಷ್ಟೂರ
ಬಿ. ಜಿ. ಶಟಕಾರ
ಪ್ರಭುರಾವ ವಸಮತೆ
ಗುರುನಾಥ ಕೊಳ್ಳೂರ
ರೇವಣಸಿದ್ಧಪ್ಪ ಜಲಾದೆ
ರಮೇಶ್ ಮಠಪತಿ
ಕಾಶಪ್ಪಾ ಬಾಲಕಿಲೆ
ಶರಣಪ್ಪಾ ಮಿಠಾರೆ
ವೈಜಿನಾಥ ಕಮಠಾಣೆ
ಬಸವರಾಜ ಧನ್ನೂರ
ಡಾ.ಜಗನ್ನಾಥ ಹೆಬ್ಬಾಳೆ

ಪ್ರೊ. ಎಸ್. ವಿ. ಕಲ್ಮಠ
ಶಂಭುಲಿಂಗ ಕಾಮಣ್ಣಾ
ರಾಜಕುಮಾರ ಪಾಟೀಲ ಬಗದಲ್
ಶಿವಕುಮಾರಸ್ವಾಮಿ
ಎಸ್.ಎಮ್. ಜನವಾಡಕರ್
ಡಾ.ಮನ್ಮಥ ಡೋಳೆ
ಶಿವಯ್ಯಾ ಸ್ವಾಮಿ
ಝೂಕೀರ ಹುಸೇನ್

ವಿಶೇಷ ಆಹ್ವಾನಿತರು
ರಾಜೆಂದ್ರಕುಮಾರ ಗಂದಗೆ
ಡಾ. ಸಿ. ಆನಂದರಾವ
ಬಾಲಾಜಿ ಬಿರಾದಾರ
ಹಣಮಂತಪ್ಪ ಮೈಲಾರೆ
ಓಂಕಾಂತ ಸುರ್ಯವಂಶಿ
ಪಾಂಡುರಂಗ ಬೆಲ್ದಾರ್
ರವೀಂದ್ರ ರೆಡ್ಡಿ
ಡಾ. ಬಂಡಯ್ಯಾ ಸ್ವಾಮಿ

ಕಾರ್ಯಕಾರಿ ಸದಸ್ಯರು
ಜಗನ್ನಾಥಕಮಲಾಪೂರೆ
ಯೋಗೇಶ ಮಠ
ಸಚೀನ ವಿಶ್ವಕರ್ಮ
ದೇವೆಂದ್ರ ಕರಂಜೆ
ಅನೀಲಕುಮಾರ ದೇಶಮುಖ
ಸಿದ್ದಾರೂಢ ಕಂದಗೂಳ
ಶಿವಾನಂದ ಪಾಟೀಲ
ಅಶೋಕ್ ದಿಡಿಗೆ
ಸಿದ್ಧರೂಢ ಭಾಲ್ಕೆ
ಆನಂದ ಪಾಟೀಲ

ಮುನ್ನುಡಿ

ಸಾಹಿತ್ಯವು ಯಾವಾಗಲೂ ಒಂದು ವಿಶಿಷ್ಟ ಅನುಭವ ಪರಂಪರೆಯನ್ನು ನಮ್ಮ ಮುಂದೆ ತಂದು ಸಲ್ಲಿಸುತ್ತದೆ. ಒಂದು ಕೃತಿಯನ್ನು ಓದುತ್ತಿದ್ದಂತೆ ಅದರ ಅನುಭವಗಳು ನಮ್ಮೊಳಗೆ ಸೇರಿಕೊಳ್ಳುತ್ತ, ಅಲ್ಲಿನ ಅನುಭವ ಸಾರ್ವತ್ರಿಕರಣಗೊಳ್ಳುತ್ತ ಹೋಗುತ್ತದೆ. ಸಾಹಿತ್ಯಕೃತಿ ನಮ್ಮನ್ನು ತಟ್ಟಬೇಕು ಎಂದರೆ ಅಲ್ಲಿನ ಅನುಭವಗಳು ಗಾಢವಾಗಿರಬೇಕು, ಅಲ್ಲಿನ ಸೃಜನಶೀಲತೆಯ ಸೆಲೆಗಳು ನಮ್ಮನ್ನು ಸೆಳೆಯುವಂತೆ ಇರಬೇಕು. ಆ ಕೃತಿ ತನ್ನ ಸುತ್ತಲಿನ ಜೀವನವನ್ನು, ಪರಿಕರಗಳನ್ನು ಒಳಗೊಂಡಿದ್ದಾಗ ಇದು ಸಾಧ್ಯವಾಗುತ್ತದೆ.

ತಲೆ ತಲಾಂತರಗಳಿಂದ ಕೆಲವರು ನಾಡು, ನುಡಿ, ಕಲೆ, ಸಾಹಿತ್ಯ, ಸಂಸ್ಕೃತಿ, ಜಲ, ಜನ ಸಮುದಾಯವನ್ನು ತಮ್ಮದೇ ರೀತಿಯಲ್ಲಿ ಶ್ರೀಮಂತಗೊಳಿಸಲು ಶ್ರಮಿಸಿರುತ್ತಾರೆ. ಅವರ ಶ್ರಮ ಮುಂದಿನ ತಲೆಮಾರಿಗೆ ತಿಳಿಯದೆ ಹೋಗಬಾರದು. ಜನ ಸಮುದಾಯದ ಶ್ರೇಯಸ್ಸಿಗೆ ಅವರುಕೊಟ್ಟ ಕೊಡುಗೆಯನ್ನು ಜನ ನೆನಪಿಸಿಕೊಳ್ಳುವಂತೆ ಆಗಬೇಕು, ಹಾಗೆ ನೆನಪಿಸಿಕೊಂಡರೆ ಅದು ಒಂದು ಸಮುದಾಯದಲ್ಲಿ ಇರುವ, ಇರಬೇಕಾದ ಕೃತಜ್ಞತೆಯ ಕುರುಹು.

ಬೀದರ್ ಜಿಲ್ಲೆಯಲ್ಲಿ ಅಂಥ ಹಿರಿಯರ ಕೊಡುಗೆಯನ್ನು ದಾಖಲು ಮಾಡುವ ಕಾರ್ಯ ನಡೆದು ಅದು ಇದೀಗ ಕಾರ್ಯರೂಪಕ್ಕೆ ಬಂದಿರುವುದು ಶ್ಲಾಘನೀಯ ಕೆಲಸ. ಬೀದರ್ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀ ಸುರೇಶ ಚನ್ನಶೆಟ್ಟಿಯವರಿಗೆ ಇಂಥ ವಿಚಾರವೊಂದು ಹೊಳೆದು ಅದನ್ನು ಅವರು ಸ್ವಯಂಸ್ಫೂರ್ತಿಯಿಂದ ಕೈಗೆತ್ತಿಕೊಂಡಿದ್ದಾರೆ.

ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ಅವರ ಜೀವಿತಾವಧಿಯಲ್ಲಿಯೇ ಅವರು ಪ್ರತಿಪಾದಿಸಿದ ಜೀವನಮೌಲ್ಯಗಳನ್ನು ಅಕ್ಷರರೂಪಕ್ಕೆ ಇಳಿಸಬೇಕು ಎಂದು ಅವರು ಒಂದು ಯೋಜನೆಯನ್ನೂ ರೂಪಿಸಿದರು.

ಅದಕ್ಕೆ ಪೂರಕವಾಗಿ 'ಸಾಂಸ್ಕೃತಿಕ ಚಿಂತಕರು' ಎಂಬ ಸರಣಿಯಲ್ಲಿ ೧೭ ಜನ ಸಾಧಕರನ್ನು ಕುರಿತು ಅಷ್ಟೇ ಸಂಖ್ಯೆಯ ಲೇಖಕಿಯರು ಕೃತಿ ರಚಿಸಿದ್ದಾರೆ. ಅದರ ಜೊತೆಗೆ ಜಿಲ್ಲೆಯಲ್ಲಿ 'ಕನ್ನಡ ಕಟ್ಟಿದವರು' ಕುರಿತ ಸರಣಿಯಲ್ಲಿ ೧೭ ಜನ ಸಾಧಕರ ಬಗೆಗೆ ಅಷ್ಟೇ ಸಂಖ್ಯೆಯ ಬರಹಗಾರರು ಕೃತಿಗಳನ್ನು ರಚಿಸಿದ್ದಾರೆ. ಇದೆಲ್ಲ ಆಗಿರುವುದು ಜಿಲ್ಲೆಯ ೧೭ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಂಗವಾಗಿ ಎಂಬುದು ಇಲ್ಲಿ ಉಲ್ಲೇಖನಾರ್ಹ.

ಇದು ಒಂದು ಅಪರೂಪದ ದಾಖಲೆಯ ಕಾರ್ಯ; ನಮ್ಮ ಸಮಾಜದ ಏಳಿಗೆಗೆ ದುಡಿದ ಮಹನೀಯರನ್ನು, ಮಹಿಳೆಯರನ್ನು ನೆನಪಿಸಿಕೊಳ್ಳುವ ಕಾರ್ಯ. ಆದರೆ, ಇದು ಕೇವಲ ಒಂದು ದಾಖಲೀಕರಣದ ಕೆಲಸ ಮಾತ್ರ ಅನಿಸದೇ ಆಸಕ್ತರು ಈ ಕೃತಿಗಳನ್ನು ಓದಿದರೆ ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಹಾಗೂ ಪದಾಧಿಕಾರಿಗಳ ಕಾರ್ಯ ಸಾರ್ಥಕ ಎನಿಸುತ್ತದೆ. ಇದಕ್ಕಾಗಿ ದುಡಿದ ಎಲ್ಲರಿಗೂ ನನ್ನ ಅಭಿನಂದನೆಗಳು.

ನಾಡೋಜ ಡಾ. ಮನು ಬಳಿಗಾರ್

ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಅಕ್ಷರ ಪ್ರೀತಿಯ ನುಡಿ
(ಪ್ರಕಾಶಕರ ಮಾತು)

ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆ ಹಾಗೂ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯ ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿ ಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ.

ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು,

ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ. ಬಹುಮುಖ್ಯವಾಗಿ ಸ್ಥಳೀಯ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಅನೇಕ ಮಹನೀಯರ ಪರಿಶ್ರಮವಿದೆ. ಸಮಾಜೋಸಾಂಸ್ಕೃತಿಕ ಏಳಿಗೆಗಾಗಿ ತಮ್ಮನ್ನು ಗಂಧದ ಕೊರಡಂತೆ ಸವೆಸಿಕೊಂಡಿದ್ದಾರೆ. ಅಂಥವರ ಜೀವನ ಸಾಧನೆ ಕಾಲದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ ಸಾಂಸ್ಕೃತಿಕ ಚಿಂತಕರು ಮಾಲಿಕೆ ಆರಂಭಿಸಲಾಗಿದ್ದು ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುವುದು.

ನಮ್ಮ ಮಧ್ಯದ ಉದಯೋನ್ಮುಖ ಸಾಹಿತಿಗಳಾದ **ಶ್ರೀಮತಿ ವಿದ್ಯಾವತಿ ಬಲ್ಲೂರ** ಅವರು ಬರೆದ **ಶಿಕ್ಷಣ ಚಿಂತಕ ಡಾ॥ ಬಸವರಾಜ ಜಿ. ಪಾಟೀಲ ಅಷ್ಟೂರ** ಜೀವನ ಸಾಧನೆ ಎಂಬ ಪುಸ್ತಕ ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. ಡಾ॥ ಬಸವರಾಜ ಜಿ. ಪಾಟೀಲ ಅಷ್ಟೂರ ಅವರು ಈ ಭಾಗದಲ್ಲಿ ಶೈಕ್ಷಣಿಕವಾಗಿ ಬಹುದೊಡ್ಡ ಕ್ರಾಂತಿ ಮಾಡಿರುವರು. ಬಸವ ತತ್ವವನ್ನು ನಿಜಾಚರಣೆಯಲ್ಲಿ ತಂದ ಶ್ರೀಯುತರ ಜೀವನ ಸಾಧನೆ ಕುರಿತ ಚಿಂತನೆ ಮಾಡುವುದು, ಅದನ್ನು ಪುಸ್ತಕ ರೂಪದಲ್ಲಿ ಹೊರತರುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವೆಂದು ಭಾವಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕೈಂಕರ್ಯ ಪೂರೈಸುತ್ತಿದೆ. ಪ್ರಸ್ತುತ ಪುಸ್ತಕಕ್ಕೆ ಮೌಲಿಕ

ಮುನ್ನುಡಿ ಬರೆದು ಕೃತಿಯ ಮೌಲ್ಯ ಹೆಚ್ಚಿಸಿದ ನಾಡೋಜ ಡಾ. ಮನು ಬಳಿಗಾರ ಅವರನ್ನು ತುಂಬು ಹೃದಯದಿಂದ ನೆನೆಯುತ್ತೇವೆ. ಈ ಕೃತಿಯನ್ನು ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಲು ಅನುಮತಿ ನೀಡಿರುವ ಲೇಖಕರಿಗೂ ಮತ್ತು **ಡಾ॥ ಬಸವರಾಜ ಜಿ. ಪಾಟೀಲ ಅಷ್ಟೂರ** ಅವರಿಗೂ ವಿಶೇಷವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೂ ವಂದನೆಗಳು.

ಸುರೇಶ ಚನ್ನಶೆಟ್ಟಿ
ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

ಸಾಂಸ್ಕೃತಿಕ ಚಿಂತಕರು

ಹಿಂದಣ ಹೆಜ್ಜೆಯನರಿತಲ್ಲದೆ ನಿಂದ ಹೆಜ್ಜೆಯನರಿಯಬಾರದೆಂಬ ಅಲ್ಲಮ ಪ್ರಭುದೇವರ ಮಾತು ಇತಿಹಾಸದ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ. ಇತಿಹಾಸವೆಂದರೆ ಕೇವಲ ರಾಜ ಮಹಾರಾಜರ ವೈಭವದ ಬದುಕು, ಕೋಟೆ ಕೊತ್ತಲಗಳೇ ಅಲ್ಲ, ರಾಜ ಪರಿವಾರದ ಪರಿಸರ, ಅರಸರ ಸುತ್ತಲಿನ ಜನ ಸಾಮಾನ್ಯರ ಬದುಕಿನ ಏಳುಬೀಳುಗಳು, ಸಮಕಾಲೀನ, ಕಲೆ, ಸಾಹಿತ್ಯ, ಸಂಸ್ಕೃತಿ ಅವುಗಳ ಬೆಳವಣಿಗೆಗೆ ಪೂರಕವಾದ ಅಂಶಗಳೆಲ್ಲ ಸೇರಿ ಇತಿಹಾಸವಾಗುತ್ತದೆ. ಚಾರಿತ್ರಿಕವಾದ ಒಂದು ಕೋಟೆಗೆ ಎಷ್ಟು ಮಹತ್ವವೋ ಒಂದೂರಿನ ಹಳೆ ವಾಡೆ(ಘೂಡೆ)ಗಳಿಗೂ ಅಷ್ಟೇ ಮಹತ್ವವಿರುತ್ತದೆ. ಒಬ್ಬ ರಾಜ ರಾಣಿಗೆ ಇರುವಷ್ಟೆ ಮಹತ್ವ ಒಂದೂರಿನ ಜನಪರ ಕಾಳಜಿಯ ವ್ಯಕ್ತಿಗಳಿಗೂ ಇರುತ್ತದೆ. ಅಂಥ ಸಾಂಸ್ಕೃತಿಕ ವ್ಯಕ್ತಿಗಳ ಕಾರ್ಯ ಸಾಧನೆ ಕಾಲಗತಿಯಲ್ಲಿ ಮರೆಯಾಗಬಾರದೆಂಬ ಕಾರಣವಾಗಿ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿ ಸಮಾಜಕ್ಕೆ ಬೆಳಕಾದ ಸಾಧಕರ ಜೀವನ ಸಾಧನೆ ದಾಖಲಿಸಬೇಕಾಗಿರುವುದು ಪ್ರಜ್ಞಾವಂತ ಸಮಾಜದ ಹೊಣೆಗಾರಿಕೆ ಎಂದರಿತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ **ಸಾಂಸ್ಕೃತಿಕ ಚಿಂತಕರು ಮಾಲಿಕೆ** ಆರಂಭಿಸಿದೆ. ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುವುದು. ಹಿತ್ತಲ ಗಿಡ ಮದ್ದಲ್ಲ, ತಮ್ಮ ತಮ್ಮ ನೆಲದಲ್ಲಿ ಸಾಧಕರಿಗೆ ಮನ್ನಣೆ ದೊರೆಯಲಾರದು ಎಂಬ ತೆಳು ಗ್ರಹಿಕೆಯ ಮಾತಿವೆ. ಅದನ್ನು ಹುಸಿಗೊಳಿಸಲು ಸಾಧಕರ ಜೀವನ ಚರಿತ್ರೆ ಈ ಯೋಜನೆ ರೂಪಿಸಲಾಗಿದೆ. ಸಾಮಾನ್ಯವಾಗಿ ಜೀವನ ಚರಿತ್ರೆಗಳು ವಿವರಗಳ ಕಟ್ಟಾಗಿರುತ್ತವೆ. ಆದರೆ ಈ

ಮಾಲಿಕೆಯ ಕೃತಿಗಳು ಹಾಗಲ್ಲ. ನಮ್ಮೆಲ್ಲರ ಅಂತಃಶಕ್ತಿ, ಪ್ರೇರಣೆಯಾಗಿದ್ದು, ಸತ್ಯ, ದಕ್ಷತೆ, ಪ್ರಾಮಾಣಿಕತೆ, ಕಾಯಕ ನಿಷ್ಠೆ, ದಾಸೋಹ ಜೀವನ, ಸಮಯ ಪ್ರಜ್ಞೆ ಇವುಗಳಿಗೆ ವ್ಯಾಖ್ಯಾನ ಬರೆದಂತೆ ಬದುಕಿದವರ ಚರಿತ್ರೆಗಳನ್ನು ಆಯ್ದುಕೊಳ್ಳಲಾಗಿದೆ ಇದೊಂದು ಅಪರೂಪದ ಮಾಲಿಕೆ. ಈ ಪುಸ್ತಕಗಳಲ್ಲಿ ಏಕಕಾಲಕ್ಕೆ ಹಲವು ವ್ಯಕ್ತಿಗಳ ಸಂಬಂಧಗಳನ್ನು ಜೋಡಿಸುವ, ಸಮಕಾಲೀನ ಸಾಂಸ್ಕೃತಿಕ ಚಿಂತನೆಗಳನ್ನು ಸಂಕ್ಷಿಪ್ತವಾಗಿ ದಾಖಲಿಸುವ ಮೂಲಕ ಪರಿಪೂರ್ಣ ರೂಪದ ಜೀವನ ಚರಿತ್ರೆ ಕಟ್ಟಿಕೊಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಸಾಧಕರ ಕುರಿತು ಅಧ್ಯಯನ ಮಾಡುವವರಿಗೆ ಈ ಕೃತಿ ಮೂಲ ಆಕರವಾಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

ಡಾ. ಬಸವರಾಜ ಬಲ್ಲೂರ

ನಿವೇದನೆ

ವಸ್ತು ವ್ಯಾಮೋಹದ ಆಧುನಿಕ ಜಗತ್ತು ಸುಖ ಸೌಲತ್ತುಗಳನ್ನು ನೀಡಿ ಜೀವನ ಪ್ರೀತಿ, ಮಾನಸಿಕ ನೆಮ್ಮದಿಯನ್ನು ಕಸಿದುಕೊಂಡಿದೆ. ಮನುಷ್ಯರ ಮಧ್ಯ ಹೊಸ ಕಂದಕಗಳು ಸೃಷ್ಟಿಯಾಗುತ್ತಿವೆ. ಈ ಹೊತ್ತಿನಲ್ಲಿ ನಮ್ಮೆಲ್ಲರನ್ನು ಒಂದು ಗೂಡಿಸುವ, ಜೀವನ ಪ್ರೀತಿ, ಮಾನಸಿಕ ನೆಮ್ಮದಿಯನ್ನು ತಂದುಕೊಡುವ ಶಕ್ತಿ ಸಾಹಿತ್ಯಕ್ಕಿದೆ ಎಂದು ನಂಬಿದವಳು ನಾನು. ಜೀವಜಗತ್ತಿನ ಮೂಲ ಧಾತುವೆಂದರೆ ಜೀವನ ಪ್ರೀತಿಯಾಗಿದ್ದು ಅದು ಸಾಹಿತ್ಯ ಮಾತ್ರ ಕಟ್ಟಿಕೊಡುತ್ತದೆ. ಆದ್ದರಿಂದಲೆ ಏನಾದರೂ ಬರೆಯಬೇಕೆಂಬ ತುಡಿತದಲ್ಲಿದ್ದಾಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸಹೋದರ ಸುರೇಶ ಚನ್ನಶೆಟ್ಟಿಯವರು ಸಭೆ ಕರೆದು ಬೀದರ ಜಿಲ್ಲೆಯ ಸಾಂಸ್ಕೃತಿಕ ಚಿಂತಕರ ಬಗ್ಗೆ ಬರೆಯಲು ಹೇಳಿ ಒಂದು ಪಟ್ಟಿ ನೀಡಿದರು. ಬಾಲ್ಯದಿಂದಲೆ ನಾನು ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರವನ್ನು ಅಪಾರವಾಗಿ ಪ್ರೀತಿಸುವುದರಿಂದ ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಕೆಲಸ ಮಾಡುತ್ತಿರುವ **ಶಿಕ್ಷಣ ಚಿಂತಕ ಡಾ॥ ಬಸವರಾಜ ಜಿ. ಪಾಟೀಲ ಅಷ್ಟೂರ** ಅವರ ಬಗ್ಗೆ ಬರೆಯಲು ಒಪ್ಪಿಕೊಂಡೆ.

"ನಹಿ ಜ್ಞಾನೇನ ಸದೃಶಂ" ಎಂಬುದು ವೇದೋಕ್ತಿ, ಅಂದರೆ ಜ್ಞಾನಕ್ಕಿಂತ ಮಿಗಿಲಾದುದು ಯಾವುದೂ ಇಲ್ಲವೆಂದರ್ಥ. ಮನುಷ್ಯರ ಎಲ್ಲ ಸಾಮಾಜಿಕ ಸಮಸ್ಯಗಳಿಗೆ ಜ್ಞಾನ ಮೂಲದ ಶಿಕ್ಷಣವೇ ಪರಿಹಾರ. ಆದರೆ ಕಲ್ಯಾಣ ಕರ್ನಾಟಕವು ಸಾಂಸ್ಕೃತಿಕ ಸಮೃದ್ಧಿ ಪಡೆದರೂ ಆರ್ಥಿಕವಾಗಿ ವಿಶೇಷವಾಗಿ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿ ಹೊತ್ತಿದೆ. ಇದನ್ನು ಅಳಿಸಿ ಹಾಕಲೆಂದು ಕಂಕಣ ಬದ್ಧರಾದವರು ಡಾ॥ ಬಸವರಾಜ ಜಿ. ಪಾಟೀಲ ಅಷ್ಟೂರವರು. ದೀನ ದಲಿತರ, ಬಡವರ ವಿಶೇಷವಾಗಿ ಗ್ರಾಮೀಣ ಪ್ರದೇಶದ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂಬ ಸದಾಶಯದಿಂದ ವೈದ್ಯಕೀಯ ವೃತ್ತಿಯನ್ನು ತೊರೆದು ಶಿಕ್ಷಣ ಸಂಸ್ಥೆಗಳ ಏಳಿಗೆಗೆ ನಿಂತವರು.

ಸ್ವತಃ ಶಿಕ್ಷಣ ಸಂಸ್ಥೆಯನ್ನೂ ತೆರೆದವರು. ಅನೇಕ ಬಡ ವಿದ್ಯಾರ್ಥಿಗಳ ಬದುಕಿಗೆ ಬೆಳಕಾಗಿದ್ದಾರೆ. "ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ ಏಡಿಸಿ ಕಾಡಿತು ಶಿವನ ಡಂಗುರ" ಎನ್ನುವ ಬಸವಣ್ಣನವರ ನುಡಿಗೆ ಬದ್ಧರಾದ ಇವರು ಸಾಮಾಜಿಕ ಶೈಕ್ಷಣಿಕವಾಗಿ ಸಲ್ಲಿಸಿದ ಸೇವೆ, ಅನೇಕರಿಗೆ ಮಾಡಿದ ಸಹಾಯಗಳನ್ನು ಯಾರ ಮುಂದೆಯೂ ಹೇಳಿಕೊಂಡವರಲ್ಲ. ಮಾಡಿದ ಸೇವೆಗೆ ಯಾವತ್ತು ನೆನೆಯದೆ ಅಹಂ ನಿರಸನದ ದಾಸೋಹ ಜೀವಿ. ಸರಳತೆ ಸಜ್ಜನಿಕೆಗಳೆ ಅವರ ಬದುಕಿನ ಅಂತಃಶಕ್ತಿಗಳು. ಅವರ ಬಗ್ಗೆ ಕೇಳಿದ್ದೆ ಆದರೆ ವಿಷಯ ಕಲೆ ಹಾಕಿ ಅಕ್ಷರ ರೂಪಕ್ಕೆ ಇಳಿಸಲು ಅವರ ನೆರವಿನ ಅಗತ್ಯವಿತ್ತು. ಆದರೆ ತುಂಬಾ ಗಂಭೀರವಾಗಿರುವ ಅವರಿಗೆ ಕೇಳುವುದು ಹೇಗೆ ಎಂಬ ಭಯದೊಂದಿಗೆ ದೂರವಾಣಿ ಮೂಲಕ ವಿಷಯ ಪ್ರಸ್ತಾಪಿಸಿದಾಗ ನನ್ನದೇನು ದೊಡ್ಡ ಸಾಧನೆಯಿಲ್ಲ ಸಾಧಕರ ಬಗ್ಗೆ ಬರೆಯಿರಿ ಎಂದರು. ಇಲ್ಲ ಸರ್ ತಮ್ಮ ಬಗ್ಗೆ ಬರೆಯಲು ನಿರ್ಧರಿಸಲಾಗಿದೆ ದಯವಿಟ್ಟು ಮಾಹಿತಿ ನೀಡಬೇಕೆಂಬ ಮನವಿಗೆ ಸ್ಪಂದಿಸಿ ಅತ್ಯಂತ ಆತ್ಮೀಯವಾಗಿ ತಮ್ಮ ಬದುಕಿನ ಎಳೆಗಳನ್ನು ಬಿಚ್ಚಿಟ್ಟರು. ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ ಬದುಕಿನ ಹಲವಾರು ಸಂಗತಿಗಳನ್ನು ಕೇಳಿ ಹೆಮ್ಮೆಯೆನಿಸಿತು. ಅವರ ಸಾಧನೆ ಆಕಾಶದಗಲ, ನಾನು ಬರೆದದ್ದು ಅಂಗೈ ಅಗಲ ಮಾತ್ರ. ತಮ್ಮ ಬಗ್ಗೆ ಬರೆಯಲು ಅನುಮತಿಸಿ ಸಮಗ್ರ ಮಾಹಿತಿ ನೀಡಿದ ಡಾ॥ ಬಸವರಾಜ ಜಿ. ಪಾಟೀಲ ಅಷ್ಟೂರ ಅವರಿಗೆ ನನ್ನ ಮೊದಲ ಕೃತಜ್ಞತೆಗಳು. ಇಂಥ ಬರವಣಿಗೆಗೆ ಅವಕಾಶ ಕಲ್ಪಿಸಿದ ಜಿಲ್ಲಾ ಕಸಾಪ ಅಧ್ಯಕ್ಷರಾದ ಸುರೇಶ ಚನ್ನಶೆಟ್ಟಿಯವರಿಗೆ, ಸಮಕಾಲೀನರ ಅಭಿಪ್ರಾಯ ನೀಡಿ ಪುಸ್ತಕದ ಮೌಲ್ಯ ಹೆಚ್ಚಿಸಿದ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರಿಗೆ, ಮಾಜಿ ಮುಖ್ಯ ಮಂತ್ರಿಗಳಾದ ಜಗದೀಶ ಶೆಟ್ಟರ್, ಹಿರಿಯ ಸಾಹಿತಿ ಪಂಚಾಕ್ಷರಿ ಪುಣ್ಯಶೆಟ್ಟಿ, ಉಸ್ತುವಾರಿ ಸಚಿವರಾದ ಶ್ರೀ ಪ್ರಭು ಚವ್ಹಾಣ್, ಕೇಂದ್ರ ಸಚಿವರಾದ ಶ್ರೀ ಭಗವಂತ ಖೂಬಾ, ಮಾಜಿ ಸಚಿವರು, ಭಾಲ್ಕಿ ಶಾಸಕರಾದ ಶ್ರೀ ಈಶ್ವರ್ ಖಂಡ್ರೆ, ಖ್ಯಾತ ವೈದ್ಯರಾದ ಡಾ. ಚಂದ್ರಕಾಂತ ಗುದಗೆ, ಕರಾಶಿ ಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕರಾದ ಶ್ರೀ ಡಿ.ವಿ. ಸಿಂಧೋಲ,

ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಬಾಬು ವಾಲಿ, ಪ್ರಾಚಾರ್ಯರಾದ ಡಾ. ಎಸ್. ಕೆ. ಸಾತನೂರ, ಚಿಂತಕರಾದ ಶ್ರೀ ರಾಜಶೇಖರ ಜಿ. ಪಾಟೀಲವರಿಗೆ ನನ್ನ ಮೊದಲ ನೆನಹುಗಳು. ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಸಿದ್ದರಾಮ ಪಾರಾ, ಕಾರ್ಯದರ್ಶಿಗಳಾದ ಶ್ರೀ ಬಸವರಾಜ ಜಾಬಶೆಟ್ಟಿ, ಜಂಟೀ ಕಾರ್ಯದರ್ಶಿ ಗಳಾದ ಶ್ರೀ ಬಸವರಾಜ ಪಾಟೀಲ ಕರಡ್ಯಾಳ ಹಾಗೂ ಎಲ್ಲ ಆಡಳಿತ ಮಂಡಳಿ ನಿರ್ದೇಶಕರಿಗೂ, ಅಂಗ ಸಂಸ್ಥೆಯ ಎಲ್ಲ ಮುಖ್ಯಸ್ಥರಿಗೂ, ನ್ಯಾಸದ ಅಧ್ಯಕ್ಷರಾದ ಡಾ. ಚನ್ನಬಸಪ್ಪ ಹಾಲಹಳ್ಳಿಯವರಿಗೂ ಹಾಗೂ ಎಲ್ಲ ಪದಾಧಿಕಾರಿಗಳವರಿಗೂ, ಆತ್ಮೀಯವಾಗಿ ನನ್ನನು ಪರಿಚಯಿಸಿದ ಸಹೋದರಿ ರಜಿಯಾ ಬಳಬಟಿಯುವರಿಗೆ, ಹಿರಿಯುರಾದ ಡಾ. ಮಲ್ಲಿಕಾರ್ಜುನ ಕನಕಟ್ಟೆ ಅವರಿಗೆ, ಆತ್ಮಿಯ ಗೆಳತಿ ಕಸ್ತೂರಿ ಪಟಪಳ್ಳಿ ಒಳಗೊಂಡಂತೆ ಎಲ್ಲ ಸ್ನೇಹ ಬಳಗಕ್ಕೆ ಅಕ್ಷರ ಜೋಡಿಸಿದ ಸೋಮಶೇಖರ ಪಾಟೀಲ ಬಲ್ಲೂರ, ಪಾಂಡುರಂಗ ಕುಂಬಾರ ಅವರಿಗೆ, ಪುಸ್ತಕ ವಿನ್ಯಾಸದ ರವಿಕಾಂತ ವಿ. ಕುಂಬಾರ, ಮುಖಪುಟ ವಿನ್ಯಾಸದ ಅಕ್ಷಯ ಗ್ರಾಫಿಕ್ಸ್ ಮುದ್ರಕರಾದ ವಿಶ್ವಾಸ್ ಪ್ರಿಂಟರ್ಸ್‌ರವರಿಗೂ ಅನಂತ ಧನ್ಯವಾದಗಳು.

ವಿದ್ಯಾವತಿ ಬಲ್ಲೂರ

ಪರಿವಿಡಿ

ಶಿಕ್ಷಣ ಚಿಂತಕ

ಡಾ॥ ಬಸವರಾಜ ಜಿ. ಪಾಟೀಲ ಅಷ್ಟೂರ

ಹಿನ್ನೆಲೆ

ಲೋಕದಂತೆ ಬಾರರು, ಲೋಕದಂತೆ ಇರರು,
ಲೋಕದಂತೆ ಹೋಗರು, ನೋಡಯ್ಯ
ಪುಣ್ಯದಂತೆ ಬಪ್ಪರು, ಜ್ಞಾನದಂತೆ ಇಪ್ಪರು,
ಮುಕ್ತಿಯಂತೆ ಹೋಹರು, ನೋಡಯ್ಯಾ.
ಉರಿಲಿಂಗದೇವಾ, ನಿಮ್ಮ ಶರಣರು ಉಪಮಾತೀತರಾಗಿ
ಉಪಮಿಸಬಾರದು ಉರಿಲಿಂಗದೇವ
(ಸಮಗ್ರ ವಚನ ಸಂಪುಟ: ೬ ವಚನದ ಸಂಖ್ಯೆ: ೧೨೬೦)

ಇದು ಸರ್ವ ಸಮತೆಯನ್ನು ಸಾರಿದ ೧೨ನೆಯ ಶತಮಾನದ ಬಸವಾದಿ ಶರಣರಲ್ಲಿ ಒಬ್ಬರಾದ ಉರಿಲಿಂಗ ದೇವರ ಮಹತ್ವದ ವಚನ. ಜೀವನವೆಂದರೇನು ಎನ್ನುವ ಪ್ರಶ್ನೆಗೆ ಅನೇಕ ರೀತಿಯ ಉತ್ತರಗಳಿವೆ. ಅದರಲ್ಲಿ ಮೈಲಿಗಲ್ಲೂ ಒಂದು ಎಂದು ಹೇಳಬಹುದು. ಒಬ್ಬ ವ್ಯಕ್ತಿ ಸಾಮಾನ್ಯ ಜನರಂತೆ ಬರದೇ, ಸಾಮಾನ್ಯ ಜನರಂತೆ ಹೋಗದೆ ಸಾಮಾನ್ಯರಂತೆ ಇರದೆ, ಪುಣ್ಯದಂತೆ ಬಂದು, ಜ್ಞಾನದಂತೆ ಇದ್ದು, ಮುಕ್ತಿಯಂತೆ ಹೋಗುವಾಗ ತಮ್ಮ ಸಾರ್ಥಕ ಬದುಕಿನ ಸಾಧನೆಯ ಹೊಸ ಮೈಲುಗಲ್ಲು ನಿರ್ಮಿಸಿ ಉಪಮಾತೀತರಾಗುವರು, ಅವರನ್ನು ಉಪಮಿಸಬಾರದೆಂಬ ಎಚ್ಚರಿಕೆಯನ್ನೂ ಈ ವಚನದಲ್ಲಿ ಅಡಕವಾದ ಸಂದೇಶವಾಗಿದೆ. ಅಂಥ ಸಾರ್ಥಕ ಬದುಕನ್ನು

ಸವೆಸುತ್ತಲೆ ಸಾತ್ವಿಕ ಸಂಸ್ಕೃತಿಯನ್ನು ಕಟ್ಟಿಕೊಡುತ್ತಿರುವ ಮಹತ್ವಾಕಾಂಕ್ಷೆಯ ವ್ಯಕ್ತಿಗಳೆಂದರೆ **ಶಿಕ್ಷಣ ಚಿಂತಕ ಡಾ॥ ಬಸವರಾಜ ಜಿ. ಪಾಟೀಲ ಅಷ್ಟೂರ.**

ಈ ಭೂಮಿಯ ಮೇಲಿನ ಎಲ್ಲ ಜೀವ ಜಗತ್ತಿನ ಅಂತಃಶಕ್ತಿಯೆಂದರೆ ಜೀವನ ಪ್ರೀತಿ ಮತ್ತು ಶಾಂತಿ. ಅದು ಉದಾತ್ತ ಸಂಸ್ಕೃತಿಯನ್ನು ಕಟ್ಟಿಕೊಡುತ್ತದೆ. ನಮ್ಮ ಸುತ್ತಲಿನ ಯಾವುದೇ ಜೀವ ಕಾರುಣ್ಯದ ವ್ಯಕ್ತಿ ಕೂಡ ಸಾಂಸ್ಕೃತಿಕ ಬದುಕಿನ ಭಾಗವಾಗಬಹುದು. ಅಂಥ ಸಾಂಸ್ಕೃತಿಕ ವ್ಯಕ್ತಿಗಳಲ್ಲಿ ಬೀದರ ಜಿಲ್ಲೆಯ ಅಷ್ಟೂರ ಗ್ರಾಮದ ಡಾ॥ ಬಸವರಾಜ ಜಿ. ಪಾಟೀಲರು ಒಬ್ಬರು. ಅವರು ಕಳೆದ ನಾಲ್ಕು ದಶಕಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಅವರಲ್ಲಿ ಜೀವನ ಪ್ರೀತಿಯಿದೆ. ಶಾಂತಿಯಿದೆ. ನಿಷ್ಟುರತೆ ಇದೆ. ಕಾಯಕ ನಿಷ್ಠೆ, ದಾಸೋಹ ಭಾವದೊಂದಿಗೆ ಶರಣ ತತ್ವಗಳನ್ನು ಕಾಯಾ, ವಾಚಾ, ಮನಸಾ ಅಳವಡಿಸಿಕೊಂಡ ಅವರು ಈ ಭಾಗದ ಕೇವಲ ವ್ಯಕ್ತಿ ಅಲ್ಲ. ಅವರೊಂದು ಸಾಂಸ್ಕೃತಿಕ ಶಕ್ತಿಯಾಗಿದ್ದಾರೆ. ಮಾತಿಗಿಂತ ಕೃತಿ ಲೇಸು ಎಂದು ನಂಬಿರುವ ಡಾ॥ ಬಸವರಾಜ ಜಿ. ಪಾಟೀಲರದ್ದು ಮಾತು ಬೆಳ್ಳಿ, ಮೌನ ಬಂಗಾರ ಎನ್ನುವಂತೆ. ವಾಸ್ತವವಾಗಿ ಅವರು ಅಂಗೈ ಅಗಲ ಮಾತಾಡುತ್ತಾರೆ.ಆಕಾಶದಗಲ ಕಾಯಕ ಮಾಡುತ್ತಾರೆ. ಪ್ರಚಾರವನ್ನು ಇಷ್ಟ ಪಡದೆ ಯಾವುದನ್ನೂ ಅಪೇಕ್ಷೆ ಪಡೆಯದ ವ್ಯಕ್ತಿತ್ವ ಇವರದು.

ಒಬ್ಬ ವ್ಯಕ್ತಿಯ ವ್ಯಕ್ತಿತ್ವ ರೂಪುಗೊಳ್ಳುವದು ಆ ನೆಲದ ಪರಿಸರ, ಸಂಬಂಧಗಳು ನಡವಳಿಕೆ ಮೊದಲಾದವು ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದದ್ದು ಭೌಗೋಳಿಕ ಪರಿಸರ ಎಂದು ಹೇಳಬಹುದು. ಮನುಷ್ಯ ವ್ಯಕ್ತಿತ್ವ ರೂಪುಗೊಳ್ಳಲು ನೆಲ,ಜಲ,ಗಾಳಿ ಒಳಗೊಂಡ ಒಂದು ನಿರ್ದಿಷ್ಟ ಪ್ರದೇಶದ ಭೌಗೋಳಿಕ ಪರಿಸರ ಬಹುಮುಖ್ಯವಾಗಿ ಕಾರಣವಾಗುತ್ತದೆ. ಅದು ಆಯಾ ಭೌಗೋಳಿಕತೆಯ ಗುಣವೂ ಆಗಿರುತ್ತದೆ. ಕಲ್ಯಾಣ ಕರ್ನಾಟಕ, ಬೀದರ ಜಿಲ್ಲೆಯ ಅಷ್ಟೂರ ಗ್ರಾಮ. ಈ ಗ್ರಾಮವಂತು ದ್ವಿಸಾಂಸ್ಕೃತಿಕವಾಗಿ

ಮಹತ್ವ ಪಡೆದಿದೆ. ಅಂದರೇ ಅಲ್ಲಮಪ್ರಭುವಿನ ಗುಡಿ ಮತ್ತು ದರ್ಗಾ ಕಲಾ ಕೃತಿಯನ್ನೊಳಗೊಂಡ ಬಹುಸಂಸ್ಕೃತಿಯ ಮಹತ್ವ ಹೊಂದಿದೆ. ಹೀಗೆ ಚರಿತೆಯುದ್ದಕ್ಕೂ ಈ ನೆಲದ ನೆಲೆಗಳು ಸಾಂಸ್ಕೃತಿಕ ಮಹತ್ವ ಪಡೆದವುಗಳಾಗಿವೆ. ಈ ಪರಿಸರದಲ್ಲಿ ಬೆಳೆದು ಬಂದವರು ಡಾ॥ ಬಸವರಾಜ ಜಿ. ಪಾಟೀಲರು.

ಹೈದ್ರಾಬಾದ ಕರ್ನಾಟಕ (ಕಲ್ಯಾಣ ಕರ್ನಾಟಕ)ವೆಂದರೆ ಸಮಸ್ತ ಕರ್ನಾಟಕದ ಸಾಂಸ್ಕೃತಿಕ ತಳಹದಿ. ಕನ್ನಡ ಸಾಹಿತ್ಯದ ಮೊದಲ ಉಪಲಬ್ದ ಕೃತಿಗಳಾದ ಕವಿರಾಜಮಾರ್ಗ, ವಡ್ಡಾರಾಧನೆ ಮುಂತಾದ ಶ್ರೇಷ್ಠ ಕೃತಿಗಳನ್ನು ಕೊಟ್ಟಂತಹ ಪುಣ್ಯಭೂಮಿ ಇಡೀ ಜಗತ್ತಿನ ಮಾನವೀಯತೆಗೆ ಮರುವ್ಯಾಖ್ಯಾನ ಬರೆದ ದೇಶಿಚಿಂತಕರು, ಜನಪರ, ಜೀವಪರ ಕಾಳಜಿಯುಳ್ಳಂತಹ ೧೨ನೇ ಶತಮಾನದ ಬಸವಾದಿ ಶರಣರು ವಚನಗಳ ಮೂಲಕ ದೇವಭಾಷೆಯನ್ನು ಜನಭಾಷೆಯನ್ನಾಗಿಸಿದರು, ಜಾತ್ಯತೀತ ಸಮಾಜ ರೂಪಿಸಿದರು. ಅಂಥ ಶರಣರ ಕಾಯಕ ಭೂಮಿಯಿದು. ರಾಷ್ಟ್ರಕೂಟರ ಅಮೋಘವರ್ಷ, ಹೊಸ ಶಕೆ ಪ್ರಾರಂಭಿಸಿದ ಕಲ್ಯಾಣಿ ಚಾಳುಕ್ಯರ ೬ ನೇ ವಿಕ್ರಮಾದಿತ್ಯ ಮೊದಲಾದ ಆಳರಸರು ಬಾಳಿ ಬೆಳಗಿದ್ದು ಇದೆ ನೆಲದಲ್ಲಿ.

ಕಲ್ಯಾಣ ಕರ್ನಾಟಕ (ಹೈದ್ರಾಬಾದ ಕರ್ನಾಟಕ) : ಕಲ್ಯಾಣ ಕರ್ನಾಟಕವು, ಬೀದರ, ಗುಲ್ಬರ್ಗಾ, ರಾಯಚೂರ, ಬಳ್ಳಾರಿ, ಕೊಪ್ಪಳ ಜಿಲ್ಲೆಗಳು ಒಳಗೊಂಡತೆ ಈ ಭಾಗಕ್ಕೆ ಮಹತ್ವದ ಸ್ಥಾನವಿದೆ. ಪ್ರಾಚೀನ ಪರಂಪರೆಯೂ ಹೊಂದಿದ ಈ ಭಾಗ ಒಂದು ಪುಟ್ಟ ಪ್ರಪಂಚದಂತಿದೆ. ಒಂದು ಪ್ರಪಂಚದ ಸಾಮಾನ್ಯ ಲಕ್ಷಷಣಗಳೆಂದರೆ ಅನೇಕ ಭಾಷೆ, ಭಿನ್ನ ವಿಭಿನ್ನ, ಜನಾಂಗ, ಜಾತಿ, ಪಂಥ, ಧರ್ಮ, ಉಡಿಗೆತೊಡಿಗೆ, ಆಹಾರ–ವಿಹಾರ ಪದ್ಧತಿಗಳ ಇಲ್ಲಿನ ಪರಂಪರೆಗಳು ಹೀಗೆ ವೈವಿಧ್ಯತೆಗಳು ಸೇರಿ ಒಂದು ಪ್ರಪಂಚವಾಗುತ್ತದೆ.ಈ ಎಲ್ಲ ವೈವಿಧ್ಯತೆಗಳು ಇಲ್ಲಿವೆ. ಹಾಗಾಗಿ ಈ ಭಾಗ ಬಹುಸಂಸ್ಕೃತಿಯ ಆಗರ.ಇಲ್ಲಿಯ ಜೀವನ ವಿಧಾನ ದೇಶಿಯ

ಬದುಕಾಗಿದೆ.ಮುಗಿಲ ಮಲ್ಲಿಗೆಯ ಬದುಕಲ್ಲ. ಮುಗಿಲಿಗೆ ಒಂದೇ ಬಣ್ಣವಿದ್ದರೆ, ಇಲ್ಲಿರುವವರ ಸಾಂಸ್ಕೃತಿಕ ಬದುಕಿಗೆ ಅನೇಕ ಬಣ್ಣಗಳಿವೆ. ಅನೇಕ ಸಾಂಸ್ಕೃತಿಕ ಆಯಾಮಗಳಿವೆ. ಉತ್ತರ ಕರ್ನಾಟಕವೆಂದೂ ಕರೆಸಿಕೊಳ್ಳುವ ಈ ಭಾಗ ದಕ್ಷಿಣ ಕರ್ನಾಟಕದಷ್ಟು ಸಮಾಜೋರಾಜಕೀಯವಾಗಿ ಪ್ರಗತಿಯ ಪಥದಲ್ಲಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಕಳೆದ ಒಂದು ಸಾವಿರ ವರುಷಗಳಲ್ಲಿ ಮೂರ್‍ನಾಲ್ಕು ಪರಕೀಯರ (ವಸಾಹತು) ಆಳ್ವಿಕೆಗೆ ಒಳಗಾಗಿದೆ. ಇಡೀ ದೇಶಕ್ಕೆ ೧೯೪೭ ರಲ್ಲಿ ಸ್ವಾತಂತ್ರ್ಯ ದೊರೆತರೆ, ಈ ಭಾಗಕ್ಕೆ ೧೯೪೮ರಲ್ಲಿ ಸ್ವಾತಂತ್ರ್ಯವಾಯಿತು. ಹೀಗೆ ಹಲವಾರು ಏಳುಬೀಳುಗಳನ್ನು ಕಂಡರೂ ದೇಶೀಯತೆಯ ಸೊಗಡು ಬಿಟ್ಟು ಕೊಡದೆ ಬದುಕಿ ಬೆಳೆಯುತ್ತಿದೆ.

ಬೀದರ ಜಿಲ್ಲೆ :

ಪ್ರಾಚೀನ ಕಾಲದ ರಾಮಾಯಣ ಮಹಾಭಾರತದಂತಹ ಮಹಾಕಾವ್ಯಗಳಲ್ಲಿ ಬೀದರ ನೆಲದ ಪ್ರಸ್ತಾಪ ಬರುವುದರಿಂದ ಈ ಪ್ರಾಂತದ ಪ್ರಾಚೀನತೆಗೆ ಮಹತ್ವವಿದೆ. ಪ್ರಪಂಚದ ಪ್ರಸಿದ್ಧ 'ಬಿದರಿ' ಕಲೆಯ ಹೆಸರಿನೊಂದಿಗೆ ಗುರುತಿಸಿಕೊಳ್ಳುವ ಬೀದರ ಕರ್ನಾಟಕದ ದಕ್ಷಿಣಕ್ಕೆ ಅಭಿಮುಖವಾದ, ಉತ್ತರಕ್ಕೆ ಕಳಸ ಸದೃಶವಾದ ಕೊನೆಯ ಜಿಲ್ಲೆಯಾಗಿದೆ. ಭೌಗೋಳಿಕವಾಗಿ ಸು, ೫೪೫೮ ಚ.ಕಿ.ಮೀ.ವಿಸ್ತೀರ್ಣವಿರುವ ಬೀದರನ ಜನಸಂಖ್ಯೆ ರಾಜ್ಯದ ಒಟ್ಟು ಜನಸಂಖ್ಯೆಯ ಶೇ. ೨.೮೧ ರಷ್ಟಿದೆ. ೫೪೧ ಹಳ್ಳಿಗಳನ್ನು ಹೊಂದಿರುವ ಜಿಲ್ಲೆಯ ಕೇಂದ್ರ ಸ್ಥಳ ಬೀದರ ಸಮುದ್ರಮಟ್ಟದಿಂದ ಸು.೨೨೦೬ ಅಡಿ ಎತ್ತರ ಹೊಂದಿರುವ ಆರೋಗ್ಯಪೂರ್ಣ ಸಮಶಿತೋಷ್ಣ ತಾಣವಾಗಿದೆ. ಚಾರಿತ್ರಿಕವಾಗಿ ಈ ಜಿಲ್ಲೆಗೆ ಕ್ರಿ.ಪೂ. ೨ನೇ ಶತಮಾನದ ಐತಿಹಾಸಿಕ ಹಿನ್ನಲೆಯಿದ್ದು, ಸಾಮ್ರಾಟ ಮೌರ್ಯರಿಂದ ಹಿಡಿದು ರಂಜೇರಿನ ಸಿಂಧರು, ಶಾತವಾಹನರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಾಕತೀಯರು, ಖಿಲ್ಜಿ, ಬಹಮನಿ, ಮೊಘಲ ಅರಸರ ಆಳ್ವಿಕೆಗೆ ಒಳಪಟ್ಟಿದೆ. ಆಧ್ಯಾತ್ಮಿಕವಾಗಿ ಬೌದ್ಧ, ಜೈನ, ವೈದಿಕ ಹೀಗೆ ಹಲವು ಮತಗಳಿಗೆ ನೆಲೆ

ನೀಡಿದ ಈ ಜಿಲ್ಲೆಯ ಬಹು ದೊಡ್ಡ ಧಾರ್ಮಿಕ ಕೊಡುಗೆ ಇದೆ. ಲಿಂಗಾಯತ ಧರ್ಮದ್ದು. ಸಿಖ್, ಮರಾಠ ಹಾಗೂ ಆರ್ಯಸಮಾಜಕ್ಕೂ ಈ ಜಿಲ್ಲೆಗೂ ಅನನ್ಯವಾದ ನಂಟಿದೆ. ಹೀಗೆ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಸಾಮರಸ್ಯ ಈ ನೆಲದ ಜೀವಾಳವಾಗಿದೆ.ಜನಾಂಗಿಕವಾಗಿ ಹಿಂದೂಗಳು (ಎಲ್ಲ ಪಂಗಡಗಳು ಸೇರಿ) ಮುಸ್ಲಿಮರು, ಕ್ರಿಶ್ಚಿಯನ್ನರು, ಲಿಂಗಾಯತರು ಕುರುಬರು, ಮೊದಲಾದವರೆಲ್ಲ ಇಲ್ಲಿ ಮತೀಯ ಸಾಮರಸ್ಯ ಧರ್ಮ ಸಹಿಷ್ಣುತೆಗೆ ಹೆಸರಾಗಿದ್ದು ಅದು ಅವರ ಅಂತಃಶಕ್ತಿಯಾಗಿದೆ.

ನಮ್ಮ ಕರ್ನಾಟಕ ನೆಲದ ಭಾಷೆ ಮತ್ತು ಮಾತೃ ಭಾಷೆ ಕನ್ನಡವಾಗಿದ್ದರೂ ಪರಕೀಯ ಆಳ್ವಿಕೆಯಿದ್ದಾಗ ಭಾಷಿಕವಾಗಿ ಆಡಳಿತ ನಡೆದದ್ದು ಉರ್ದುವಿನಲ್ಲಿ, ಸೋದರ (ನೆರೆ) ರಾಜ್ಯಗಳ ಭಾಷೆಯಾದ ತೆಲಗು ಮರಾಠಿ ಭಾಷೆ ವ್ಯವಹಾರಕ್ಕೆ ಬಳಕೆಯಾದರೆ, ಹಿಂದಿ ಉಪಭಾಷೆಯಾಗಿ ಬಳಕೆಯಾಗಿದೆ. ಈ ಎಲ್ಲ ವೈವಿಧ್ಯತೆಗಳನ್ನು ಒಡಲೊಳಗಿಟ್ಟುಕೊಂಡಿರುವ ಬಹು ಸಂಸ್ಕೃತಿಯ ಪ್ರತೀಕವಾದ ಬೀದರ ಇಂದು ೮ ತಾಲೂಕುಗಳನ್ನು ಹೊಂದಿದೆ, ಅದರಲ್ಲಿ ಬೀದರ ಜಿಲ್ಲೆಯ ಅಷ್ಟೂರ ಗ್ರಾಮವು ಒಂದು.

ಅಷ್ಟೂರ :

ಧಾರ್ಮಿಕ ಭಾವೈಕ್ಯತೆಯ ಕೇಂದ್ರವಾದ ಅಷ್ಟೂರ ಗ್ರಾಮವು ಸಾಮಾಜಿಕ ಸಾಮರಸ್ಯದ ನೆಲ. ಬಹಮನಿ ಅರಸರ ಗುಂಬಜ್‌ಗಳಿಂದ ಪ್ರಸಿದ್ಧಿ ಪಡೆದರೂ ಅಲ್ಲಮಪ್ರಭು ಗುಂಬಜ್ ಮಾತ್ರ ಹಿಂದೂ ಮುಸಲ್ಮಾನರು ಏಕಭಾವವಾಗಿ ಒಂದೆ ಸ್ಥಳದಲ್ಲಿ ಪೂಜೆ ಸಲ್ಲಿಸುವ ಅಪರೂಪದ ಭಾವೈಕ್ಯದ ಸ್ಥಳವಾಗಿದೆ. ಇಲ್ಲಿ ಪ್ರತಿ ವರ್ಷ ಹುಣ್ಣಿಮೆಯಾದ ಐದು ದಿನಕ್ಕೆ ಜರುಗುವ ಉರುಸ್ ಉತ್ಸವಕ್ಕೆ ಚಾಲನೆ ಸಿಗುವುದು ಕಲಬುರ್ಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಮಾಡ್ಯಾಳದ ಅಲ್ಲಮ ಪ್ರಭುದೇವರ ದೇವಾಲಯದ ಸ್ವಾಮಿಗಳಿಂದ. ಮಾಡ್ಯಾಳದಿಂದ ಗುರುಗಳು ಕುದುರೆ ಸವಾರಿ

ಮಾಡಿಕೊಂಡು, ಭಕ್ತರು ನಂದಿ ಕೋಲು ಹೊತ್ತು ಪಾದಯಾತ್ರೆಯ ಮೂಲಕ ಇಲ್ಲಿ ಬಂದು ಪೂಜೆ ಸಲ್ಲಿಸಿದ ಮೇಲೆ ಉರುಸ್ ಹಬ್ಬ ಆರಂಭವಾಗುವುದು. ಜಗತ್ತಿನಾದ್ಯಂತ ಜರುಗುವ ಉರುಸ್ ಹಬ್ಬಗಳು ಇಸ್ಲಾಂ ಕ್ಯಾಲೆಂಡರ್ ಪ್ರಕಾರ ಜರುಗಿದರೆ ಅಷ್ಟೂರದಲ್ಲಿ ಮಾತ್ರ ಹಿಂದೂ ಕ್ಯಾಲೆಂಡರ್ ಪ್ರಕಾರ ಉರುಸ್ ಹಬ್ಬ ನೆರವೇರುವುದು. ಉರುಸ್ ಎಂದರೆ ಪುಣ್ಯಸ್ಮರಣೆ. ಅದರ ಮೂಲ ಸಂಲಗ್ನ, ಕೂಡುವುದು, ಮದುವೆ ಇತ್ಯಾದಿ ಅರ್ಥಗಳಿವೆ ಉರುಸ್ ಅರ್ಥಾತ್ ದೇವರಲ್ಲಿ ಒಂದಾಗುವುದು ಎಂದರ್ಥ. ಈ ಊರಿನ ಅಲ್ಲಮಪ್ರಭು ಗುಂಬಜ್ ಚಾರಿತ್ರಿಕವಾಗಿ ಮಹತ್ವದ್ದು ಹಾಗೂ ಕುತೂಹಲಕಾರಿಯೂ ಆಗಿದೆ. ಸರ್ವ ಸಮತೆಯ ಸಾರಿದ ೧೨ನೆಯ ಶತಮಾನದ ಬಸವಾದಿ ಶರಣರ ಅನುಭವ ಮಂಟಪ ಶೂನ್ಯ ಪೀಠದ ಅಧ್ಯಕ್ಷ ಅಲ್ಲಮ ಪ್ರಭುಗಳು ದೇಶ ಸಂಚಾರ ಸಂದರ್ಭದಲ್ಲಿ ಅಷ್ಟೂರ ಗ್ರಾಮಕ್ಕೆ ಬಂದು ಊರ ಹೊರವಲಯದಲ್ಲಿ ಕುಳಿತು ಹೋಗಿದ್ದು ಅದೇ ಸ್ಥಳದಲ್ಲಿ ಗದ್ದುಗೆಯೊಂದು ನಿರ್ಮಿಸಲಾದ ಬಗ್ಗೆ ಪ್ರತೀತಿ ಇದೆ. ಮುಂದೆ ಬಹಮನಿ ಸಾಮ್ರಾಜ್ಯದ ಕಾಲಕ್ಕೆ ಕಲಬುರ್ಗಿಯ ಬಂದೆನವಾಜರ ಒಲವು, ಲಿಂಗಾಯತರ ಬಲದಿಂದಾಗಿ ಅಹಮ್ಮದ್ ಶಾಹ ವಲಿಯು ಸಹೋದರನಾದ ಫಿರೋಜಶಹನ ವಿರುದ್ದ ಯುದ್ಧ ಸಾರಿ ಅಷ್ಟೂರದ ಅಲ್ಲಮ ಪ್ರಭುಗಳು ಗದ್ದುಗೆ(ಚಬುತರ)ಗೆ ನಮಸ್ಕರಿಸಿ ಫತೆಪುರದಲ್ಲಿ ಗೆಲುವು ಸಾಧಿಸಿದ ಕಾರಣ ಆ ಸ್ಥಳ ಗೆಲುವಿಗೆ ಕಾರಣವೆಂದಾಯಿತು. ಅಧ್ಯಾತ್ಮಿಕವಾಗಿ ಸೂಫಿ ಬಂದೆ ನವಾಜರ ಒಡನಾಟದ ಸದ್ಗುಣಗಳ ಗಣಿಯಾದ ಅಹಮ್ಮದ್ ಶಾಹ ವಲಿಯು ಸಮಾಧಿಯನ್ನು ಅದೇ ಸ್ಥಳದಲ್ಲಿ ಕಟ್ಟಿದ ಕಾರಣ ಏಕಕಾಲಕ್ಕೆ ಹಿಂದೂ ಮುಸ್ಲಿಂ ಸಮುದಾಯದವರ ಭಾವೈಕ್ಯದ ಕೇಂದ್ರವಾಗಿ ನಾಡಿನ ಜನತೆಗೆ ಸಾಮಾಜಿಕ ಸಾಮರಸ್ಯದ ಪ್ರತೀಕವಾಗಿ ಪರಿಣಮಿಸಿದೆ. ಈ ಗುಂಬಜದಲ್ಲಿ ಬಂಗಾರವನ್ನು ದ್ರವ ರೂಪದಲ್ಲಿ ಬಳಸಿ ಬರೆದ ಬರವಣಿಗೆ ಹಾಗೂ ಚಿತ್ತಾರಗಳಿವೆ. ಈ ಬರವಣಿಗೆ ಕುರಿತು ಇಂಗ್ಲೆಂಡ್ ಮೂಲದ ಹೆಲೆನ್ ಫಿಲೊನ್ ಅವರು ಅಂತರರಾಷ್ಟ್ರೀಯ ಪತ್ರಿಕೆಯೊಂದರಲ್ಲಿ ಲೇಖನ ಕೂಡ ಬರೆದಿದ್ದಾರೆ. ಈ ಪೂಜಾ ಸ್ಥಳದಲ್ಲಿ ಎಂದಿನಂತೆ ಇವತ್ತಿಗೂ ಅದೇ ಸಂಪ್ರದಾಯದೊಂದಿಗೆ ಅರ್ಥಪೂರ್ಣ ಜಾತ್ರೆ ಜರುಗುತ್ತದೆ. ಜಾತ್ರೆಯ

ಕೊನೆ ದಿನ ಜಂಗಿ ಕುಸ್ತಿ ನೋಡುವುದೆ ಒಂದು ಐಭೋಗ. ಮಾಡ್ಯಾಳದಿಂದ ಬರುವ ಗುರುಗಳಿಗೆ ಡಾ॥ ಬಸವರಾಜ ಜಿ. ಪಾಟೀಲರ ಪೂರ್ವಜರ ಕಾಲದಿಂದಲೂ ಅವರ ಮನೆಯಲ್ಲಿಯೇ ಪ್ರಸಾದದ ವ್ಯವಸ್ಥೆ ಮಾಡಲಾಗುವುದು.

ಪೂರ್ವಜರು :

ಕ್ರೀಯಾಶೀಲತೆ, ಉತ್ಸಾಹದ ಪ್ರತೀಕವಾದ ಡಾ॥ ಬಸವರಾಜ ಜಿ. ಪಾಟೀಲರ ಬೆಳವಣಿಗೆ ಹಿಂದೆ ಬಹುದೊಡ್ಡ ಸಾಂಸ್ಕೃತಿಕ ಪರಂಪರೆ ಇದೆ. ಇದಕ್ಕೆ ಅವರ ಪೂರ್ವಜರು ಕಾರಣ.

ಅಜ್ಜ ಲಿಂಗಪ್ಪ ಪಾಟೀಲರು :

ಅನಾದಿ ಕಾಲದಿಂದಲೂ ದೇಶೀಯ ಬಹು ಸಂಸ್ಕೃತಿಯನ್ನು ಜನಪದ ಕಲೆಗಳನ್ನೂ ನೈಸರ್ಗಿಕ ಸಂಪತ್ತನ್ನೂ ಬಹು ಭಾಷಾ ಭಾಂದವ್ಯವನ್ನು ಮೈಗೂಡಿಸಿಕೊಂಡ ಅಷ್ಟೂರ ಗ್ರಾಮದ ಪ್ರತಿಷ್ಠಿತ ಮನೆತನವೆಂದರೆ ಪಾಟೀಲರದ್ದು. ಇವರದ್ದು ಮೂಲತಃ ಕೃಷಿ ಕುಟುಂಬ 'ಕಾಯಕ' ತತ್ವದಲ್ಲಿ ನಂಬಿಕೆ ಇಟ್ಟುಕೊಂಡು 'ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು' ಎಂದು ಒಕ್ಕಲುತನವನ್ನು ಬೆಳೆಸಿದ ಪರಿಯೇ ಭಿನ್ನವಾಗಿದ್ದು ಅದು ಅನುಕರಣೀಯವಾಗಿದೆ.

ಹಳೆಯ ಒಡೆತನದ ಗೌಡಕಿ ವಹಿಸಿಕೊಂಡು ಗೌಡರೆಂದು ಕರೆಸಿಕೊಂಡ ಪಾಟೀಲರದ್ದು.ಸುಸಂಸ್ಕೃತ ಪರಿಸರದ ತುಂಬು ಸಂಸಾರ. ಲಿಂಗಪ್ಪಗೌಡರೆಂದರೆ, ಸುತ್ತಲಿನ ಹಳ್ಳಿಗೆ ದೇವಮಾನವರು. ದಯೆ, ಅನುಕಂಪ, ಪ್ರೀತಿ ಮಮತೆಗಳನ್ನೇ ಮೈಗೂಡಿಸಿಕೊಂಡಿದ್ದ ಚಂದ್ರಮ್ಮ ಲಿಂಗಪ್ಪಗೌಡರಿಗೆ ಮೂವರು ಮಕ್ಕಳಿದ್ದರು. ಅವರಲ್ಲಿ ಎರಡನೆ ಮಗನೇ ಗುಣವಂತರಾವ ಪಾಟೀಲರು.

ಗುಣವಂತರಾವ ಪಾಟೀಲರು :

ಲಿಂಗಪ್ಪ ಪಾಟೀಲರ ಸುಪುತ್ರರಾದ ಗುಣವಂತರಾವ್ ಪಾಟೀಲರು ಬೀದರ ಜಿಲ್ಲೆಯ ಗಾದಗಿ ಗ್ರಾಮದ ರಾಚಮ್ಮ ರಾಚಪ್ಪಾ ಪಾಟೀಲರ ಸುಪುತ್ರಿ ಸದ್ಗುಣಿ ಸಂಪನ್ನೆ ಗಂಗಮ್ಮ. ಅವರನ್ನು ಮದುವೆಯಾಗಿ ತಂದೆಯ ಜವಾಬ್ದಾರಿಯನ್ನು ವಹಿಸಿಕೊಂಡರು. ಚಿಕ್ಕವರಿರುವಾಗಲೇ ತಂದೆಯವರನ್ನು ಕಳೆದುಕೊಂಡ ಇವರು ಎಂದಿಗೂ ಎದೆಗುಂದದೆ ಪಾಟೀಲ ಮನೆತನದ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಬಂದರು. ಇವರು ರಾಜಕೀಯ ಒಲವುಳ್ಳವರಾಗಿದ್ದರು.ಹೀಗಾಗಿ ತಾಲ್ಲೂಕು ಬೋರ್ಡಿನ ಸದಸ್ಯರು ಮತ್ತು ಡಿ. ಸಿ. ಸಿ. ಬ್ಯಾಂಕಿನ ನಿರ್ದೇಶಕರಾಗಿ ಮತ್ತು ಬಿ. ಎಸ್. ಎಸ್. ಕೆ. ಯ ನಿರ್ದೇಶಕರಾಗಿ ಕೆಲಸ ನಿರ್ವಹಿಸಿದರು. ಸು. ೧೧೦ ಎಕರೆ ಜಮೀನು ಹೊಂದಿರುವ ಇವರು ಕೃಷಿ ಕಾಯಕಕ್ಕೆ ಮಹತ್ವ ನೀಡಿದರು. ಶ್ರೀಮಂತರಾದರೂ ನಿಗರ್ವಿಯಾಗಿದ್ದರು. ಹಸಿದು ಬಂದವರಿಗೆ ಅನ್ನ ದಾಸೋಹ ಮಾಡಿದ ಮಹಾದಾಸೋಹಿಗಳು ಊರಿನ ಜನರಿಗೆ ಹೆಚ್ಚು ಬೇಕಾದವರು. ಪತ್ನಿ ಗಂಗಮ್ಮ ಕೂಡ ಪತಿಗೆ ತಕ್ಕ ಸತಿಯಾಗಿದ್ದರು.ಹೀಗಾಗಿ ತುಂಬು ದಾಂಪತ್ಯದಿಂದ ತುಂಬು ಸಂಸಾರ ನಡೆಸಿದರು.ಅವರಿಗೆ ನಾಲ್ಕು ಜನ ಮಕ್ಕಳು ಜನಿಸಿದರು.ಮೊದಲನೇ ಮಗಳು ಚಂದ್ರಲೇಖಾ, ಎರಡನೇ ಮಗಳು ಚಿತ್ರಲೇಖಾ, ಮೂರನೇ ಮಗ ಬಸವರಾಜ, ನಾಲ್ಕನೇ ಮಗ ರಾಜಶೇಖರ ಪಾಟೀಲ. ಹೀಗೆ ತುಂಬು ಸಂಸಾರ ನಡೆಸಿದ ಗುಣವಂತರಾವ್ ಪಾಟೀಲರು ೮೪ ವರ್ಷ ಸುದೀರ್ಘವಾಗಿ ಬಾಳಿ ೨೪-೦೬-೨೦೦೫ರಲ್ಲಿ ವಿಧಿವಶರಾದರು.

ಜೀವನ ಸಾಧನೆ

ಹುಟ್ಟು-ಬೆಳವಣಿಗೆ :

ಹಿಂದು - ಮುಸ್ಲಿಂ ಬಾಂಧವ್ಯದ ಪ್ರತೀಕವಾದ ಅಲ್ಲಮಪ್ರಭುವಿನ ಗುಡಿ ಮತ್ತು ದರ್ಗಾದಿಂದ ಕೂಡಿದ ಅಷ್ಟೂರ ಗ್ರಾಮ ಧರ್ಮ ಸಮನ್ವಯತೆ, ಸಾಮಾಜೀಕ ಸಾಮರಸ್ಯದ ಗ್ರಾಮ. ಈ ಗ್ರಾಮದ ಒಳ್ಳೆಯತನಕ್ಕೆ ಹೆಸರಾದ

ಸುಸಂಸ್ಕೃತ ಮನೆತನವೆಂದರೆ, ಪಾಟೀಲ ಮನೆತನ. ಈ ಮನೆತನದ ಆದರ್ಶ ದಂಪತಿಗಳಾದ ತಂದೆ ಗುಣವಂತರಾವ್ ಪಾಟೀಲ ತಾಯಿ ಗಂಗಮ್ಮಾ ಪಾಟೀಲರ ಪುಣ್ಯ ಉದರದಿಂದ ಮೂರನೇ ಮಗನಾಗಿ ಡಾ॥ ಬಸವರಾಜ ಜಿ. ಪಾಟೀಲರು ಎಪ್ರಿಲ್ ೪-೧೯೫೬ ರಲ್ಲಿ ಜನಿಸಿದರು. ಹಿರಿಯ ಅಕ್ಕ ಚಂದ್ರಲೇಖಾ, ಎರಡನೇ ಅಕ್ಕಾ ಚಿತ್ರಲೇಖಾ, ತಮ್ಮ ರಾಜಶೇಖರ ಇವರೆಲ್ಲರೂ ಸೇರಿದ ತುಂಬು ಸಂಸಾರದ ಅವಿಭಕ್ತ ಕುಟುಂಬ ಆದರ್ಶಪ್ರಾಯವಾದದ್ದು. ಈ ಮನೆತನದ ಆಶಾ ಜ್ಯೋತಿಯಾಗಿ ಪೂರ್ಣಚಂದ್ರನಂತೆ ಬೆಳೆಯುತ್ತಿದ್ದ ಇವರು ತಾಯಿ ಗಂಗಮ್ಮ ತಂದೆ ಗುಣವಂತರಾವ್ ಅವರ ವಾತ್ಸಲ್ಯದ ಹೊನಲಲ್ಲಿ ಬೆಳೆಯತೊಡಗಿದರು.

ಈ ಮೂರನೇ ಸುಪುತ್ರರಾದ ಡಾ॥ ಬಸವರಾಜ ಪಾಟೀಲರು. ಚಿಕ್ಕವರಿರುವಾಗಲೇ ವಿದ್ಯಾಭ್ಯಾಸಕ್ಕೆಂದು ಬೀದರಕ್ಕೆ ಬಂದು ನೆಲೆಸಿದರು. ರಜೆ ಸಿಕ್ಕಾಗಲೆಲ್ಲ ತಾಯಿಯ ತವರೂರಾದ ಗಾದಗಿಯ ರಾಚಪ್ಪ ರಾಚಮ್ಮಾ (ಅಜ್ಜಾ ಅಜ್ಜಿಯ) ಅವರ ಪ್ರೀತಿಯ ಆಶ್ರಯದಲ್ಲಿ ಮುದ್ದು ಮೊಮ್ಮಕ್ಕಳಾಗಿ ಬೆಳೆದರು.

ಬಾಲ್ಯದ ಬದುಕು :

ಡಾ॥ ಬಸವರಾಜ ಜಿ. ಪಾಟೀಲರ ತಂದೆಯವರಾದ ಗುಣವಂತರಾವ್ ಪಾಟೀಲರ ಕಾಂಗ್ರೇಸ್ ಪಕ್ಷದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಹಲವಾರು ಸಂಘ ಸಂಸ್ಥೆಗಳ ಸದಸ್ಯರಾಗಿ, ನಿರ್ದೇಶಕರಾಗಿ ಕೆಲಸ ನಿರ್ವಹಿಸಿದವರು ಗುಣವಂತರಾವ್ ಪಾಟೀಲರು ಠಾಣಾಕುಶನೂರಿನ ಮಾಣಿಕರಾವ್ ಪಾಟೀಲರ ಒಡನಾಟ ಹೊಂದಿದವರಾಗಿದ್ದರು. ತಂದೆಯಂತೆ ಮಗ ಸಹ ನ್ಯಾಯ-ನಿಷ್ಠುರಿ ಮತ್ತು ರಾಜಕೀಯ ಧುರೀಣರು, ಶಿಕ್ಷಣ ಪ್ರೇಮಿಗಳಾದ ಡಾ॥ ಬಸವರಾಜ ಜಿ. ಪಾಟೀಲರು ಚಿಕ್ಕ ವಯಸ್ಸಿನಲ್ಲಿ ಇವರು, ತಾಯಿ ಗಂಗಮ್ಮನವರ ತವರು ಮನೆಯ ಅಜ್ಜಿ-ಅಜ್ಜರ ಒಡನಾಟದಲ್ಲಿ

ಪ್ರೀತಿಯಿಂದ ಬೆಳೆದರು. ಡಾ॥ ಬಸವರಾಜರ ಪಾಟೀಲರವರ ತಾಯಿಯವರಾದ ಗಂಗಮ್ಮ ತಾಯಿಯ ತಾಯಿಯವರಾದ (ಅಜ್ಜಿ) ರಾಚಮ್ಮ ಮತ್ತು ಅಜ್ಜ ರಾಚಪ್ಪಾ ಅವರ ಪ್ರೀತಿಯ ಆಶ್ರಯದ ಅಪ್ಪುಗೆಯಲ್ಲಿ ಕಥೆಗಳನ್ನು ಕೇಳುತ್ತ, ದೇಶೀಯ ಊಟಗಳಾದ ರೊಟ್ಟಿ, ಪಲ್ಯ, ಮೊಸರು, ಮಜ್ಜಿಗೆ, ಬೆಣ್ಣೆ ಸವಿ ಸವಿಯುತ್ತಾ ಗಾದಗಿಯ ಬಾಲ್ಯ ಸ್ನೇಹಿತರೊಂದಿಗೆ ಗಿಲ್ಲಿದಾಂಡು, ಕಲ್ಲಿನ ಮೇಲೆ ಕಲ್ಲಿಟ್ಟು ಲಗೋರಿಯ ಆಟ, ಕಬಡ್ಡಿ, ಖೋ ಖೋ ಮುಂತಾದ ಅಪ್ಪಟ ದೇಶೀಯ ಆಟಗಳನ್ನು ಆಡಾಡುತ್ತ, ಕಳೆದ ಬಾಲ್ಯದ ದಿನಗಳನ್ನು ದಾಟಿ ಮಳೆ, ಚಳಿ, ಬಿಸಿಲು ಸಮರಸದಿಂದ ಸ್ವೀಕರಿಸಿ ಆನಂದದ ಮೂಲಕವೇ ದಟ್ಟ ಜೀವನಾನುಭವ ಪಡೆದರು.

ಶಿಕ್ಷಣ :

ಬೀದರದಿಂದ ಅಷ್ಟೂರ ಗ್ರಾಮ ಕೇವಲ ೩ ಕಿ.ಮೀ. ಹತ್ತಿರವಿದ್ದರೂ ಮಕ್ಕಳ ವಿದ್ಯಾಭ್ಯಾಸಕ್ಕೆಂದೆ ಬೀದರ ನಗರದಲ್ಲೆ ಇವರ ತಂದೆಯವರು ಮನೆ ಮಾಡಿ ಪ್ರಾಥಮಿಕ ವಿದ್ಯಾಭ್ಯಾಸ ಪ್ರಾರಂಭಿಸಿದರು. ಬೀದರನಲ್ಲಿ ಮೊದಲ ಇಂಗ್ಲೀಷ ಮಾಧ್ಯಮ ಶಾಲೆ ಪ್ರಾರಂಭವಾದ ಕ್ರಿಶ್ಚಿಯನ್ ಸಂಸ್ಥೆಯ ಎಸ್.ಎಫ್.ಎಚ್.ಎಸ್ ಸ್ಕೂಲ್‌ನಲ್ಲಿ ಒಂದನೇ ತರಗತಿಯಿಂದ ೧೦ ನೇ ತರಗತಿಯವರೆಗೆ ಇಂಗ್ಲಿಷ ಮಾಧ್ಯಮದಲ್ಲಿ ವ್ಯಾಸಂಗ ಪೂರೈಸಿದರು. ಇವರು ಪ್ರಾಥಮಿಕ ಶಿಕ್ಷಣ ಕಲಿಯುತ್ತಿರುವಾಗ ರತ್ನಾಗ್ಯಾನಿ ಎಂಬ ಶಿಕ್ಷಕಿಯ ಪ್ರಭಾವಕ್ಕೊಳಗಾಗಿ ಅತ್ಯಂತ ಶ್ರದ್ಧೆ ನಿಷ್ಠೆಯಿಂದ ಅಧ್ಯಯನದಲ್ಲಿ ಆಸಕ್ತಿಯಿಂದ ತೊಡಗಿಸಿಕೊಂಡರು. ಶಿಕ್ಷಕರ ಪ್ರೀತಿಯ ಆದರ್ಶ ವಿದ್ಯಾರ್ಥಿಯಾಗಿ ವಿದ್ಯಾಭ್ಯಾಸ ಮುಂದುವರಿಸಿದರು. ಹತ್ತನೇ ತರಗತಿಯಲ್ಲಿ ಉತ್ತಮ ಅಂಕಗಳನ್ನು ಪಡೆದುಕೊಂಡು ಉತ್ತೀರ್ಣರಾಗಿ, ಮುಂದಿನ ವಿದ್ಯಾಭ್ಯಾಸಕ್ಕಾಗಿ ಬೀದರ ಜಿಲ್ಲೆಯಲ್ಲೇ ಪ್ರತಿಷ್ಠಿತ ಸಂಸ್ಥೆಯಾದ ಭೂಮರೆಡ್ಡಿ ಕಾಲೇಜಿನಲ್ಲಿ ಪಿಯುಸಿ ಮುಗಿಸಿದರು. ಅಂದರೆ ಅವರು ಕಲಿಯುವಾಗ ಈಗಿನಂತೆ ಪಿಯುಸಿ ಎರಡು ವರ್ಷದ ಕೋರ್ಸಾಗಿರಲಿಲ್ಲ. ಒಂದು ವರ್ಷದ

ಕೋರ್ಸಾಗಿತ್ತು. ನಂತರ ೧೯೭೧ರಲ್ಲಿ ಪಿಯುಸಿ ಎರಡು ವರ್ಷದ ಕೋರ್ಸು ಮಾಡಿದರು. ಪಿಯುಸಿ ಮುಗಿಸಿಕೊಂಡು ಬಿ.ಎಸ್ಸಿ ಅಥವಾ ಪಿಪಿಸಿ ಕೋರ್ಸ ಮುಗಿಸಬೇಕಾಗಿತ್ತು. ಅವರು ಅದೇ ಭೂಮರೆಡ್ಡಿ ಕಾಲೇಜಿನಲ್ಲಿ ಅಧ್ಯಯನ ಮಾಡುವಾಗ ಆ ಕಾಲೇಜಿನ ಪ್ರಾಚಾರ್ಯರಾದ ಬಿ ಟಿ ಸಾಸನೂರ ಅವರ ಪ್ರಭಾವಕ್ಕೆ ಒಳಗಾಗಿದ್ದರು. ಆದ್ದರಿಂದ ಅವರನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರು. ಅವರ ಮಾರ್ಗದರ್ಶನದಲ್ಲಿ ಬಿ.ಎಸ್ಸಿ ಪದವಿಯನ್ನು ಪಡೆದುಕೊಂಡು ನಂತರ ಇನ್ನೂ ಹೆಚ್ಚಿನ ವಿದ್ಯಾಭ್ಯಾಸ ಮಾಡಬೇಕೆಂಬ ತಹತಹಿಕೆ ಅವರಲ್ಲಿತ್ತು. ಓದುವ ಗೀಳು ಹೆಚ್ಚಾಗಿರುವದರಿಂದ ಅವರು ಸ್ನಾತಕೋತ್ತರ ವೈದ್ಯಕೀಯ ಪದವಿ ಪಡೆಯಲು ಶರಣ ಬಸವೇಶ್ವರರ ಪುಣ್ಯಭೂಮಿಯಾದ ಕಲಬುರ್ಗಿಯ ಮಹಾದೇವಪ್ಪ ರಾಮಪೂರೆ ವೈದ್ಯಕೀಯ ಮೆಡಿಕಲ್ ಕಾಲೇಜಿನಲ್ಲಿ ವೈದೈಕೀಯ ಪದವಿ ಮತ್ತು ಸರ್ಜರಿಯಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಇವರು ವೈದ್ಯಕೀಯ ವೃತ್ತಿ ಸೇರಲು ಮುಖ್ಯ ಕಾರಣವೆಂದರೆ, ಬಾಲ್ಯದ ವಿದ್ಯಾಭ್ಯಾಸಕ್ಕಾಗಿ ಬೀದರಿಗೆ ಬಂದು ಸರ್ಕಾರಿ ಆಸ್ಪತ್ರೆ ಪಕ್ಕದಲ್ಲೆ ಮನೆ ಮಾಡಿದರು. ಅಷ್ಟೂರ, ಗಾದಗಿ ಮೊದಲಾದ ಊರಿನ ಬಡಜನರು ತಂದೆಯವರಾದ ಗುಣವಂತರಾವ ಪಾಟೀಲರ ಹತ್ತಿರ ಬಂದು ವೈದ್ಯರಿಗೆ ಹೇಳಿ ನಿಮ್ಮ ಮಾತು ಕೇಳುತ್ತಾರೆ ಎಂದು ಜನ ದುಂಬಾಲು ಬೀಳುತ್ತಿದ್ದರು. ಅದನ್ನೆಲ್ಲಾ ಗಮನಿಸಿ ಹಿರಿಯ ಮಗ ವೈದ್ಯನಾಗಲೇಬೇಕೆಂದು ತಂದೆಯವರ ಮಹದಾಪೇಕ್ಷೆ ಆಗಿತ್ತು. ಮಿಷನ್ ಆಸ್ಪತ್ರೆಯ ವೈದ್ಯರಾದ ಡಾ. ಸುಂದರರಾಜ ಅವರ ಸೂಕ್ತ ಮಾರ್ಗದರ್ಶನವೂ ಇತ್ತು. ಆ ಕಾಲಕ್ಕೆ ಡಾ. ಸುಂದರರಾಜ ಎಷ್ಟು ಪ್ರಸಿದ್ಧರೆಂದರೆ ಸರಕಾರಿ ಆಸ್ಪತ್ರೆ ಬಿಟ್ಟರೆ ಜನರಿಗೆ ಮಿಷನ್ ಆಸ್ಪತ್ರೆಯೇ ಚನ್ನಾಗಿ ನಡೆಯುತ್ತಿತ್ತು. ಆದರೆ ಡಾ. ಸುಂದರರಾಜ ನಂತರ ಆ ಆಸ್ಪತ್ರೆ ತುಂಬಾ ಕಳೆಗುಂದಿತು. ಆದರೆ ಬಾಲ್ಯದಿಂದಲೇ ನಾಯಕತ್ವದ ಗುಣ ಹೊಂದಿದ ಡಾ. ಬಸವರಾಜ ಪಾಟೀಲ ಅವರಿಗೆ ವೈದ್ಯಕೀಯ ವೃತ್ತಿ ಇಷ್ಟವಿಲ್ಲದಿದ್ದರೂ ತಂದೆಯವರ ಆಸೆ ಈಡೇರಿಸಲು ವೈದ್ಯಕೀಯ ವ್ಯಾಸಂಗಕ್ಕೆ ಸೇರಿ ವೈದ್ಯರಾಗಿ ಹೊರ ಬರುತ್ತಾರೆ.

ಹೋರಾಟದ ಜೀವನ :

ಡಾ॥ ಬಸವರಾಜ ಜಿ. ಪಾಟೀಲರು ಮನೆತನದಿಂದ ಶ್ರೀಮಂತರಾದರೂ ಕೂಡಾ ಎಂದು ಹಮ್ಮು ಬಿಮ್ಮುಗಳಿಂದ ಮೆರೆಯಲಿಲ್ಲ. ಯಾವಾಗಲೂ ಬಡವರಿಗಾಗಿ, ದೀನ ದುಃಖಿಗಳಿಗಾಗಿ ಇವರ ಮನ ತುಡಿಯುತ್ತದೆ. ಬಾಲ್ಯದಿಂದಲೇ ಅನ್ಯಾಯ ಕಂಡರೆ ಎಂದೂ ಇವರು ಸಹಿಸುತ್ತಿರಲಿಲ್ಲ. ಖಂಡಿಸುತ್ತಿದ್ದರು. ಹತೋಟಿ ಮೀರಿದರೆ ಹೋರಾಟಕ್ಕಿಳಿಯುತ್ತಿದ್ದರು. ೧೯೭೩ ರಲ್ಲಿ ಎಂ.ಎಸ್ ಅಧ್ಯಯನ ಮಾಡುತ್ತಿರುವಾಗ ಯುವ ಸಂಘಟನೆಯ ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದರು. ಹಾಗೆ ೧೯೭೯-೮೦ರಲ್ಲಿ ಹೌಸ ಸರ್ಜನ್ ಎಂದು ಆಯ್ಕೆಗೊಂಡರು. ಮತ್ತೆ ಇಂಟರನಿಸ್ ಅಸೋಷಿಯಷನ್ ಅಧ್ಯಕ್ಷರಾಗಿ ನೇಮಕಗೊಂಡರು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದಲ್ಲಿ ಆರ್ ಗುಂಡುರಾವ್ ಮುಖ್ಯಮಂತ್ರಿಯಾಗಿದ್ದಾಗ ಖಾಸಗಿ ಮೆಡಿಕಲ್ ಕಾಲೇಜಗಳನ್ನು ಪ್ರಾರಂಭಿಸಲು ಅನುಮತಿ ಕೊಡುತ್ತಿದ್ದರು. ಇದನ್ನು ಮನಗಂಡ ಡಾ॥ ಬಸವರಾಜ ಪಾಟೀಲರು ಬಡಮಕ್ಕಳಿಗೆ ಮೆಡಿಕಲ್ ಕಾಲೇಜು ಮೆಟ್ಟಿಲು ಹತ್ತಲಿಕ್ಕೆ ಆಗುವದಿಲ್ಲವೆಂದು ತಿಳಿದು ಸಾಮಾನ್ಯ ಜನರು ಕೂಡಾ ಮೆಡಿಕಲ್ ಕಾಲೇಜಿನಲ್ಲಿ ಅಡ್ಮೀಶನ್ ಪಡೆಯಬೇಕಾದರೆ ಸರ್ಕಾರಿ ವೈದ್ಯಕೀಯ ಕಾಲೇಜಗಳನ್ನು ಪ್ರಾರಂಭಿಸಿ, ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಅನುಮತಿ ಕೊಡಬಾರದೆಂದು ಪಾಟೀಲರು ತಮ್ಮ ನೇತೃತ್ವದಲ್ಲಿ ಸುಮಾರು ೧೦೦ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋರಾಟಕ್ಕಿಳಿದಿದ್ದರು. ದೊಡ್ಡ ಪ್ರಮಾಣದಲ್ಲಿ ಸರ್ಕಾರದ ವಿರುದ್ಧವೇ ಒಂದು ತಿಂಗಳವರೆಗೆ ಹೋರಾಟ ಮಾಡಿದ್ದರು. ಯಾವ ವೈದ್ಯರಿಗೂ ಕಾರ್ಯನಿರ್ವಹಿಸಲು ಬಿಡದೆ ರೋಗಿಗಳಿಗೂ ಕೂಡಾ ಆಸ್ಪತ್ರೆಯ ಒಳಗೆ ಬಿಡದೆ, ಬಹಳಷ್ಟು ಗಂಭೀರ ಸ್ವರೂಪದ, ಸಾಯುವ ತುರ್ತು ಪರಿಸ್ಥಿತಿಯ ರೋಗಿಗಳಿಗೆ ಮಾತ್ರ ಆಸ್ಪತ್ರೆಯೊಳಗೆ ಬಿಡುತ್ತಿದ್ದರು. ಹೀಗೆ ನ್ಯಾಯ

ಸಿಗಬೇಕೆಂದು ಪಟ್ಟು ಹಿಡಿದು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತ ಧರಣಿ - ಸತ್ಯಾಗ್ರಹ ಮುಂದುವರೆಸಿದರು. ವಿದ್ಯಾರ್ಥಿಗಳು ಬೇಕಂತಲೇ ದೊಂಬಿ ಏಳುವಂತಃ ಕಾನೂನು ಬಾಹಿರ ಕೃತ್ಯಕ್ಕೆ ತೊಡಗಿದ್ದಾರೆಂದು ಇದನ್ನೂ ಖಂಡಿಸಿ ಸರ್ಕಾರ ಪೋಲಿಸರಿಂದ ಬಂಧಿಸಿ ಕೋರ್ಟಿಗೆ ಹಾಜರು ಪಡಿಸಿದರು. ಇದನ್ನು ಕಂಡು ಹುಡುಗರು ರೊಚ್ಚಿಗೆದ್ದು ಕೋರ್ಟಿನಲ್ಲಿ ಗಲಾಟೆ ಮಾಡಿದ್ದರು. ಕೋರ್ಟಿನ ಶಿಸ್ತು- ನಿಯಮಾವಳಿಯನ್ನು ಮೀರಿ ನಡೆದುಕೊಂಡಿರುವುದರಿಂದ ಕೋರ್ಟಿನ ನ್ಯಾಯಾಧೀಶರು ಸಿಟ್ಟಿಗೆದ್ದು, ಇವರ ಮೇಲೆ ಏಳು ದಿನ ಇಂಪ್ರಿಜನ್‌ಮೆಂಟ್ ಹಾಕ್ರಿ ಎಂದು ಹೇಳಿ ಜೇಲಿಗೆ ಹಾಕಿದ್ದರು. ದೇಶದ ಸ್ವಾತಂತ್ರ್ಯಕ್ಕಾಗಿ ಮಹಾತ್ಮಾ ಗಾಂಧೀಜಿ ಮುಂತಾದ ಮಹನೀಯರು ಜೇಲು ಅನುಭವಿಸಿದ್ದರೆ, ಡಾ॥ ಬಸವರಾಜ ಪಾಟೀಲರು ಮತ್ತು ಅವರ ಸಂಗಡಿಗರು ಬಡ ವಿದ್ಯಾರ್ಥಿಗಳು ಕೂಡಾ ವೈದ್ಯಕೀಯ (ಮೆಡಿಕಲ್) ಅಧ್ಯಯನ ಕೈಕೊಳ್ಳುವಂತಾಗಲಿ ಎಂಬ ಸದುದ್ದೇಶದಿಂದ ಜೇಲನ್ನು ಅನುಭವಿಸಿದ ಮಹಾನುಭಾವರು. ಇವರು ಜಾಮೀನು ಪಡೆಯಬೇಕಾದರೆ ಹತ್ತು ಸಾವಿರ ರೂಪಾಯಿ ಕೊಡಬೇಕಾಗಿತ್ತು. ಅಷ್ಟೊಂದು ಹಣ ಹೊಂದಿಸಿ ಜಾಮೀನು ಕೊಟ್ಟು ಯಾರು ಬಿಡಿಸಿಕೊಂಡು ಹೋಗಲಿಲ್ಲ, ಅದಕ್ಕಾಗಿ ಪಾಟೀಲರನ್ನೊಳಗೊಂಡು ಒಟ್ಟು ೧೦೦ ಜನರಿಗೆ ಜೇಲಿಗೆ ಹಾಕಿದ್ದರು. ಆಗ ಮಹಾದೇವಪ್ಪ ರಾಮಪೂರೆ ಮೆಡಿಕಲ್ ಸಂಸ್ಥೆಯ ಅಧ್ಯಕ್ಷರಾದ ಡಾ. ಎ. ಬಿ. ಮಾಲಕರೆಡ್ಡಿ, ಅಂದಿನ ಮೇಡಿಕಲ್ ಕಾಲೇಜಿನ ಪ್ರಾಚಾರ್ಯರಾಗಿದ್ದ ಡಾ. ಬಿ.ಜಿ. ಜಾವಳಿ, ಗಣ್ಯವ್ಯಕ್ತಿ ಎಂ. ಆರ್. ತಂಗಾರವರು, ಡಾ. ನಾಗನಾಥ ಮುಂತಾದವರು ಕೂಡಿಕೊಂಡು ತಲಾ ಹತ್ತು ಸಾವಿರ ರೂಪಾಯಿಯಂತೆ ಕಲೆ ಹಾಕಿ ಜಾಮೀನು ಕೊಟ್ಟು, ಜೇಲಿನಿಂದ ಬಿಡಿಸಿಕೊಂಡು ಬಂದರು. ಸುಮಾರು ಈ ಕೇಸು ಎರಡು ವರ್ಷ ನಡೆಯಿತು ಕೊನೆಗೆ ಪಾಟೀಲರೆ ಸರ್ಕಾರಕ್ಕೆ (ಅಪೀಲ) ಮೊರೆ ಹೋದಾಗ ಕೇಸ್ ಕೊನೆಗೊಂಡಿತು.

ಕೌಟುಂಬಿಕ ಜೀವನ :

ಭಾರತೀಯ ಸಂದರ್ಭದಲ್ಲಿ ಕುಟುಂಬ ವ್ಯವಸ್ಥೆ, ದಾಂಪತ್ಯ ಬದುಕಿಗೆ ಮಹತ್ವದ್ದ ಸ್ಥಾನವಿದೆ. ಆದರೆ ಅದೇ ಭಾರತೀಯ ಸಂದರ್ಭದಲ್ಲಿ ಮೋಕ್ಷ ಪಡೆಯಲು ದಾಂಪತ್ಯ ವರ್ಜ್ಯವಾಗಿದೆ. ಇದಕ್ಕೆ ಅಪವಾದ ಎಂಬಂತೆ "ಪ್ರಪಂಚದಲ್ಲಿದ್ದು, ಪಾರಮಾರ್ಥ ಗೆದೆಯಬೇಕೆಂಬ" ಬಸವಾದಿ ಶರಣರ ಮಾತು ಪ್ರಕೃತಿ ಧರ್ಮವನ್ನು ಪ್ರತಿಪಾದಿಸುತ್ತದೆ. ಜಗತ್ತಿನ ಎಲ್ಲಾ ತತ್ವಗಳು ಸನ್ಯಾಸ ಧರ್ಮವನ್ನು ಬೋಧಿಸಿದರೆ ಶರಣರು ಮಾತ್ರ ಸಂಸಾರ ಧರ್ಮವನ್ನು ಸಾರಿದರು. ಆದರೆ ಅದಕ್ಕೊಪ್ಪುವ ಜೀವನ ಸಂಗಾತಿ ಸಿಗುವುದು ಅಷ್ಟೆ ಮುಖ್ಯ. ಆದರೆ ನಡೆ-ನುಡಿ ಒಂದಾಗಿಸಿಕೊಂಡು ಯಾವುದೇ ಅಹಂಕಾರವಿಲ್ಲದ, ಆಡಂಬರವಿಲ್ಲದ ಸರಳ ಸಜ್ಜನಿಕೆ, ಸಾಮಾಜಿಕ, ಧಾರ್ಮಿಕ ವೈದ್ಯಕೀಯ ಕ್ಷೇತ್ರಗಳಲ್ಲದೆ ರಾಷ್ಟ್ರೀಯ ಭಾವೈಕ್ಯತೆ ಮತ್ತು ಶೈಕ್ಷಣಿಕ ರಂಗದಲ್ಲಿ ಅಪಾರ ಸೇವೆಯನ್ನು ಗೈಯುತ್ತಿರುವ, ಜನಪ್ರಿಯ ವ್ಯಕ್ತಿಯಾಗಿರುವ ಡಾ॥ ಬಸವರಾಜ ಜಿ. ಪಾಟೀಲರಿಗೆ ಹೆಣ್ಣು ಕೊಡದವರಾರು, ಅಲ್ಲದೆ ಸುಸಂಸ್ಕೃತ ಶ್ರೀಮಂತ ಪಾಟೀಲ ಮನೆತನದವರು ಇವರಿಗೆ ಹೆಣ್ಣು ಕೊಡಲು ನಾಮುಂದೆ ನೀಮುಂದೆ ಎಂದು ಸಾಕಷ್ಟು ಸಿರಿವಂತ ಮನೆತದವರು ಮುಂದಾಗಿದ್ದರು. ನೋಡಲು ಸ್ಫುರದ್ರೂಪಿಯಾದ ಡಾ॥ ಬಸವರಾಜ ಪಾಟೀಲರಿಗೆ ಬಿಜಾಪೂರದ ದೊಡ್ಡ ಉದ್ದಿಮೆದಾರರಾದ ಸುಸಂಸ್ಕೃತ ಇಂಡಿ ಮನೆತನದ ಸರೋಜನಿ ಶರಣಪ್ಪಾ ಇಂಡಿಯವರ ಪುಣ್ಯ ದಂಪತಿಗಳ ಉದರದಿಂದ ಜನಿಸಿದ ಸದ್ಗುಣ ಸಂಪನ್ನೆಯಾದ ಉಮಾದೇವಿಯನ್ನು (ದಿನಾಂಕ ೨೯-೧೨-೧೯೮೬) ಮದುವೆಯಾದರು. ಉಮಾದೇವಿಯವರು ಬಾಲ್ಯದಿಂದಲೇ ಶಾಂತ ಸ್ವಭಾವವುಳ್ಳ, ದಾಸೋಹ ಮನೋಭಾವುಳ್ಳವರು. ಕುಟುಂಬದ ಜವಾಬ್ದಾರಿ ಇವರ ಮೇಲೆ ಬಿದ್ದಿತ್ತು. "ಉಭಯ ದೃಷ್ಟಿ ಏಕದೃಷ್ಟಿಯಾಗಿ ಕಾಂಬಂತೆ ಸತಿಪತಿಗಳು ಅನನ್ಯತೆಯಿಂದ ಬಾಳುವೆ ಆರಂಭಿಸಿದರು. ಇವರ ದಾಂಪತ್ಯದ ಬದುಕು ಅನುಕರಣೀಯುವಾಗಿದೆ. ಹಾಗಾಗಿ "ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎನ್ನುವಂತೆ ಆದರ್ಶ

ಸತಿಪತಿಗಳಾಗಿ ಸಮಾಜಕ್ಕೆ ಮತ್ತು ಕುಟುಂಬ ಪ್ರೀತಿಗೆ ಮಾದರಿಯಾಗಿದ್ದಾರೆ. ಮುಂದೆ ಅವರಿಗೆ ಚೊಚ್ಚಿಲ ಮಗಳ ಜನನವಾದಾಗ ಅದು ಅವರಿಗೆ ಅತ್ಯಂತ ಖುಷಿ ಕೊಟ್ಟ ಗಳಿಗೆ. ಜವಾಬ್ದಾರಿತನದ ಭಾವ ಉಂಟಾದದ್ದು. ಹೀಗೆ ಪಾಟೀಲರಿಗೆ ಇಬ್ಬರೂ ಮಕ್ಕಳು, ಮೊದಲ ಮಗಳು ಶ್ರದ್ಧಾ, ಎರಡನೆಯ ಮಗ ಅರವಿಂದು, ಇವರ ಎರಡನೆ ಮಗನಾದ ಅರವಿಂದ ಬಿ.ಇ. ಮುಗಿಸಿ ಇಂಜನಿಯರರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಮಗಳು ಶ್ರದ್ಧಾ ಬಿ.ಎಸ್ಸಿ. ಬಯೋಟೆಕ್ ಮುಗಿದ ನಂತರ ಮರಖಲ ಗ್ರಾಮದ ಪ್ರತಿಷ್ಠಿತ ಮನೆತನವಾದ ಬುಯ್ಯಾ ಪರಿವಾರದ ಶಿವಾನಂದವರಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಶ್ರದ್ಧಾಳಿಗೆ ಎರಡು ಮುದ್ದಾದ ಗಂಡು ಮಕ್ಕಳಾಗಿವೆ. ಮೊದಲನೆ ಮಗುವಿನ ಹೆಸರು ಆರವ್ ಎರಡನೆ ಮಗು ಅದ್ವಿಕ್ ಹೀಗೆ ಪಾಟೀಲರದ್ದು ತಂಬು ಕುಟುಂಬವಾಗಿದೆ. ಮಕ್ಕಳು ಮತ್ತು ಮೊಮ್ಮಕ್ಕಳನ್ನು ಪಡೆದು ಸಂತೃಪ್ತರಾದ ಡಾ. ಬಸವರಾಜ ಪಾಟೀಲರು ಕೌಟುಂಬಿಕ ಪ್ರೀತಿಯೊಂದಿಗೆ ಬಾಳಿ ಬದುಕುವುದರೊಂದಿಗೆ ಮುಂದುವರೆದು ಬರಿ ಕುಟುಂಬಕ್ಕಷ್ಟೆ ಸೀಮಿತವಾಗದೆ ಅನೇಕ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಕಲ್ಯಾಣ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸಮಾಜದಲ್ಲಿ ಅದ್ವಿತೀಯ ವ್ಯಕ್ತಿತ್ವ ಹೊಂದಿದವರಾಗಿ, ಜೀವ ಕಾರುಣ್ಯದ ಮೂಲಕ ಜನಾನುರಾಗಿಯಾಗಿದ್ದಾರೆ.

ವೃತ್ತಿ ಜೀವನ :

ವೈದ್ಯಕೀಯ ಸ್ನಾತ್ತಕೋತ್ತರ ಪದವಿ (ಎಂ.ಎಸ್.) ಮುಗಿಸಿಕೊಂಡು ಬಂದ ನಂತರ ೧೯೮೨ ರಲ್ಲಿ ವೈದ್ಯರಾಗಿ ಸೇವೆಯನ್ನು ಸಲ್ಲಿಸುತ್ತಿರುವಾಗ ಸರ್ಕಾರವು ಇವರಿಗೆ ಕೆ.ಎಸ್.ಆರ್.ಟಿ.ಸಿ.ಯ ಮೆಡಿಕಲ್ ಆಫೀಸರರಾಗಿ ನೇಮಿಸಿತು. ಅಲ್ಲಿ ಸುಮಾರು ಐದು ವರ್ಷ ವೈದ್ಯರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಅವರಿಗೆ ಸರ್ಕಾರವು ೮೦೦೦/- ರೂ. ಗೌರವ ಧನವಾಗಿ ಕೊಡುತ್ತಿದ್ದರು. ಸರಕಾರಿ ವೈದ್ಯರಾಗಬೇಕೆಂದು ತಂದೆಯವರು ಆಪೇಕ್ಷೆಪಟ್ಟರು.

ಆದರೆ ಸಿಗಲಿಲ್ಲ. ಆ ಕಾಲಕ್ಕೆ ಖಾಸಗಿ ವೈದ್ಯರತ್ತ ಜನ ಬರುತ್ತಿರಲಿಲ್ಲ. ಸರಕಾರಿ ಆಸ್ಪತ್ರೆಯಲ್ಲಿನ ವೈದ್ಯರು ಮಾತ್ರ ಖಾಸಗಿ ಕ್ಲಿನಿಕ್ ನಡೆಸುತ್ತಿದ್ದರು. ಇಂತಹ ಸಂದರ್ಭದಲ್ಲಿ ಖಾಸಗಿ ವೈದ್ಯರಿಗೆ ಅಷ್ಟೊಂದು ಪ್ರಾತಿನಿಧ್ಯ ಇರಲಿಲ್ಲ. ಈ ಮಧ್ಯೆ ಅವರಿಗೆ ಹುಬ್ಬಳ್ಳಿಯಲ್ಲಿ ಸಂದರ್ಶನಕ್ಕೆ ಅಹ್ವಾನ ಬಂದಿತು. ಅತಿ ಹೆಚ್ಚು ಅಂಕ ಪಡೆದರು. ಸಮಿತಿಯವರು ಇವರ ವಿಷಯ ಜ್ಞಾನಕ್ಕಿಂತ ನಾಯಕತ್ವದ ಗುಣಗಳಿಗಾಗಿಯೇ ಅಂಕ ನೀಡಿದರು. ಆದರೆ ಪಾಟೀಲರ ಒಲವು ಹೆಚ್ಚು ರಾಜಕೀಯದ ಕಡೆಗೆ ಇರುವುದರಿಂದ, ವೈದ್ಯಕೀಯ ವೃತ್ತಿಯ ಕಡೆಗೆ ಹೆಚ್ಚು ಆಸಕ್ತಿ ತೋರಲಿಲ್ಲ. ನಂತರ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾಗಿ ಶೈಕ್ಷಣಿಕ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ನೋಡಿದರೆ ವೈದ್ಯಕೀಯ ವೃತ್ತಿಯಲ್ಲಿ ಅವರಿಗೆ ಕಡಿಮೆ ಆಸಕ್ತಿ ಇರುವುದು ಕಂಡು ಬರುತ್ತದೆ.

ರಾಜಕೀಯ ಜೀವನ :

ಧರ್ಮ ರಾಜಕೀಯ ಮೇಲ್ನೋಟಕ್ಕೆ ಬೇರೆ–ಬೇರೆಯಾಗಿ ಕಂಡರೂ ಧರ್ಮ–ಸಮ್ಮತ ರಾಜಕೀಯ ಇರಬೇಕೆಂಬುದು ಗಾಂಧೀಜಿಯವರ ನಿಲುವು. ಅದನ್ನು ಕಾರ್ಯರೂಪಕ್ಕೆ ತರಲು ಕಟಿಬದ್ಧರಾಗಿ ೧೯೭೮ ರಲ್ಲಿ ಕಾಂಗ್ರೇಸ್‌ಗೆ ಸೇರಿಕೊಂಡರು. ತಂದೆಯವರ ರಾಜಕೀಯ ಪ್ರಭಾವ ಇವರ ಮೇಲೆ ಬೀರಿತು. ಅಲ್ಲದೆ ಹತ್ತಿರದ ಸಂಬಂಧಿಕರಾದ ಠಾಣಾ ಕುಶನೂರಿನ ಶ್ರೀ ಮಾಣಿಕರಾವ್ ಪಾಟೀಲರ ಒಡನಾಟದಲ್ಲಿದ್ದರು. ಅಲ್ಲದೆ ಧರ್ಮಸಿಂಗ್ ಮತ್ತು ಮಲ್ಲಿಕಾರ್ಜುನ ಖರ್ಗೆ ಹಾಗೂ ಬಸವರಾಜ ಪಾಟೀಲ ಹುಮನಾಬಾದ ಇಂತಹ ದೊಡ್ಡ ದೊಡ್ಡ ರಾಜಕೀಯ ಧುರೀಣರೊಂದಿಗೆ ಒಳ್ಳೆಯ ಸಂಬಂಧವನ್ನು ಹೊಂದಿರುವರು. ಇವರ ರಾಜಕೀಯ ಮುತ್ಸದ್ಧಿತನ ಗುರುತಿಸಿ ಕಾಂಗ್ರೇಸ್ ಜಿಲ್ಲಾ ಸಹಕಾರ್ಯದರ್ಶಿಯನ್ನಾಗಿ ನೇಮಕ ಮಾಡಿದ್ದರು. ೨೦೦೨ ರಲ್ಲಿ ಶಿಕ್ಷಕರ ಮತಕ್ಷೇತ್ರದಿಂದ ಎಂ.ಎಲ್.ಸಿ ಚುನಾವಣೆಗಳನ್ನು ಎದುರಿಸಲು ಇವರಿಗೆ ಕಾಂಗ್ರೇಸ್ ಟಿಕೇಟ್ ಸಿಕ್ಕಿತು.

ವಿಧಾನ ಪರಿಷತ್ತಿನ ಚುನಾವಣೆಗೆ ನಿಂತಿದ್ದರು. ಆದರೆ ಅಲ್ಲಿ ಯಶಸ್ಸು ಕಾಣಲಿಲ್ಲ. ಇವರ ರಾಜಕೀಯ ಜೀವನ ಅಷ್ಟು ಸುಖಮಯವಾಗಿರಲಿಲ್ಲ. ಎಲ್ಲಕಡೆ ಸ್ಪರ್ಧೆ, ದ್ವೇಷದ ರಾಜಕಾರಣ ನೋಡಿ ಬೇಸತ್ತರು. ಎಲ್ ಕೆ ಅಡ್ವಾಣಿಯವರ ಪ್ರಭಾವಕ್ಕೊಳಗಾಗಿ ವಿನೋದಖನ್ನಾ ಅವರ ನೇತೃತ್ವದಲ್ಲಿ ಡಾ॥ ಬಸವರಾಜ ಪಾಟೀಲರು ಬಿಜೆಪಿ ಪಕ್ಷಕ್ಕೆ ಸೇರಿಕೊಂಡರು. ವಿಷಾದದ ಸಂಗತಿಯೆಂದರೆ ಇವರು ಕಾಂಗ್ರೆಸ್ ತೊರೆದು ಬಿ.ಜೆ.ಪಿ. ಸೇರುತ್ತಲೇ ಅತ್ಯಂತ ಆಪ್ತರಾಗಿದ್ದ ಎನ್. ಧರಂಸಿಂಗ್ ಅವರು ಮುಖ್ಯಮಂತ್ರಿಯಾದರು. ಡಾ॥ ಬಸವರಾಜ ಪಾಟೀಲರ ನಾಯಕತ್ವದ ಗುಣಗಳನ್ನು ಅರಿತ ಎಂ. ಆರ್. ತಂಗಾ ಅವರು ತಮ್ಮ ಸ್ಥಾನದ ಬದಲಾಗಿ ಪದವಿಧರ ಕೇತ್ರದ ಅಭ್ಯರ್ಥಿಯಾಗಿ ನಿಲ್ಲಿಸಬೇಕೆಂದು ಆಪ್ತವಲಯದಲ್ಲಿ ಹೇಳಿದ್ದರು ಅದಕ್ಕೆ ಪೂರಕವಾದ ವಾತಾವರಣ ಕೂಡ ರೂಪಿಸಲಾಗಿತ್ತು. ಆದರೆ ದುರಾದೃಷ್ಟದಿಂದ ತಂಗಾ ಅವರು ನಿಧನರಾದರು ಚುನಾವಣೆ ಸನ್ನಿಹಿತವಾದಂತೆ ದಿಢೀರನೆ ಹೈಕಮಾಂಡ್ ಮೂಲಕ ಮನೋಹರ ಮಸ್ಕಿಯವರು ನಿಂತರು ಭಾರಿ ಭರವಸೆಗಳ ಮೂಲಕ ಎಲ್ಲರೂ ಒಗ್ಗಟ್ಟಿನಿಂದ ಗೆಲ್ಲಿಸಿದರೂ ಅವರು ತಿರುಗಿ ಮತ್ತೆ ಈ ಭಾಗದ ಕಡೆಗೆ ನೋಡಲೇ ಇಲ್ಲ. ಇದು ಇವರಿಗೆ ತುಂಬಾ ನಿರಾಶೆಯುಂಟು ಮಾಡಿತು.

ಬಿ.ಜೆ.ಪಿ. ಒಡೆದು ಎರಡಾಗಿತ್ತು. ಬಿ.ಎಸ್. ಯಡಿಯೂರಪ್ಪನವರು ಕೆ.ಜೆ.ಪಿ. ಮಾಡಿಕೊಂಡಿದ್ದರು. ೨೦೧೪ರಲ್ಲಿ ಬಿ.ಜೆ.ಪಿ.ಯಲ್ಲಿ ಅಭ್ಯರ್ಥಿಗಳೇ ಇಲ್ಲದಂತಹ ಕಷ್ಟಕಾಲದಲ್ಲಿ ಬೀದರ ದಕ್ಷಿಣ ಭಾಗದ ಚುನಾವಣೆಗೆ ನಿಲ್ಲಲು ಡಾ. ಬಸವರಾಜ ಪಾಟೀಲರ ಮನೆ ಬಾಗಿಲು ತಟ್ಟಿ ಬಿ.ಜೆ.ಪಿ.ಯಿಂದ ಟಿಕೇಟು ನೀಡಿದರು. ವಾಸ್ತವವಾಗಿ ಕಲುಷಿತ ರಾಜಕೀಯ ವಾತಾವರಣದಲ್ಲಿ ಅದು ಅವರಿಗೆ ಇಷ್ಟವಿರಲಿಲ್ಲವಾದರೂ ಒಲ್ಲದ ಮನಸ್ಸಿನಿಂದ ಚುನಾವಣೆ ಎದುರಿಸಿ ಕೈ ಸುಟ್ಟುಕೊಂಡರು. ಆದರೆ ಡಾ. ಬಸವರಾಜ ಪಾಟೀಲರು ಯಾವತ್ತೂ ಸೇಡಿನ, ದ್ವೇಷ ರಾಜಕಾರಣ ಮಾಡಲಿಲ್ಲ.

ಸಾಮಾಜಿಕ ಜೀವನ :

ಮನುಷ್ಯ ಸಂಘ ಮತ್ತು ಸಮಾಜ ಜೀವಿ, ಮೀನು ನೀರು ಬಿಟ್ಟು ಹೇಗೆ ಬದುಕಲಾರದ್ದೊ ಹಾಗೇ, ಮನುಷ್ಯ ಸಮಾಜ ಬಿಟ್ಟು ಒಂಟಿಯಾಗಿ ಬದುಕಲಾರ, ಹುಟ್ಟಿನಿಂದ ಸಾವಿನವರೆಗೂ ಸಮಾಜದ ಸಂಬಂಧ ಹೊಂದಿರುತ್ತಾನೆ. ಅದಕ್ಕಾಗಿ ಸಮಾಜದ ಋಣ ನಮ್ಮ ಮೇಲಿದೆ. ಋಣ ಮುಕ್ತರಾಗಬೇಕಾದರೆ, ಮನುಷ್ಯ ಸಾಮಾಜಿಕ ಸೇವೆಗಳಲ್ಲಿ ತನ್ನನ್ನು ತಾನು ನಿಸ್ವಾರ್ಥತೆಯಿಂದ ಯಾವುದೇ ಫಲಾಪೇಕ್ಷವಿಲ್ಲದೆ ತೊಡಗಿಸಿಕೊಂಡಾಗಲೇ ಸಾರ್ಥಕದ ಬದುಕು ಅನಿಸಿಕೊಳ್ಳುತ್ತದೆ. ಗಾಂಧೀಜಿಯವರು ಹೇಳಿರುವಂತೆ "ಸೇವೆ ಎಂದರೆ ಸದ್ದಿಲ್ಲದೆ ನಡೆಯಬೇಕು" ಎಂಬುದು ಇಂತಹ ಮಹಾನ್ ತತ್ವಗಳನ್ನು ಮೈಗೂಡಿಸಿಕೊಂಡಿರುವ ಅಪರೂಪದ ವ್ಯಕ್ತಿ ಡಾ॥ ಬಸವರಾಜ ಪಾಟೀಲರು. ಹಿಂದುಳಿದ ಹಣೆಪಟ್ಟಿ ಹೊತ್ತ "ಗಡಿನಾಡು ಜಿಲ್ಲೆಯಾದ ಬೀದರಿನ ಎಷ್ಟೋ ಬಡ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಸಹಾಯ ಹಸ್ತ ನೀಡಿದ್ದಾರೆ. ಅಂದರೆ ಎಂಟು ಗಂಟೆ ವೈದ್ಯಕೀಯ ಸೇವೆ ಸಲ್ಲಿಸಿದ ನಂತರ ಇನ್ನೂ ಹೆಚ್ಚಿನ ಸೇವೆಯನ್ನು ಸಲ್ಲಿಸಲು ಡಾ॥ ಬಸವರಾಜ ಪಾಟೀಲರು ಮತ್ತು ಡಾ॥ ವಿಶ್ವನಾಥ ಪ್ರಭಾ ಮುಂತಾದ ವೈದ್ಯರುಗಳು ಕೂಡಿಕೊಂಡು ಸಿಟಿಜನ್ ಸಂಸ್ಥೆ ಹುಟ್ಟು ಹಾಕಿ ಅದರ ಮೂಲಕ "ಜನರ ಸೇವೆಯೇ ದೇವರ ಸೇವೆ" ಎಂದು ಭಾವಿಸಿಕೊಂಡು ಹಲವಾರು ಬಡವಿದ್ಯಾರ್ಥಿಗಳಿಗೆ ದತ್ತುಕ ತೆಗೆದುಕೊಂಡು ಏಳು (೭) ಜನ ಇಂಜಿನಿಯರ ವಿದ್ಯಾರ್ಥಿಗಳಿಗೆ ಸಹಾಯ ಮಾಡಿ, ದೊಡ್ಡ ದೊಡ್ಡ ಇಂಜಿನೀಯರುಗಳಾಗುವಂತೆ ಪ್ರೋತ್ಸಾಹಿಸಿದ್ದಾರೆ. ಅಲ್ಲದೆ ಅನೇಕ ಬಡತನದ ಕಟ್ಟ ಕಡೆಯ ವಿದ್ಯಾರ್ಥಿಗಳಿಗೆ ದತ್ತು ತೆಗೆದುಕೊಂಡು ಮೆಡಿಕಲ್ ಓದಲು ಸಹಾಯ ಮಾಡಿ ಅವರು ಒಳ್ಳೆಯ ವೈದ್ಯರಾಗಿ ಹೊರಹೊಮ್ಮುವಂತೆ ಅವರ ಜೀವನ ರೂಪಿಸಿದ್ದಾರೆ. ಇವರಿಂದ ಸಹಾಯ ಪಡೆದ ವಿದ್ಯಾರ್ಥಿಗಳು ಉನ್ನತ ಹುದ್ದೆಯಲ್ಲಿದ್ದಾರೆ. ಆದರೆ ವಿದ್ಯಾರ್ಥಿಗಳಿಂದ ಯಾವುದೇ ರೀತಿಯ ಫಲಾಪೇಕ್ಷ ಬಯಸದೆ "ಸೇವೆ ಮಾಡುವುದು" ಮಾಡಿದ್ದನ್ನು ಮರೆಯುವುದು ಇವರ ಬಹುದೊಡ್ಡ

ಗುಣ. ಅದೇ ಅವರ ಸಾತ್ವಿಕ ವ್ಯಕ್ತಿತ್ವ ಇಷ್ಟೆ ಅಲ್ಲದೆ ಭೂಮರಡ್ಡಿ ಕಾಲೇಜಿನಲ್ಲಿ ಇತ್ತೀಚಿಗೆ "ಮುಷ್ಟಿ ಧಾನ್ಯ" ಸಂಗ್ರಹ ಕಾರ್ಯವನ್ನು ಕೂಡಾ ಮಾಡುತ್ತಿದ್ದಾರೆ. ಅಂದರೆ ಒಂದು ದೊಡ್ಡದಾದ (ಡಬ್ಬಿ) ಪಾತ್ರೆ ಕಾಲೇಜಿನಲ್ಲಿ ಇಡುವುದು. ಒಂದು ವಾರದವರೆಗೆ, ಉಪನ್ಯಾಸಕರು ಹಿಡಿದುಕೊಂಡು ವಿದ್ಯಾರ್ಥಿಗಳವರೆಗೆ ಎಲ್ಲರೂ ದಿನಾಲು ಒಂದು ಮುಷ್ಟಿ ಧಾನ್ಯಗಳು (ಯಾವುದೇ ರೀತಿಯ ಧಾನ್ಯ) ತಂದು ಆ ಪಾತ್ರೆಯಲ್ಲಿ ಸುರಿಯುವುದು. ಅದು ತುಂಬಿದ ನಂತರ ಅನಾಥಾಶ್ರಮಕ್ಕೆ ಮತ್ತು ಬಡಕುಟುಂಬಗಳಿಗೆ, ದಾಸೋಹಕ್ಕೆ ಕೊಡುವ ಕೆಲಸ ಮಾಡುತ್ತಿದ್ದಾರೆ. ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗೆ ಆಯ್ಕೆ ಆದ ಮೇಲೆ ಇವರು ಅನೇಕ ಸುಧಾರಣೆ ಕೆಲಸಗಳನ್ನು ಕೈಕೊಳ್ಳುವುದರ ಜೊತೆಗೆ "ಪೂವರ್ ಫಂಡ" ಸಂಗ್ರಹಿಸಿ ಬಡವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಸಹಾಯ ಮಾಡುತ್ತಿರುವರು. ಅಲ್ಲದೆ ಮುಂಜಾನೆ "ಕಾಲೇಜು ಪ್ರಾರಂಭವಾಗುವುದರಿಂದ ಎಷ್ಟೋ ಬಡಮಕ್ಕಳು ಊಟ ಮಾಡದೇ ಕಾಲೇಜಿಗೆ ಬರುತ್ತಾರೆಂದು ತಿಳಿದು ಅವರಿಗೆ ಸಂಸ್ಥೆಯಿಂದ ಮತ್ತು ಉಪನ್ಯಾಸಕರಿಂದ ಪೂವರಫಂಡ ಕೂಡಿಸಿರುವ ಹಣದಿಂದ "ಅನ್ನ ದಾಸೋಹ" ನಡೆಸುತ್ತಾರೆ ಈಗ ಸುಮಾರು ೮೮ ವಿದ್ಯಾರ್ಥಿಗಳು ಇದರ ಲಾಭ ಪಡೆಯುತ್ತಿದ್ದಾರೆ. ಇದನ್ನು ಡಾ॥ ಬಸವರಾಜ ಪಾಟೀಲರೇ ಪ್ರಾರಂಭಿಸಿದ್ದಾರೆ. ಇದನ್ನೆಲ್ಲ ನೋಡಿದಾಗ ಇವರಲ್ಲಿರುವ ಸಾಮಾಜಿಕ ಅಂತಃಕರಣ ಎದ್ದು ಕಾಣುತ್ತದೆ.

ಧಾರ್ಮಿಕ ಜೀವನ :

ಧರ್ಮ ಸಮನ್ವಯದ ಬೀಡಾದ ಬೀದರ ಜಿಲ್ಲೆ ಬಸವಾದಿ ಶರಣರು ನಡೆದಾಡಿದ ಪುಣ್ಯ ಭೂಮಿ. ಗುರುನಾನಕ ಮಂದಿರ ಪಾಪನಾಶ ಮಂದಿರ, ಈ ಕಡೆ ನರಸಿಂಹ ಝರಾ, ದರ್ಗಾ, ಚರ್ಚು ಮುಂತಾದ ಧಾರ್ಮಿಕ ಕೇಂದ್ರಗಳಿಂದ ಕೂಡಿದ ಹಲವು ಧರ್ಮಗಳ ಸಂಗಮ ನೆಲೆವಿಡಾದ ನಮ್ಮ ಬೀದರ ಜಿಲ್ಲೆ ಭಾವೈಕ್ಯತೆಯ ಸಂಗಮವಾಗಿದೆ.

"ಕಲ್ಯಾಣ ಕರ್ನಾಟಕದ ಕಳಸ ಪ್ರಾಯವಾದ ಈ ಧರಿನಾಡು ಬೀದರ. ತನ್ನದೆಯಾದ ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ ಮತ್ತು ಧಾರ್ಮಿಕ ಛಾಪು ಮೂಡಿಸಿಕೊಂಡಿದೆ. ಇಂತಹ ಪವಿತ್ರ ನೆಲದ ಸತ್ವವನ್ನು ಪಡೆದುಕೊಂಡು ಬೆಳೆದವರು ಡಾ॥ ಬಸವರಾಜ ಪಾಟೀಲರು. ಇವರು ಅನೇಕ ಧಾರ್ಮಿಕ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಹಲವು ಧಾರ್ಮಿಕ ಕಾರ್ಯಗಳನ್ನು ಮಾಡಿದ್ದಾರೆ. ಭಾಲ್ಕಿ ಮಠದ ಬಸವಲಿಂಗ ಪಟ್ಟದ್ದೇವರು ಮತ್ತು ಬಸವ ಮುಕ್ತಿ ಮಂದಿರದ ಶಿವಯೋಗೇಶ್ವರ ಸ್ವಾಮೀಜಿಗಳ ಒಡನಾಟವಿದೆ. ಮತ್ತು ಚಿತ್ರದುರ್ಗ ಶ್ರೀ ಮರಘಾರಾಜೇಂದ್ರ ಶರಣರ ಸಾನಿಧ್ಯದಲ್ಲಿ ನಡೆದ ಬಸವಕಲ್ಯಾಣದ ಅನುಭವ ಮಂಟಪದ "ಶರಣ ಕಮ್ಮಟ "ಡಾ॥ ಬಸವರಾಜ ಪಾಟೀಲರ ನೇತೃತ್ವದಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ನಡೆಸಿದರು. ಡಾ॥ ಪಾಟೀಲರ ಧಾರ್ಮಿಕ ಸೇವೆಯನ್ನು ಮೆಚ್ಚಿ ಚಿತ್ರ ದುರ್ಗದ ಮುರುಘಾ ಶರಣರು "ಅವರು ನಡೆಸುವ ಶರಣ ಸಂಸ್ಕೃತಿ ಉತ್ಸವದಲ್ಲಿ "ಡಾ॥ ಬಸವರಾಜ ಪಾಟೀಲರಿಗೆ ವೈದ್ಯಶ್ರೀ ಪ್ರಶಸ್ತಿ ನೀಡಿ ಗೌರವಿಸಿದರು. ಈ ಪ್ರಶಸ್ತಿಯು ಅವರು ಮಾಡಿರುವ ದಾಸೋಹದ ಕಾರ್ಯಕ್ಕೆ ಕಳಸವಿಟ್ಟಂತಾಗಿದೆ. ಆದರೆ ಅವರು ಎಂದು ಪ್ರಶಸ್ತಿಗಳ ಹಿಂದೆ ಹೋದವರಲ್ಲ, ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬರುತ್ತಿವೆ. ಬೀದರ ಆಡಳಿತ ಮಂಡಳಿ ವತಿಯಿಂದ "ಕನ್ನಡ ರಾಜ್ಯೋತ್ಸವದ' ಸಂದರ್ಭದಲ್ಲಿ ವೈದ್ಯಕೀಯ ಸೇವೆಯನ್ನು ಪರಿಗಣಿಸಿ ಪ್ರಶಸ್ತಿ ನೀಡಲು ಮುಂದೆ ಬಂದರೆ ಸೇವೆ ಸಲ್ಲಿಸಿದ ಬಹಳಷ್ಟು ಹಿರಿಯ ವೈದ್ಯರಿದ್ದಾರೆ. ಅವರಿಗೆ ಕೊಡಿ ಎಂದು "ಕನ್ನಡ ರಾಜ್ಯೋತ್ಸವ" ಪ್ರಶಸ್ತಿಯನ್ನು ನಿರಾಕರಿಸಿದ ಅಪರೂಪದ ವ್ಯಕ್ತಿ ಇವರು. ಏಕೆಂದರೆ ಲಾಬಿ ಮಾಡಿ ಪ್ರಶಸ್ತಿಗಳನ್ನು ಗಿಟ್ಟಿಸಿಕೊಳ್ಳುವ ಈ ಸಂದರ್ಭದಲ್ಲಿ ಬಂದ ಪ್ರಶಸ್ತಿಯನ್ನು ನಿರಾಕರಿಸುವುದು. ಇವರ ವ್ಯಕ್ತಿತ್ವಕ್ಕೆ ಓಡಿದ ಕನ್ನಡಿಯಾಗಿದೆ ಧಾರ್ಮಿಕ ಕಾರ್ಯಗಳಲ್ಲಿ ಮುಂದಾಳತ್ವ ವಹಿಸಿಕೊಂಡು ಅನೇಕ ಧಾರ್ಮಿಕ ಕೆಲಸಗಳನ್ನು ಮಾಡುವುದರಿಂದ ೧೯೮೮-೮೯ ರಲ್ಲಿ ನಡೆದ " ಸರ್ವಧರ್ಮ ಸಮ್ಮೇಳನದ ಸರ್ವಾಧ್ಯಕ್ಷತೆಯ" ಸ್ಥಾನ ನೀಡಿದರು. ಇದೆಲ್ಲವು ಇವರ ಧಾರ್ಮಿಕ ಸೇವಾ ಕಾರ್ಯಗಳಿಗೆ

ಸಂದ ಗೌರವ ಎಂದು ಹೇಳಬಹುದು. ಮೌಢ್ಯತೆಗಿಂತ ವೈಚಾರಿಕೆ ಮನೋಭಾವವುಳ್ಳರಾಗಬೇಕೆಂದು, ದೇವರ ಗುಡಿಗೆ ಹೋಗಿ ಕಾಯಿ-ಕರ್ಪೂರ ಒಡೆಯುವುದುಕ್ಕಿಂತ ಅದೆ (ದುಡ್ಡನ್ನು ಬಡವರಿಗಾಗಿ) ದೀನ ದುಃಖಿತರಿಗಾಗಿ ವಿನಿಯೋಗಿಸಿದರೆ ಒಳ್ಳೆದೆಂದು ಯಾವಾಗಲು ಹೇಳುತ್ತಿರುತ್ತಾರೆ.

ವಿದೇಶ ಪ್ರವಾಸ

ಆಧುನಿಕ ಜಗತ್ತು ಜ್ಞಾನದಾಹದ ಜಗತ್ತು. ಜ್ಞಾನದ ಮೂಲವೆಂದರೆ ದೇಶ ಮತ್ತು ಕೋಶ. ಆದ್ದರಿಂದ "ಕೋಶ ಓದು ದೇಶ ಸುತ್ತು" ಎಂಬ ನಾಣ್ಣುಡಿಯಂತೆ ಬಹುಜ್ಞತೆಗಾಗಿ ದೇಶ-ವಿದೇಶ ಸುತ್ತುವುದು ಅವಶ್ಯಕ. ದೇಶ-ವಿದೇಶ ಸುತ್ತುವುದರಿಂದ ಅನುಭವದ ಸಾಂದ್ರತೆ ಬೆಳೆಯಲು ಸಾಧ್ಯವಾಗುತ್ತದೆ. ನಮ್ಮಲ್ಲಿರುವ ಕೂಪ ಮಂಡೂಕ ಮಡಿವಂತಿಕೆಗಳು ದೂರಾಗುತ್ತವೆ. ಜ್ಞಾನದ ಪರಿಧಿ ವಿಕಾಸವಾಗುತ್ತದೆ. ಡಾ॥ ಬಸವರಾಜ ಪಾಟೀಲರು ಕ್ರಿ.ಶ. ೧೯೮೨ ರಲ್ಲಿ "ಮನೆಲಾ" ಕ್ಕೆ ಮೊದಲ ಪ್ರವಾಸ ಕೈಗೊಂಡರು. ಏಕೆಂದರೆ " ವಿದೇಶದಲ್ಲಿ ಡಾಕ್ಟರಾಗಿ ಸೇವೆ ಸಲ್ಲಿಸಬೇಕಾದರೆ ಇ.ಸಿ. ಎಫ್, ಎಮ್. ಜೆ. ಪರೀಕ್ಷೆ ಪಾಸಾಗಬೇಕಿತ್ತು. ಅದಕ್ಕಾಗಿ ಈ ಪರೀಕ್ಷೆಯ ಕೇಂದ್ರ (ಸೆಂಟರ್) ಮನೆಲಾದಲ್ಲಿ ಇರುವುದರಿಂದ ಅದಕ್ಕಾಗಿ ಮನೆಲಾ ದೇಶಕ್ಕೆ ಹೋಗುವುದರ ಜೊತೆಗೆ ಸಮೀಪವಿರುವ ದೇಶಗಳನ್ನು ಕೂಡಾ ನೋಡಿಕೊಂಡು ಬರಲು ಪ್ರವಾಸಕ್ಕೆ ಹೋಗುತ್ತಿದ್ದರು. ಹೀಗಾಗಿ ಮನೆಲಾ ಸಮೀಪವಿರುವ ಸಿಂಗಾಪೂರ, ಹಾಂಕಾಂಗ್. ಬ್ಯಾಂಕಾಂಗ್ ಮುಂತಾದ ಪ್ರದೇಶಗಳನ್ನು ನೋಡಿಕೊಂಡು ಬಂದರು. ಅಲ್ಲಿಯ ಶಿಕ್ಷಣ ಪದ್ಧತಿ ಶಿಸ್ತು, ಸಮಯ ಪ್ರಜ್ಞೆ ನೋಡಿ ತಮ್ಮ ಜೀವನದಲ್ಲಿ ಅವುಗಳನ್ನು ಅಳವಡಿಸಿಕೊಳ್ಳಲು ಯತ್ನಿಸುವುದರ ಜೊತಗೆ ಸುತ್ತಲಿನ ಸಮಾಜದಲ್ಲಿ ಅವು ನೆಲೆಗೊಳ್ಳಬೇಕೆಂಬ ಸದಾಶಯ ಹೊಂದಿರುವರು.

ಮುಂದೆ ೧೯೮೩-೮೪ರಲ್ಲಿ ಇವರು ಸ್ನಾತ್ತಕೋತ್ತರ ಪದವಿ ಪಡೆಯತ್ತಿರುವಾಗ "ಹೌಸ್ ಸರ್ಜನ್", ತರಬೇತಿಯನ್ನು ಡಾ। ನರಸುಣಗಿ ಯವರ ಆಸ್ಪತ್ರೆಯಲ್ಲಿ ಮಾರ್ಗದರ್ಶನ ರೂಪದ ತರಬೇತಿ ಪಡೆಯುತ್ತಿದ್ದಾಗ "ಇಂಟರ್ ನ್ಯಾಷನಲ್ ಸರ್ಜನ ಕಾನ್‌ಫರೆನ್ಸ್" ಖಟ್ಮಂಡುವಿನಲ್ಲಿತ್ತು. ಈ ಕಾನ್‌ಫರೆನ್ಸಿನ ಅಧ್ಯಕ್ಷತೆ ಡಾ॥ ನರಸುಣಿಗಿಯವರಿಗೆ ವಹಿಸಿದರು. ಹೀಗಾಗಿ ಅವರ ಜೊತೆ ಟ್ರೇನಿಂಗ್ ಮಾಡುವಂತಹ ಎಲ್ಲಾ ವಿದ್ಯಾರ್ಥಿಗಳು ಡಾ॥ ಬಸವರಾಜ ಪಾಟೀಲರು ಕೂಡಾ ಅವರ ಜೊತೆ ಖಟ್ಮಂಡುವಿಗೆ ಕಾನ್‌ಫರೇನ್ಸ್‌ನಲ್ಲಿ ಭಾಗಿಯಾಗಲು ಪ್ರವಾಸಕ್ಕೆ ಹೋಗಿದ್ದರು. ಹೆಚ್ಚಿನ ಶೈಕ್ಷಣಿಕ ಅನುಭವಗಳನ್ನು ಪಡೆಯಲು ದೇಶ-ವಿದೇಶ ಪ್ರವಾಸಗಳನ್ನು ಕೈಗೊಂಡರು.

ಜಗತ್ತಿನ ಸಮಾಜವಾದ ರಾಷ್ಟ್ರಗಳೊಲ್ಲೊಂದಾದ ರಷ್ಯ ತನ್ನ ೭೦ನೇ ಸ್ವಾತಂತ್ರ್ಯೋತ್ಸವದ ಆಚರಣೆ ನಿಮಿತ್ಯ ವಿಶ್ವದ ಪ್ರಜಾಪ್ರಭುತ್ವ ರಾಷ್ಟ್ರಗಳ ಪ್ರಮುಖ ಪ್ರತಿನಿಧಿಗಳನ್ನು ಆಹ್ವಾನಿಸಿತು. ಅಂದರೆ ಭಾರತದ ಪ್ರತಿನಿಧಿಗಳನ್ನು ರಷ್ಯಾಕ್ಕೆ ಹೋಗುವುದು, ರಷ್ಯದ ಕೆಲವರು ಪ್ರತಿನಿಧಿಗಳು ಭಾರತಕ್ಕೆ ಕಳುಹಿಸಿದರು. ಅದರಲ್ಲಿ ಡಾ॥ ಬಸವರಾಜ ಪಾಟೀಲರು ಒಬ್ಬರು. ಕ್ರಿ.ಶ. ೧೯೮೭ ರಲ್ಲಿ "ಇಂಡೋ ಸೋವಿಯತ್ ರಿಲೇಷನ್‌ಸಿಪ್" ಗಾಗಿ ರಷ್ಯ ಸರ್ಕಾರ ಭಾರತಕ್ಕೆ ಕರೆ ಕೊಟ್ಟಿತು. ಅದಕ್ಕಾಗಿ ಭಾರತ ಸರ್ಕಾರವು ಪಾಟೀಲರನ್ನೊಳಗೊಂಡಂತೆ ಇನ್ನು ಹಲವರನ್ನು ೨೧ ದಿವಸ ರಷ್ಯಾಯಕ್ಕೆ ಕಳುಹಿಸಿತ್ತು.

ಇದೊಂದು ಸಾಂಸ್ಕೃತಿಕ ಪ್ರವಾಸವಾಗಿತ್ತು. ಭಾರತದ ಸುಮಾರು ೨೫೦ ಜನ ಇದರಲ್ಲಿ ಭಾಗವಹಿಸಿದರು. ಬೀದರನಿಂದ ಡಾ॥ ಪಾಟೀಲರು ಕೂಡ ಒಬ್ಬರು. ರಷ್ಯಾದವರ ರಾಷ್ಟ್ರ ಪ್ರೇಮ ಅವರ ಜೀವನ ಪ್ರೀತಿ ಅತಿಥಿ ಸತ್ಕಾರ ಪಾಟೀಲರಿಗೆ ತುಂಬಾ ಹಿಡಿಸಿತು.

ಇವರು ಅಭಿರುಚಿಗಾಗಿ ಎಲ್ಲಾ ಗೆಳೆಯರು ಕೂಡಿಕೊಂಡು ದುಬಾಯಿ, ಮಕಾವ, ಭೈರಾನ್ ಮುಂತಾದ ವಿದೇಶಗಳಿಗೆ ಪ್ರವಾಸ

ಕೈಗೊಂಡಿದ್ದಾರೆ. ಯಾವುದೇ ದೇಶಕ್ಕೆ ಹೋದರೂ ಅಲ್ಲಿನ ಉತ್ತಮ ಅಂಶಗಳನ್ನು, ಸಾತ್ವಿಕ ನಿಯಮಗಳನ್ನು ಗಮನಿಸುತ್ತಲೇ ಸಹಜವಾಗಿ ತಮ್ಮ ಬದುಕಿನ ಭಾಗವಾಗಿಸಿಕೊಂಡವರು.

ಇವರು ವಿದೇಶ ಪ್ರಯಾಣ ಮಾಡಿದಾಗ ಯು.ಎಸ್.ಎ.ರಷ್ಯಾ, ಅತ್ಯಂತ ಮುಂದುವರೆದ ರಾಷ್ಟ್ರಗಳಾಗಿದ್ದವು. ತಮ್ಮ ದೇಶ ಆ ಮಟ್ಟದಲ್ಲಿ ಸುಧಾರಣೆ ಆಗಬಹುದೇ ಎಂದು ಪ್ರಶ್ನಿಸಿಕೊಂಡ ಪಾಟೀಲರಿಗೆ ಸಧ್ಯದ ಭಾರತದ ಅಭಿವೃದ್ಧಿಯು ತೃಪ್ತಿ ನೀಡಿದೆ. ಹೀಗೆ ಅವರ ವಿದೇಶ ಬದುಕು ಅವರ ವ್ಯಕ್ತಿತ್ವ ನಿರ್ಮಾಣದ ಒಂದು ಭಾಗವಾಗಿದ್ದು, ಈ ಭಾಗದ ಅಭಿವೃದ್ಧಿಗೆ ಪೂರಕವಾಗಿದೆ ಎಂದೇ ಹೇಳಬಹುದು.

ಶೈಕ್ಷಣಿಕ ವಿಕಾಸ

ಮನುಷ್ಯರಿಗೆ ಅನ್ನ, ಅರಿವೆ, ಆಶ್ರಯಗಳಂತೆ ಔಷಧ, ಅರಿವು ಕೂಡ ಅಷ್ಟೇ ಮುಖ್ಯ. ಅದನ್ನು ಶರಣ ತತ್ವದಲ್ಲಿ 'ಶಿವ ಪಂಚಾಯತ'ವೆಂದು ಕರೆಯುತ್ತಾರೆ. ಆಧುನಿಕ ಜಗತ್ತು ಶಿಕ್ಷಣ ಒಂದು ಮೂಲಭೂತ ಅವಶ್ಯಕವೆಂದು ಪರಿಗಣಿಸಿದಂತೆ ಭಾರತದಲ್ಲಿ ಅದನ್ನು ಮೂಲಭೂತ ಹಕ್ಕಾಗಿ ಸೇರಿಸಲಾಗಿದೆ.ಒಂದು ದೇಶದ ವಿಕಾಸಕ್ಕಾಗಿ ಶಿಕ್ಷಣವು ಸಾಧನವಾದರೆ ಸಮಗ್ರ ಪ್ರಪಂಚಕ್ಕೆ ಅದು ಶಾಂತಿಯನ್ನು ಕಾಪಾಡುವ ಸಾಧನವಾಗಿದೆ. "ಮಗುವಿಗೆ ಜನ್ಮ ನೀಡುವುದು ಸೃಷ್ಠಿಯ ಪರಂಪರೆಯಾದರೆ, ಮಗುವಿಗೆ ಶಿಕ್ಷಣ ಕೊಡುವುದು ಸೃಷ್ಠಿಯ ಮೇಲೆ ಮಾನವನು ಕೈಕೊಂಡ ಸುಧಾರಣೆಯಾಗಿದೆ" ಎಂದು ಶಿಕ್ಷಣ ತಜ್ಞರಾದ ಎಚ್.ಎಮ್. ಹೆಲ್ ಅವರು ವ್ಯಕ್ತಪಡಿಸಿದ್ದಾರೆ. ಈ ಅಭಿಪ್ರಾಯ "ಮಾನವನಿಗೆ ಶಿಕ್ಷಣದ ಮಹತ್ವವನ್ನು ಸೂಚಿಸುತ್ತದೆ. ಶಿಕ್ಷಣವನ್ನು ಒಂದು ದೇಶದ ಆದರ್ಶಗಳ ಬೆನ್ನೆಲುಬು ಎಂದು ಪರಿಗಣಿಸಲಾಗಿದೆ. ಒಂದು ಕಡೆ ಅರಿಸ್ಟಾಟಲ್ ಹೀಗೆ ಹೇಳಿರುವಂತೆ

"ಜೀವಂತ ವ್ಯಕ್ತಿಗಳು ಸತ್ತವರಿಗಿಂತ ಹೇಗೆ ಶ್ರೇಷ್ಠರೋ ಹಾಗೆ ಸುಶಿಕ್ಷಿತ ವ್ಯಕ್ತಿಗಳು ಅಶಿಕ್ಷಿತ ವ್ಯಕ್ತಿಗಳಿಗಿಂತ ಶ್ರೇಷ್ಠರು".

ಒಂದು ದೇಶವು ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆಗಳ ಆಧಾರದ ಮೇಲೆ ಅದರ ಪ್ರಗತಿಯನ್ನು ಅಳೆಯುತ್ತಾರೆ. ಆದ್ದರಿಂದಲೇ ಭಾರತೀಯ ಸಂದರ್ಭದಲ್ಲಿ ಶಿಕ್ಷಣಕ್ಕೆ ಮಹತ್ವದ ಸ್ಥಾನವಿದೆ. ಭಾರತೀಯರ ಎಲ್ಲಾ ಸಾಮಾಜಿಕ ಸಮಸ್ಯೆಗಳಿಗೆ ಶಿಕ್ಷಣದಿಂದ ಪರಿಹಾರವಿದೆ ಎಂಬುದನ್ನು ಅರಿತ ಡಾ॥ ಬಸವರಾಜ ಜಿ. ಪಾಟೀಲರು ತಮ್ಮ ಆದಾಯ ಮೂಲದ ವೃತ್ತಿಯಾದ ವೈದ್ಯಕೀಯ ವೃತ್ತಿ ತೊರೆದು ಸೇವಾ ವಲಯದ ಶಿಕ್ಷಣ ಕ್ಷೇತ್ರವನ್ನು ಆಯ್ದುಕೊಂಡರು. ಶಿಕ್ಷಣದ ಅಭಿವೃದ್ಧಿಯಲ್ಲಿ ರಾಷ್ಟ್ರದ ಅಭಿವೃದ್ಧಿ ಅಡಗಿದೆ ಎಂದು ತಿಳಿದ ಪಾಟೀಲರು ವಿದ್ಯಾರ್ಥಿ ದಿಸೆಯಲ್ಲಿಯೇ ಅನೇಕ ಶಿಕ್ಷಣ ಸಂಸ್ಥೆಗಳ ಸದಸ್ಯರಾದರು. ಅವುಗಳಲ್ಲಿ ಮುಖ್ಯವಾಗಿ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆ, ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಇತ್ಯಾದಿಗಳನ್ನು ಹೆಸರಿಸಬಹುದು.

ಶೈಕ್ಷಣಿಕ ಮಾರ್ಗದರ್ಶಕರು

ಪ್ರತಿಯೊಬ್ಬರಿಗೂ ಒಬ್ಬೊಬ್ಬರು ಆದರ್ಶಪ್ರಾಯ ನಾಯಕರು ಇರುವಂತೆ ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ ಅವರಿಗೆ ಡಾ. ಎಸ್. ಎಸ್. ನರಸಣಗಿ, ಡಾ. ಪಿ.ಎಸ್. ಶಂಕರ ಮೊದಲಾದವರು ಶೈಕ್ಷಣಿಕ ಮಾರ್ಗದರ್ಶಕರಾದರು.

ಡಾ. ಪಿ.ಎಸ್. ಶಂಕರ್ : ನಾಡಿನ ಖ್ಯಾತ ವೈದ್ಯರಾದ **ಡಾ. ಪಿ.ಎಸ್. ಶಂಕರ್ ಅವರು** ಕಳೆದ ಆರು ದಶಕಗಳಿಂದ ವೈದ್ಯ ಶಿಕ್ಷಕರಾಗಿ ಸಲ್ಲಿಸಿದ ಸೇವೆ ಅವಿಸ್ಮರಣೀಯವಾದದ್ದು. ಅಂತೆಯೆ ಡಾ. ಪಿ.ಎಸ್. ಶಂಕರ್, ಡಾ. ಬಿ.ಸಿ. ರಾಯ್ ಸಮರ್ಥ ಶಿಕ್ಷಕರೆಂಬ ರಾಷ್ಟ್ರೀಯ ಪ್ರಶಸ್ತಿಗೆ ಭಾಜನರು. ಬರವಣಿಗೆಯ ಬಗ್ಗೆ ಬಾಲ್ಯದಿಂದಲೇ ಅಭಿರುಚಿ ಬೆಳೆಸಿಕೊಂಡಿದ್ದ ಅವರು ಇಂಗ್ಲೀಷ್ ಮತ್ತು ಕನ್ನಡದಲ್ಲಿ ೨೦೦ ಪುಸ್ತಕಗಳನ್ನು ಬರೆದಿದ್ದಾರೆ; ಹಲವಾರು

ಕೃತಿಗಳನ್ನು ಸಂಪಾದಿಸಿದ್ದಾರೆ. ಇಂಗ್ಲೀಷಿನಲ್ಲಿ ವೈದ್ಯ ಪದಕೋಶವನ್ನು ಮತ್ತು ಕನ್ನಡದಲ್ಲಿ ವೈದ್ಯ ವಿಶ್ವಕೋಶವನ್ನು ರಚಿಸಿದ ಹೆಗ್ಗಳಿಕೆ ಅವರದು. ಬರವಣಿಗೆಗಾಗಿ ಅವರಿಗೆ ಸೋವಿಯತ ಲ್ಯಾಂಡ್ ನೆಹರೂ ಪ್ರಶಸ್ತಿ, ರಾಕ್‌ಫೆಲರ್ ಪ್ರತಿಷ್ಠಾನದ ಸ್ಕಾಲರ್ – ಇನ್ – ರೆಸಿಡೆನ್ಸ್, ವಿಶ್ವಮಾನವ ಪ್ರಶಸ್ತಿ, ಮೂಜಗಂ ಪ್ರಶಸ್ತಿ, ನುಡಿಸಿರಿ ಪ್ರಶಸ್ತಿಗಳು ಲಭಿಸಿವೆ. ಏಡ್ಸ್ ರೋಗ ಗುರುತಿಸಲ್ಪಟ್ಟ ನಾಲ್ಕು ವರುಷದಲ್ಲಿಯೇ ಅದರ ಬಗ್ಗೆ ಕನ್ನಡದಲ್ಲಿ ಪುಸ್ತಕ ರಚಿಸಿದರು. ಗುಲಬರ್ಗಾ ವಿಶ್ವವಿದ್ಯಾಲಯ, ಆಂಧ್ರ ಎನ್.ಟಿ.ಆರ್. ವೈದ್ಯ ವಿಜ್ಞಾನ ವಿಶ್ವವಿದ್ಯಾಲಯ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ತುಮಕೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್, ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪದವಿ ಪಡೆದ ಡಾ. ಶಂಕರ್ ಅವರ ಪುಸ್ತಕಗಳಿಗೆ ಗುಲಬರ್ಗಾ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಮತ್ತು ಕನ್ನಡ ಸಾಹಿತ್ಯ ಪರಿಷತ್ತುಗಳ ಪ್ರಶಸ್ತಿಗಳು ಲಭಿಸಿವೆ. ಅವರು ಮೆಡಿಸಿನ್ ಅಪ್‌ಡೇಟ್, ವಿಜ್ಞಾನ ಲೋಕ ವಿಜ್ಞಾನ ಪತ್ರಿಕೆ, ಆರೋಗ್ಯ ವಿಜ್ಞಾನ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ವೈದ್ಯ ವಿಜ್ಞಾನ ಪತ್ರಿಕೆಗಳ ಪ್ರಧಾನ ಸಂಪಾದಕರು.

ಕಾಮನ್‌ವೆಲ್ತ್ ಮೆಡಿಕಲ್ ಫೆಲೋಶಿಪ್, ಲಂಡನ್ನಿನ ರಾಯಲ್ ಕಾಲೇಜ್ ಆಫ್ ಫಿಜಿಸಿಯನ್ಸ್, ಭಾರತದ ಅಕಾಡೆಮಿ ಆಫ್ ಮೆಡಿಕಲ್ ಸೈನ್ಸ್‌ಸ್‌ನ ಫೆಲೋ ಆದ ಡಾ. ಪಿ.ಎಸ್. ಶಂಕರ್ ಸಮರ್ಥ ಚಿಕಿತ್ಸಾ ವೈದ್ಯ ಬೋಧಕರು, ಮೆಡಿಕಲ್ ಕಾಲೇಜುಗಳ ದಕ್ಷ ಆಡಳಿತಗಾರರು, ಸಂಶೋಧಕರು, ಬರಹಗಾರರು ಮತ್ತು ರೋಗಿಗಳ ಸೇವೆಯನ್ನು ಶ್ರದ್ಧೆ, ಉತ್ಸಾಹ ಮತ್ತು ನಿರಪೇಕ್ಷತೆಯಿಂದ ಕೈಕೊಳ್ಳುವರೆಂದು ದೇಶದಲ್ಲಿ ಹೆಸರು ಮಾಡಿದ್ದಾರೆ.

ಗುಲಬರ್ಗಾ ವಿಶ್ವವಿದ್ಯಾಲಯದ ಮೆಡಿಕಲ್ ಫ್ಯಾಕಲ್ಟಿಯ ಪ್ರಥಮ ಡೀನರಾದ ಡಾ. ಶಂಕರ್ ಕಳೆದ ೫೬ ವರುಷಗಳಿಂದ ವೈದ್ಯ ಶಾಸ್ತ್ರ ಬೋಧನೆಯಲ್ಲಿ ನಿರತರು. ಆಕಾಶವಾಣಿಯಲ್ಲಿ ೨೮೦ಕ್ಕೂ ಮೇಲ್ಪಟ್ಟು

ಭಾಷಣ ನೀಡಿದ ಅವರು ಬರೆದ ಬಿಡಿ ಲೇಖನಗಳು ಸಾವಿರ ದಾಟಿವೆ. ಅವರು ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಥಮ ಪ್ರಕಟಣೆ ಮತ್ತು ಪ್ರಚಾರೋಪನ್ಯಾಸವನ್ನು ಮಾಡಿದ ಮೊದಲಿಗರು. ಮೆಡಿಕಲ್ ಕೌನ್ಸಲ್ ರಜತೋತ್ಸವ ಸಂಶೋಧನ ಪ್ರಶಸ್ತಿ ಪಡೆದ ಡಾ. ಶಂಕರ್ ಅವರು ಜೀವಮಾನ ಸಾಧನೆಗಾಗಿ ಇಂಡಿಯನ್ ಕಾಲೇಜ್ ಆಫ್ ಚೆಸ್ಟ್ ಫಿಜಿಸಿಯನ್ಸ್, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಇಂಡಿಯನ್ ಚೆಸ್ಟ್ ಸೊಸೈಟಿ ಮತ್ತು ಜೀರಿಯಾಟ್ರಿಕ್ ಸೊಸೈಟಿ ಆಫ್ ಇಂಡಿಯದಿಂದ ಗೌರವಿಸಲ್ಪಟ್ಟಿದ್ದಾರೆ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಅವರನ್ನು ಎಮಿರಿಟಸ್ ಪ್ರೊಫೆಸರ್ ಆಫ್ ಮೆಡಿಸಿನ್ ಎಂದು, ಕೆ.ಎಲ್.ಇ. ವಿಶ್ವವಿದ್ಯಾಲಯದ ಪ್ರೊಫೆಸರ್ ಎಂದು ಗುರುತಿಸಿ ಗೌರವಿಸಿದೆ.

ನ್ಯಾಷನಲ್ ಚೆಸ್ಟ್ ಇನ್ಸಿಟ್ಯೂಟ್‌ನಿಂದ ಅತ್ಯುತ್ತಮ ಎದೆ ರೋಗ ತಜ್ಞ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳಿಂದ ಗೌರವಿಸಲ್ಪಟ್ಟ ಡಾ. ಪಿ.ಎಸ್. ಶಂಕರ್ ಅವರಿಗೆ ಕರ್ನಾಟಕ ವಿಜ್ಞಾನ ತಂತ್ರಜ್ಞಾನ ಮಂಡಳಿಯ ವಿಶ್ವೇಶ್ವರಯ್ಯ ಹಿರಿಯ ವಿಜ್ಞಾನಿ ಪ್ರಶಸ್ತಿ, ಭಾರತ ಸರಕಾರದ ಉತ್ತಮ ವಿಜ್ಞಾನ ಸಂವಹನಕಾರ ಪ್ರಶಸ್ತಿ ಲಭಿಸಿವೆ.

ಮುಂಬಯಿ ಏಶಿಯನ್ ಹಾರ್ಟ್ ಇನ್ಸಟ್ಯೂಟನ ಮುಖ್ಯ ವೈದ್ಯ ಶಿಕ್ಷಣ ಸಲಹೆಗಾರರು. ಅವರ ಹೆಸರಿನಲ್ಲಿರುವ ಪ್ರತಿಷ್ಠಾನ ಬಡ ಅರ್ಹ ವೈದ್ಯ ವಿದ್ಯಾರ್ಥಿಗಳಿಗೆ ಅವರ ಶಿಕ್ಷಣಾವಧಿ ಪರ್ಯಂತ ಶಿಷ್ಯವೇತನಗಳನ್ನು ನೀಡುತ್ತದೆ, ಮತ್ತು ಸಮಾಜಕ್ಕೆ ನಿರಪೇಕ್ಷತೆಯಿಂದ ಸಲ್ಲಿಸುತ್ತಿರುವ ವೈದ್ಯರಿಗೆ ವೈದ್ಯಶ್ರೀ ಪ್ರಶಸ್ತಿ ನೀಡಿ ಗೌರವಿಸುತ್ತಿದೆ. ಅವರು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸದಸ್ಯರು. ಇಂಥ ಮೇರು ವ್ಯಕ್ತಿತ್ವವನ್ನು ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ ಅವರು ಯಾವತ್ತು ನೆನೆಯುತ್ತಿರುತ್ತಾರೆ.

ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆ

ಕರ್ನಾಟಕದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯೂ ಒಂದು. ಈ ಭಾಗದಲ್ಲಿ ಎಲ್ಲರಿಗೂ ಉನ್ನತ ಶಿಕ್ಷಣ ಸಿಗಬೇಕು ಅದು ಗುಣಾತ್ಮಕವಾಗಿರಬೇಕೆಂಬ ಸದಾಶಯದಿಂದ ೧೯೫೮ ರಲ್ಲಿ ದಿವಂಗತ ಶ್ರೀ ಮಹಾದೇವಪ್ಪ ರಾಂಪುರೆ ಅವರು ಸ್ಥಾಪಿಸಿದರು. ಉನ್ನತ ಶಿಕ್ಷಣದ ಅಗತ್ಯತೆಗಳನ್ನು ಪೂರೈಸಲು ಮಹಾದೇವಪ್ಪ ರಾಂಪುರೆ, ವಿಶೇಷವಾಗಿ ವೈದ್ಯಕೀಯ, ಎಂಜಿನಿಯರಿಂಗ್ ಫಾರ್ಮಸಿ, ಕಾನೂನು, ಶಿಕ್ಷಣ, ವಾಣಿಜ್ಯ, ಕಲೆ ಮತ್ತು ವಿಜ್ಞಾನ ಮತ್ತು ಇತರ ವೃತ್ತಿಪರ ತಾಂತ್ರಿಕ ಕ್ಷೇತ್ರಗಳ ಅಧ್ಯಯನಕ್ಕೆ ಆದ್ಯತೆ ನೀಡಿದರು. ರಾಜ್ಯದ ಹಿಂದುಳಿದ ಪ್ರದೇಶವಾದ ಇಲ್ಲಿ ಉನ್ನತ ಶಿಕ್ಷಣವನ್ನು ನೀಡುತ್ತಲೆ ಈ ಭಾಗದ ಸಮಾಜೋ-ಸಾಂಸ್ಕೃತಿಕ ಹಾಗೂ ಆರ್ಥಿಕ ಪ್ರಗತಿಯ ಮೇಲೆ ಅದರ ಪ್ರಭಾವವನ್ನು ಬೀರಿದ್ದು ಗಮನಾರ್ಹ. ಕಾಲಕಾಲಕ್ಕೆ ಬಹುಮುಖಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗುತ್ತದೆ. ಪ್ರಜಾಪ್ರಭುತ್ವ ಮೌಲ್ಯಗಳಿಂದ ಪ್ರೇರಿತರಾಗಿ, ಸೊಸೈಟಿಯನ್ನು ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಇತರ ೧೩ ಚುನಾಯಿತ ಆಡಳಿತ ಮಂಡಳಿ ಸದಸ್ಯರನ್ನು ಒಳಗೊಂಡಿರುವ ಮಂಡಳಿಯು ಕಾರ್ಯ ನಿರ್ವಹಿಸುತ್ತಿದ್ದು ಡಾ. ಬಸವರಾಜ ಜಿ. ಪಾಟೀಲರು ಸುಮಾರು ಹತ್ತು ಅವಧಿಗಳ ಕಾಲ ಆಡಳಿತ ಮಂಡಳಿ ಸದಸ್ಯರಾಗಿ ಆಯ್ಕೆಯಾಗಿದ್ದು ಗಮನಾರ್ಹ ಸಂಗತಿ.

ಸಂಸ್ಥೆಯು ಆರೋಗ್ಯ ಶಿಕ್ಷಣ, ಬೋಧನಾ ಆಸ್ಪತ್ರೆಗಳು, ವೃತ್ತಿಪರ ತಾಂತ್ರಿಕ ಸಂಸ್ಥೆಗಳು, ಪದವಿ ಕಾಲೇಜುಗಳು, ವಿಶ್ವವಿದ್ಯಾಲಯ ಪದವಿಪೂರ್ವ ಕಾಲೇಜುಗಳು, ಪ್ರೌಢ, ಪ್ರಾಥಮಿಕ ಶಾಲೆಗಳು ಮತ್ತು ವಸತಿ ನಿಲಯಗಳು ಸೇರಿ ೩೯ ಅಂಗಸಂಸ್ಥೆಗಳನ್ನು ನಡೆಸಲಾಗುತ್ತಿದೆ ಕಲಬುರ್ಗಿಯಲ್ಲಿ ಆರಂಭವಾದ ಈ ಸಂಸ್ಥೆ ಬೆಂಗಳೂರು ಸೇರಿದಂತೆ ಅನೇಕ ಕಡೆ ಶಾಲಾ ಕಾಲೇಜುಗಳಿದ್ದು ಅದರಲ್ಲಿ ಬೀದರನ ಬಿ.ವ್ಹಿ. ಭೂಮರೆಡ್ಡಿ ಕಾಲೇಜು ಒಂದು.

ಬಿ.ವ್ಹಿ.ಬಿ. ಕಾಲೇಜು ಬೀದರ :

ಬೀದರದವರು ಉನ್ನತ ಶಿಕ್ಷಣ ಪಡೆಯ ಬೇಕಾದರೆ ಹೈದ್ರಾಬಾದ ಅಥವಾ ಧಾರವಾಡಕ್ಕೆ ಹೋಗಬೇಕಿತ್ತು.

ಬೀದರದಲ್ಲಿ ೧೯೬೦ ಮೇ ತಿಂಗಳಲ್ಲಿ ಅರವತ್ತನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಚರಿಸಲು ನಿರ್ಧಾರ ತೆಗೆದುಕೊಂಡರು. ಆ ಸಮ್ಮೇಳನಕ್ಕೆ ಮುಖ್ಯ ಅತಿಥಿಗಳೆಂದು ಶ್ರೀ ಮಹಾದೇವಪ್ಪ ರಾಂಪೂರೆಯವರನ್ನು ಬರ ಮಾಡಿಕೊಂಡರು. ಆ ಕಾರ್ಯಕ್ರಮಕ್ಕೆ ಶಿಕ್ಷಕರು, ವ್ಯಾಪಾರಸ್ಥರು, ಗಣ್ಯ ವ್ಯಕ್ತಿಗಳು, ಶಾಸಕರು, ವಿದ್ಯಾರ್ಥಿಗಳೆಲ್ಲರೂ ಆಗಮಿಸಿದ್ದರು.

ಶ್ರೀ ಪ್ರಭುರಾವ ಕಂಬಳಿವಾಲೆ ವಕೀಲರು ಒಳ್ಳೆಯ ಸ್ವಾಗತ ಭಾಷಣ ಮಾಡುತ್ತಲೆ ಬೀದರದ ಸಮಸ್ತ ನಾಗರಿಕರ ಒಂದು ಬೇಡಿಕೆ ಮುಂದೆ ಇಟ್ಟರು. ಏನೆಂದರೆ ಹೈದರಾಬಾದ ಕರ್ನಾಟಕದಲ್ಲಿಯೇ ಅತೀ ಹಿಂದುಳಿದ ಜಿಲ್ಲೆ ಬೀದರ. ಎಲ್ಲ ವಿದ್ಯಾರ್ಥಿಗಳಿಗೂ ವಿದ್ಯಾರ್ಜನೆಗೆ ಹೈದರಾಬಾದಕ್ಕೆ ಹೋಗಲು ಸಾಧ್ಯವಿಲ್ಲ. ಅದಕ್ಕಾಗಿ ತಮ್ಮ ಹೈದರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ವತಿಯಿಂದ ಒಂದು ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯವನ್ನು ಬೀದರದಲ್ಲಿ ಪ್ರಾರಂಭಿಸಬೇಕೆಂದು ಮನವಿ ಇಟ್ಟರು.

ಶ್ರೀ ಮಹಾದೇವಪ್ಪ ರಾಂಪೂರೆಯವರು ತಮ್ಮ ಭಾಷಣದಲ್ಲಿ ನಾವು ಹೈ.ಕ.ಶಿ. ಸಂಸ್ಥೆಯ ಮೂಲಕ ಜೂನದಿಂದಲೇ ಬೀದರನಲ್ಲಿ ಕಾಲೇಜನ್ನು ಪ್ರಾರಂಭ ಮಾಡುತ್ತೇವೆಂದು ಆಶ್ವಾಸನೆಕೊಟ್ಟರು, ಸೊಸೈಟಿಯ ಮೊದಲನೇ ಕಾಲೇಜು–ಗುಲಬರ್ಗಾದ ಇಂಜನೀಯರಿಂಗ್ ಕಾಲೇಜು, ಇದು ಎರಡನೇ ಕಾಲೇಜಾದರೆ ಆಗುವದೆಂದು ಘೋಷಿಸಿದರು, ಅಲ್ಲಿ ನೆರೆದಂಥ ಎಲ್ಲ ಜನರು, ತಮ್ಮ ಹರ್ಷವನ್ನು ಚಪ್ಪಾಳೆ ಮೂಲಕ ವ್ಯಕ್ತಪಡಿಸಿದರು.

ಜೂನ್ ೧೯೬೦ ರಲ್ಲಿ ಹೈದ್ರಾಬಾದ ಶಿಕ್ಷಣ ಸಂಸ್ಥೆ ವತಿಯಿಂದ ಕಾಲೇಜು ಪ್ರಾರಂಭವಾದ್ದದು, ಕರಾಶಿ ಸಂಸ್ಥೆಯ ಕರ್ನಾಟಕ ಹೈಸ್ಕೂಲದಲ್ಲಿ ಮುಂಜಾನೆ ೭.೩೦ ರಿಂದ ೧೦.೪೫ ಗಂಟೆವರೆಗೆ ಕಾಲೇಜ ನಡೆಯುತ್ತಿತ್ತು.

ಮುಂದೆ ೧೧:೦೦ ಗಂಟೆಯಿಂದ ಅವರ ಕರ್ನಾಟಕ ಹೈಸ್ಕೂಲ ಆರಂಭವಾಗುತ್ತಿತ್ತು.

ಮುಂದೆ ಕೆಲವೇ ದಿನಗಳಲ್ಲಿ ಅಧ್ಯಕ್ಷರು ಈ ಕಾಲೇಜಿಗಾಗಿ ಅದೆ ವರ್ಷ ಅಂದರೆ ೧೯೬೦ ರಲ್ಲಿ ಎಚ್.ಕೆ.ಇ. ಸೊಸೈಟಿಯ ಅಧ್ಯಕ್ಷರು ಒಂದು ಸಲಹಾ ಮಂಡಳಿಯನ್ನು ನಿಗದಿ ಪಡಿಸಿದರು. ಅದರಲ್ಲಿ ಈ ಕೆಳ ಗಣ್ಯ ವ್ಯಕ್ತಿಗಳಿದ್ದರು.

೧.	ಶ್ರೀ ಪ್ರಭುರಾವ ವಕೀಲರು	ಸಂಸ್ಥಾಪಕ ಸದಸ್ಯರು
೨.	ಶ್ರೀ ಮಹಿಪಾಲಸಿಂಗ್ ಪವಾರ	ಸದಸ್ಯರು
೩.	ಶ್ರೀ ಶೇಷರಾಮ ಕಾಮತಿಕರ	ಸದಸ್ಯರು
೪.	ಶ್ರೀ ಶ್ರೀನಿವಾಸರಾವ ಎಕ್ಕೇಹಳ್ಳಿಕರ	ಸದಸ್ಯರು
೫.	ಶ್ರೀ ಗೋಪಾಲರಾವ ಬಿ.	ಶಾಸಕರು, ಬೀದರ
೬.	ಶ್ರೀ ಆರ್. ವ್ಹಿ. ಬೀಡಪ	ಸದಸ್ಯರು
೭	ಶ್ರೀ ವೀರಶೆಟ್ಟೆಪ್ಪ ಚಂದಾ	ಸದಸ್ಯರು
೮.	ಶ್ರೀ ಶಿವರುದ್ರಪ್ಪ ವಕೀಲರು	ಸದಸ್ಯರು
೯.	ಶ್ರೀ ರುದ್ರಪ್ಪ ವಕೀಲರು	ಸದಸ್ಯರು
೧೦.	ಶ್ರೀ ವೀರಶೆಟ್ಟಿ ಕುಶನೂರ	ಸದಸ್ಯರು
೧೧.	ಶ್ರೀ ಮಾಣಿಕರಾವ ಘುಲೇಕರ	ಸದಸ್ಯರು
೧೨.	ಶ್ರೀ ಇಟಗಿಪಲ್ಲಿ ದೇಶಮುಖ	ಸದಸ್ಯರು

ಕಾಲೇಜಿನ ಯಾವುದೇ ವಿಷಯಗಳನ್ನು ವಿಚಾರಿಸಬೇಕಾದಾಗ ಇವರೆಲ್ಲರನ್ನು ಕರೆದು ವಿಚಾರಿಸಬೇಕಿತ್ತು.

ಶ್ರೀ ಜಿ. ಟಿ. ಸಾಸನೂರ ಅವರನ್ನು ಬರಮಾಡಿಕೊಂಡರು. ಅವರು ಈ ಕಾಲೇಜಿನ ಪ್ರಾಚಾರ್ಯರೆಂದು ೧೬ನೇ ನವೆಂಬರ ೧೯೬೦ ರಂದು ಬಂದು ಸೇವೆಗೆ ಹಾಜರಾದರು. ಅಂದಿನಿಂದ ಕಾಲೇಜಿನ ಪ್ರಗತಿ ಪ್ರಾರಂಭವಾಯಿತು.

ಕಾಲೇಜು ಪ್ರಾರಂಭವಾದ ಕೂಡಲೇ ಕೇವಲ ೬೦ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರು. ಅದರಲ್ಲಿ ೩೦ ವಿದ್ಯಾರ್ಥಿಗಳು ಆರ್ಟ್ಸ್ ದಲ್ಲಿ ಮತ್ತು ೩೦ ವಿದ್ಯಾರ್ಥಿಗಳು ಸೈನ್ಸ್ ದಲ್ಲಿ ಅಭ್ಯಾಸ ಮಾಡುತ್ತಿದ್ದರು. ಮೊದಲನೇ ವರ್ಷ ೭ ಶಿಕ್ಷಕರನ್ನು ಕಲಾ ವಿಭಾಗದಲ್ಲಿ ಮತ್ತು ೪ ಶಿಕ್ಷಕರನ್ನು ವಿಜ್ಞಾನ ಭಾಗದಲ್ಲಿ ನೇಮಕ ಮಾಡಲಾಗಿತ್ತು. ಎಲ್ಲ ಕ್ಲಾಸಗಳನ್ನು ೧೧ ಶಿಕ್ಷಕರು ದಿನನಿತ್ಯ ತೆಗೆದುಕೊಳ್ಳುತ್ತಿದ್ದರು.

ಕರ್ನಾಟಕ ಹೈಸ್ಕೂಲದಲ್ಲಿ ಪ್ರ್ಯಾಕ್ಟಿಕಲ್‌ಗಳನ್ನು ನಡೆಸಲಿಕ್ಕೆ ಅವಕಾಶವಿದ್ದಿಲ್ಲ. ಅದಕ್ಕಾಗಿ ಮಾತನಕೇರಿಯಲ್ಲಿ ಅಜೀಜ್ ಮಂಜಿಲ್‌ವೆಂಬ ಕಟ್ಟಡವನ್ನು ಬಾಡಿಗೆಯಿಂದ ತೆಗೆದುಕೊಂಡು ಮೂರು ಲ್ಯಾಬಗಳನ್ನು ಅದರಲ್ಲಿಯೇ ನಡೆಸಲಾಯಿತು. ಇಷ್ಟರಲ್ಲಿ ಅಕ್ಟೋಬರ ತಿಂಗಳು ಬಂದಿತು.

ಪ್ರೊ. ಎಸ್.ಜಿ. ಪಾಟೀಲರು ಒಂದು ಸಲ ಅಕ್ಟೋಬರ ತಿಂಗಳಲ್ಲಿ ಹೋಗಿ, ಅಧ್ಯಕ್ಷರಿಗೆ ಇಲ್ಲಿಯ ಪರಸ್ಥಿತಿ ಅಂದರೆ ವಿಶೇಷವಾಗಿ ಸೈನ್ಸ ಪ್ರಾಕ್ಟಿಕಲ್ಸ್‌ಗಳನ್ನು ಶುರು ಮಾಡಲಿಕ್ಕೆ ಇರುವ ತೊಂದರೆಗಳನ್ನು ಸವಿಸ್ತಾರವಾಗಿ ಹೇಳಿದರು.

ಅದೇ ಸಮಯದಲ್ಲಿ ೩ ಪ್ರಯೋಗಾಲಯಗಳಿಗೆ ಬೇಕಾಗುವಂಥ ಎಲ್ಲ ಪಾತ, ಪೀಠೋಪಕರಣಗಳನ್ನು ಸೋಲಾಪೂರದಿಂದ ತರಿಸಿದರು. ಕೊಟ್ಟರು. ಎಲ್ಲ ಪ್ರಯೋಗಾಲಯ ಸಲಕರಣೆಗಳಿಗಾಗಿ ಮುಂಬೈನಿಂದ ಇವೆಲ್ಲಾ ಸಲಕರಣೆಗಳು ಕೇವಲ ಒಂದು ತಿಂಗಳಲ್ಲಿ ಪ್ರಯೋಗಾಲಯಗಳಿಗೆ ಬಂದವು. ೧೫ನೇ ನವೆಂಬರನಿಂದ ಪ್ರ್ಯಾಕ್ಟಿಕಲ್‌ಗಳನ್ನು ಆರಂಭಿಸಲಾಯಿತು. ದಿನನಿತ್ಯ ಥೇರಿ ಕ್ಲಾಸಗಳನ್ನು ಕರ್ನಾಟಕ ಹೈಸ್ಕೂಲ್‌ದಲ್ಲಿ, ಪ್ರಾಕ್ಟಿಕಲ್ಸ್‌ಗಳನ್ನು ಅಜೀಜ ಮಂಜಿಲ್ ಕಟ್ಟಡದಲ್ಲಿ ತೆಗೆದುಕೊಳ್ಳಲಾರಂಬಿಸಿದರು.

ಶ್ರೀ ಮಹಾದೇವಪ್ಪ ರಾಂಪೂರೆಯವರು ಬಿ.ಫ್ಟಿ.ಭೂಮರಡ್ಡಿ ಗದಗ ಇವರ ಮನವೊಲಿಸಿ, ಈ ಮಹಾವಿದ್ಯಾಲಯಕ್ಕೆ ೫೦,೦೦೦ (ಐವತ್ತು

ಸಾವಿರ ರೂಪಾಯಿಗಳನ್ನು) ದೇಣಿಗೆ ರೂಪದಲ್ಲಿ ತೆಗೆದುಕೊಂಡರು ಮತ್ತು ಈ ಮಹಾವಿದ್ಯಾಲಯಕ್ಕೆ ಅವರ ಹೆಸರಿಡಲಾಯಿತು. ಅಂದಿನಿಂದ ಈ ಮಹಾವಿದ್ಯಾಲಯಕ್ಕೆ ಬಿ.ವಿ.ಭೂಮರಡ್ಡಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜ ಎಂದು ನಾಮಕರಣ ಮಾಡಲಾಯಿತು.

ಈ ಕಾಲೇಜಿನ ಅಡಿಗಲ್ಲು ಸಮಾರಂಭಕ್ಕೆ ಮತ್ತು ಉದ್ಘಾಟನಾ ಸಮಾರಂಭಕ್ಕೆ ಆಗ ಕೇಂದ್ರ ಸರಕಾರದಲ್ಲಿ ಶಿಕ್ಷಣ ಮಂತ್ರಿಗಳಾಗಿದ್ದ ಡಾ. ಕೆ. ಎಲ್. ಶ್ರೀಮಾಲಿಯವರನ್ನು ೨೫ ಸೆಪ್ಟೆಂಬರದಂದು ಮುಖ್ಯ ಅತಿಥಿಗಳೆಂದು ಬರಮಾಡಿಕೊಳ್ಳಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸೊಸೈಟಿಯ ಅಧ್ಯಕ್ಷರಾದ ಶ್ರೀ ಮಹಾದೇವಪ್ಪ ರಾಂಪೂರೆಯವರು ವಹಿಸಿದ್ದರು. ಈ ಕಾರ್ಯಕ್ರಮವು ೨೬ನೇ ಸೆಪ್ಟೆಂಬರ ೧೯೬೦ರಂದು ಜರುಗಿತ್ತು. ಈ ಕಾರ್ಯಕ್ರಮಕ್ಕಾಗಿ Govt. Polytechnic ಜಾಗದಲ್ಲಿ ೨ ಎಕರೆ ಭೂಮಿ ಸಿಕ್ಕಿತ್ತು. ಅಲ್ಲಿಯೇ ಅಡಿಗಲ್ಲು ಸಮಾರಂಭ ಕಾರ್ಯಕ್ರಮ ಮಾಡಲಾಯಿತು.

ಕಾಲೇಜಂತೂ ಆರಂಭವಾಯಿತು, ಆದರೆ ಇದಕ್ಕೆ ತನ್ನದೇ ಆದ ಒಂದು ಬಿಲ್ಡಿಂಗ್ ಬೇಕು ಅನ್ನುವ ಪ್ರಸ್ತಾವನೆಯನ್ನು ಪ್ರಿನ್ಸಿಪಾಲ ಸಾಸನೂರರು ಸಲಹಾಮಂಡಳಿಯ ಸದಸ್ಯರ ಮುಂದೆ ಇಟ್ಟರು. ಮೊದಲು ನಾವು ಇದಕ್ಕೆ ಬೇಕಾಗುವಷ್ಟು ಭೂಮಿಯನ್ನು ತೆಗೆದುಕೊಳ್ಳಬೇಕು. ಈಗಿದ್ದಂಥ ಎರಡು ಏಕರೆ ಭೂಮಿ ಸಾಲದು ನಂತರ ಬಿಲ್ಡಿಂಗ್ ಕಟ್ಟಬೇಕು. ಅದಕ್ಕಾಗಿ ಎಲ್ಲರೂ ಕೂಡಿಕೊಂಡು ಬೀದರ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಆಲೂರು ಬಸವಪ್ಪ ಆಯ್.ಎ.ಎಸ್. ಅವರ ಹತ್ತಿರ ಹೋಗಿ ಕಾಲೇಜಿಗೆ ಬೇಕಾಗುವಷ್ಟು ಭೂಮಿಯನ್ನು ಒದಗಿಸಿಕೊಡಬೇಕೆಂದು ಪ್ರಸ್ತಾವನೆಯನ್ನು ಇಟ್ಟೆವು. ಅವರು ಒಮ್ಮಿಂದೊಮ್ಮೆಲೆ ನಿಮಗೆ ಬೇಕಾಗುವಷ್ಟು ಜಮೀನನ್ನು ಒದಗಿಸಿಕೊಡುವೆ ಎಂದು ಆಶ್ವಾಸನೆ ಕೊಟ್ಟರು. ಮುಂದೆ ಕೇವಲ ಮೂರು ತಿಂಗಳಲ್ಲಿಯೇ ೫೦ ಎಕರೆ ಜಮೀನನ್ನು ಕೂಡಿಸಿಕೊಟ್ಟರು.

ಖಜಾನೆಗೆ ಹೋಗಿ ೧೦,೦೦೦/- (ರೂಪಾಯಿ ಹತ್ತು ಸಾವಿರ ಮಾತ್ರ) ಚಾಲನ ಮುಖಾಂತರ ಭರಿಸಲಾಯಿತು. ರೈತರು ಹಣ ತೆಗೆದುಕೊಂಡು ಕೋರ್ಟಿನಲ್ಲಿ ಕೇಸ್ ಹಾಕಿ, ನ್ಯಾಯ ಹೂಡಿದರು. ಮತ್ತೊಮ್ಮೆ ಕೋರ್ಟಿನ ತೀರ್ಪಿನ ಪ್ರಕಾರ, ೧೬೦೦೦/- ರೂ. ಗಳನ್ನು ಎರಡನೆ ಸಲ ತುಂಬಿ ಬಂದದ್ದಾಯಿತು.

ಆಗ ಭೂಮಿ ಸಿಕ್ಕಿತು ಆದರೆ ಬಿಲ್ಡಿಂಗ್ ಕಟ್ಟಲಿಕ್ಕೆ ಹಣಬೇಕು. ಮೊದಲು ನಮ್ಮಿಂದ ಶುರು ಆಗಲಿ ಅನ್ನುವ ವಿಚಾರವನ್ನು ಸಾಸನೂರ ಅವರು ವ್ಯಕ್ತಪಡಿಸಿದರು. ಅದಕ್ಕಾಗಿ ಬೀದರಲ್ಲಿರುವ ಎಲ್ಲ ಪ್ರಮುಖ ಜನರನ್ನೊಳಗೊಂಡ ಒಂದು ಪಟ್ಟಿ ತಯಾರ ಮಾಡಿ ಕೆಲವು ಪ್ರಮುಖರು ಮತ್ತು ಶಿಕ್ಷಕರು ಕೂಡಿ ಎಲ್ಲರಲ್ಲಿ ಹೋಗಿ ದೇಣಿಗೆ ಕೊಡುವ ಪ್ರಸ್ತಾವನೆಯನ್ನು ಇಟ್ಟರು. ಇದೇ ರೀತಿ ಎರಡೂ ಮೂರು ಸಲ ಹೋಗಿ, ಕೆಳಿದರೂ ಅದು ಅಷ್ಟೊಂದು ಹೇಳಿಕೊಳ್ಳುವಷ್ಟು ಪ್ರಯೋಜನವೆನಿಸಲಿಲ್ಲ. ಅದಕ್ಕಾಗಿ ವ್ಯಕ್ತಿಗಳನ್ನು ಹಾಗೂ ಸಂಸ್ಥೆಗಳನ್ನು ಕೇಳಬೇಕೆಂದು ವಿಚಾರಮಾಡಿದರು.

ಅದಕ್ಕಾಗಿ ಪ್ರಿನ್ಸಿಪಾಲ ಸಾಸನೂರ ಅವರು ಒಂದು ಒಳ್ಳೆಯ ಮನವಿ ಸಿದ್ದಪಡಿಸಿದರು. ಅದನ್ನು ಪ್ರತಿಯೊಂದು ತಾಲೂಕಿನಲ್ಲಿ ಇರತಕ್ಕ ನಗರಸಭೆಗಳಿಗೂ ಮತ್ತು ತಾಲೂಕಾ ಬೋರ್ಡ್‌ಗಳಿಗೂ ಕಳಿಸಿಕೊಟ್ಟರು. ಎಲ್ಲರೂ ನಮ್ಮ ಜಿಲ್ಲೆಗೆ ಒಂದು ಕಾಲೇಜು ಬರ್ತಿದೆ. ಅದಕ್ಕಾಗಿ ನಮ್ಮಿಂದ ಎಷ್ಟು ಶಕ್ಯವಿದೆ. ಅಷ್ಟು ಸಹಾಯ ಮಾಡೋಣ ಅಂತಾ ಅವರೆಲ್ಲರ ಮನಸ್ಸಿನಲ್ಲಿ ಬಂತು ಮತ್ತು ಅವರೆಲ್ಲರೂ ಸಹಾಯ ಮಾಡಿದರು. ಆಗ ಕಟ್ಟಡ ಕಟ್ಟಿಸುವ ಕೆಲಸ ೧೯೬೧ರಲ್ಲಿ ಶುರು ಆಯಿತು. ಅದರದೆಲ್ಲ ಕಟ್ಟುವ ಕೆಲಸವನ್ನು ಸರದಾರ ಜೋಗಾಸಿಂಗ್ ಅವರಿಗೆ ಒಪ್ಪಿಸಿದರು. ಅವರು ಕೂಡ ಎಚ್.ಕೆ.ಇ. ಸಂಸ್ಥೆಯ ಸದಸ್ಯರಾಗಿ ನಾಮಕರಣಗೊಂಡಿದ್ದರು. ಅದೇ ವರ್ಷ ಅಂದರೆ ೧೯೬೧ ರಲ್ಲಿ ನೆಲ ಮಹಡಿ ಜನವರಿ/ಫೆಬ್ರವರಿಯಲ್ಲಿ ತಯಾರಾಯಿತು. ಅಂದರೆ ಕೆಲವು ಕ್ಲಾಸ್ ರೂಮ್‌ಗಳನ್ನು ಆಡಳಿತಕ್ಕೆ ಬೇಕಾಗುವಷ್ಟು ರೂಮುಗಳನ್ನು ಇದರಲ್ಲಿ ಹೊಂದಾಣಿಕೆ ಮಾಡಬಹುದಾಯಿತು.

ಮಾರ್ಚ್ ೧೯೭೭ ರಲ್ಲಿ ವಾರ್ಷಿಕ ಸ್ನೇಹ ಸಮ್ಮೇಳನವನ್ನು ಅಲ್ಲಿಯೇ ಮಾಡೋಣವೆಂದು ಪ್ರಿನ್ಸಿಪಾಲ ಸಾಸನೂರರು ನಿರ್ಧಾರ ಮಾಡಿದರು. ನೆಲ ಮನೆಯಲ್ಲಿ ರೂಮಗಳಾಗಿವೆ. ಬಾಗಿಲು, ಕಿಟಕಿಗಳನ್ನು ಕೂಡಿಸಿರಲಿಲ್ಲ. ಒಳಗಡೆ ಪ್ಲಾಸ್ಟರಿಂಗ್ ಆಗಿತ್ತು ಆದರೆ ಹೊರಗಡೆಯಲ್ಲಿ ಆಗಿರಲಿಲ್ಲ. ನೀರಿನ ಸಮಸ್ಯೆ ಇತ್ತು ಆದರೂ ಕೂಡಾ ಅಲ್ಲಿಯೇ ಸ್ನೇಹ ಸಮ್ಮೇಳನ ಮಾಡುವದನ್ನು ನಿರ್ಧರಿಸಿದರು.

ಆ ವರ್ಷದ ವಾರ್ಷಿಕ ಸ್ನೇಹ ಸಮ್ಮೇಳನಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಿ.ಸಿ. ಪಾವಟೆಯವರನ್ನು ಮುಖ್ಯ ಅತಿಥಿಗಳೆಂದು ಬರಮಾಡಿಕೊಳ್ಳಲಾಯಿತು.

ಜೂನ ೧೯೭೭ ರಲ್ಲಿ ಹೊಸ ಕ್ಯಾಂಪಸ್ಸಿಗೆ ಸ್ಥಳಾಂತರ ಮಾಡಿ ನಿಯಮಿತ ಕ್ಲಾಸುಗಳನ್ನು ಅಲ್ಲಿಯೇ ನಡೆಸಲು ಪ್ರಾರಂಭಿಸಲಾಯಿತು. ಆದರೆ ಆ ವರ್ಷವೂ ಕೂಡಾ ಅದೇ ಹಳೇ ಕಟ್ಟಡ ಅಜೀಜ ಮಂಜಿಲ್‌ನಲ್ಲಿ ಪ್ರಯೋಗಗಳನ್ನು ನಡಿಸಿದರು. ಪ್ರೊ. ಬಿ.ಟಿ. ಸಾಸನೂರವರು ಕಾಲೇಜು ಹೇಗೆ ಅಭಿವೃದ್ಧಿಪಡಿಸಬೇಕು. ಅದಕ್ಕೆ ಬೇಕಾಗುವ ನಿಧಿಗಳನ್ನು ಹೇಗೆ ಕೂಡಿಸಬೇಕೆನ್ನುವದನ್ನು ಹಗಲಿರುಳು ವಿಚಾರ ಮಾಡುತ್ತಿದ್ದರು. ಮುಂದೆ ಕೆಲವೇ ದಿವಸಗಳಲ್ಲಿ ಶ್ರೀ ಎನ್.ಕೆ. ಪ್ರಭಾಕರರಾವ, ಆಯ್.ಎ.ಎಸ್. ಜಿಲ್ಲಾಧಿಕಾರಿಗಳಾಗಿ ಬಂದರು. ಕಾಲೇಜಕ್ಕೆ ಒಂದು ಕಾರ್ಯಕ್ರಮದ ನಿಮಿತ್ತವಾಗಿ ಕರೆಸಿಕೊಂಡರು ನಮ್ಮ ಎಲ್ಲ ಹಣಕಾಸಿನ ತೊಂದರೆಯನ್ನು ಸವಿಸ್ತಾರವಾಗಿ ಹೇಳಿದರು. ಆಗ ಅವರು Don’t worry I shall definitely help financially to your college regarding construction of building. ಎಂದು ಆಶ್ವಾಸನೆ ನೀಡಿ ಅಧ್ಯಕ್ಷರಾದ ಶ್ರೀ ಮಹಾದೇವಪ್ಪ ರಾಂಪೂರೆ ಎಂ.ಪಿ. ಅವರೂ ಕೂಡಾ ಹೊಸ ಜಿಲ್ಲಾದಿಕಾರಿಗಳಿಗೆ ಈ ದಿಶೆಯಲ್ಲಿ ಹೇಳಿದ್ದರು.

ಸ್ವಲ್ಪ ದಿನಗಳಲ್ಲಿ ಎಲ್ಲ ಗಾಂಧಿಗಂಜಿನ ವ್ಯಾಪಾರಸ್ಥರು, ಯಾವುದೇ ಪರವಾನಿಗೆ ತೆಗೆದುಕೊಳ್ಳಬೇಕಾದರೆ ಬಿ.ವ್ಹಿ.ಬಿ. ಕಾಲೇಜಿಗೆ ಹೋಗಿ ಚೀಲಕ್ಕೆ ಒಂದು ರೂ.ಯಂತೆ ಹಣ ತುಂಬಿ ಪಾವತಿ ತೋರಿಸಿದ ಕೂಡಲೇ ಪರ್ಮಿಟ್ ಕೊಡುತ್ತಿದ್ದರು. ಆಗ ಬೀದರದಿಂದ ಅಕ್ಕಿಯನ್ನು ಬೇರೆ, ಬೇರೆ ರಾಜ್ಯಗಳಿಗೆ ಕಳಿಸುತ್ತಿದ್ದರು. ಸುಮಾರು ಎರಡು ವರ್ಷಗಳಲ್ಲಿ ೭-೮ ಲಕ್ಷ ರೂ. ಗಳನ್ನು ಶ್ರೀ ಎಸ್.ಕೆ. ಪ್ರಭಾಕರರಾವರು ಕೂಡಿಸಿಕೊಟ್ಟರು. ಅದರಿಂದ ಮೊದಲ ಅಂತಸ್ತು ನೆಲ ಮಹಡಿ ರಸಾಯನಶಾಸ್ತ್ರ ವಿಭಾಗ, ಭೌತಶಾಸ್ತ್ರ ವಿಭಾಗಗಳು, ಅಂದರೆ ಮೂರು ಹೆಚ್ಚುವರಿ ವಿಭಾಗಗಳು ಒಟ್ಟಿಗೆ ನಾಲ್ಕು ವಿಭಾಗಗಳಾದವು.

ಸ್ವಲ್ಪ ದಿನಗಳಲ್ಲಿ ಎಲ್ಲ ವಿಷಯಗಳನ್ನು Major Subject ಕೆಲವು Minor Subject ಗಳೆಂದು ವಿಶ್ವವಿದ್ಯಾಲಯದಿಂದ ಪರವಾನಿಗೆ ಪಡೆದೆವು. ಎಲ್ಲ ವರ್ಗಗಳಿಗೆ ಬೇಕಾಗುವಂಥ ಒಳ್ಳೆ ಫರ್ನಿಚರ್ ಡೆಸ್ಕುಗಳು, ಬ್ಲ್ಯಾಕ್ ಬೋರ್ಡುಗಳು ಟ್ಯೂಬ್‌ಲೈಟುಗಳನ್ನು, ಫ್ಯಾನುಗಳನ್ನು ಒದಗಿಸಲಾಯಿತು. ಅದೇ ತರ ಎಲ್ಲ ಪ್ರಯೋಗಾಲಯಗಳಿಗೆ ಟೇಬಲು, ಸ್ಟೂಲ್ ಸಲಕರಣೆಗಳನ್ನು ಒದಗಿಸಲಾಯಿತು. ಎಲ್ಲ ವಿಷಯಗಳನ್ನು ಕಲಿಸಲಿಕ್ಕೆ ಒಳ್ಳೆಯ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಯಿತು.

ಸುಮಾರು ೧೯೬೭-೬೮ ರಲ್ಲಿ ಹೈದರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯಲ್ಲಿ ಇನ್ನಷ್ಟು ಹೊಸಬರನ್ನು ಸದಸ್ಯರನ್ನಾಗಿ ಮಾಡಬೇಕೆನ್ನುವ ಕೂಗು, ಗುಲಬರ್ಗಾದಲ್ಲಿ ಪ್ರಾರಂಭವಾಯಿತು. ಬೀದರದಿಂದ ಕೆಲವರಾದರು ಸದಸ್ಯರಾದರೆ ಆ ಕಾಲೇಜನ್ನು ಒಳ್ಳೆ ರೀತಿಯಿಂದ ಅಭಿವೃದ್ಧಿ ಮಾಡಬಹುದೆಂದು ವಿಚಾರ ಮಾಡಿದರು.

ಎರಡನೆ ಹಂತದಲ್ಲಿ – ವಿಶೇಷವಾಗಿ ಡಾ॥ ಐ. ಎಸ್. ಕೌಜಲಗಿಯವರು ಹೆಚ್ಚು ಆಸಕ್ತಿ ವಹಿಸಿದರು.

೧) ಶ್ರೀ ವೀರಶೆಟ್ಟಿ ಕುಸನೂರ

೨) ಶ್ರೀ ಸಿದ್ರಾಮಪ್ಪ ಪಾಟೀಲ

೩) ಶ್ರೀ ನಾಗಣ್ಣ ಜಾಬಶೆಟ್ಟಿ

೪)   ಶ್ರೀ ಅಪ್ಪಾರಾವ ಮಿಠಾರೆ

೫)   ಡಾ. ಆಯ್.ಎಸ್. ಕೌಜಲಗಿ

೬)   ಡಾ. ಬಿ.ವಿ.ಚಂದಾ – ಮೊದಲಾದವರನ್ನು ಹೈ.ಕ.ಶಿ. ಸಂಸ್ಥೆಯ ಆಜೀವ ಸದಸ್ಯರನ್ನಾಗಿ ಮಾಡಿದರು.

ಮೊದಲಿಗೆ ಸೊಸೈಟಿಯ ನಿಯಮಾವಳಿಯಲ್ಲಿ ಎರಡು ಉಪಾಧ್ಯಕ್ಷರ ಹುದ್ದೆಗಳಿದ್ದವು. ಒಂದು ಯಾವಾಗಲೂ ಗುಲಬರ್ಗಾಕ್ಕೆ ಸೀಮಿತವಾಗಿತ್ತು. ಇನ್ನೊಂದನ್ನು ಅಧ್ಯಕ್ಷರು ರಾಯಚೂರಿಗೆ ಅಥವಾ ಬೀದರಕ್ಕೆ ಕೊಡುವ ಪದ್ಧತಿಯಿತು.

ಮೊದಲನೇ ಹಂತದಲ್ಲಿ ರಾಯಚೂರ ಜಿಲ್ಲೆಗೆ ಶ್ರೀ ಅಗಡಿ ಸಂಗಣ್ಣ ಅವರು, ಹೌಸಿಂಗ ಬೋರ್ಡ ಚೇರ್ಮನ್‌ರಾಗಿ ಕೆಲಸ ಮಾಡುತ್ತಿದ್ದರು. ಅವರನ್ನು ಉಪಾಧ್ಯಕ್ಷರೆಂದು ನಾಮಕರಣ ಮಾಡಿದರು.

ಎರಡನೇ ಹಂತದಲ್ಲಿ ಶ್ರೀ ಸಿದ್ರಾಮಪ್ಪ ಪಾಟೀಲರಿಗೆ ಬೀದರದಿಂದ ಉಪಾಧ್ಯಕ್ಷ ಹುದ್ದೆಗೆ ನಾಮಕರಣ ಮಾಡಿದರು. ಸುಮಾರು ಎಂಟು ವರ್ಷಗಳ ಕಾಲ ಉಪಾಧ್ಯಕ್ಷರಾಗಿ ಕೆಲಸ ಮಾಡಿದರು. ಅವರೂ ಕೂಡಾ ಜಿ.ಫ್ಹ.ಜಿ. ಭೂಮರೆಡ್ಡಿ ಮಹಾವಿದ್ಯಾಲಯ ಬೆಳೆಯಲು ಸಾಕಷ್ಟು ಸಹಾಯ ಮಾಡಿದರು.

ಮುಂದೆ ಸ್ವಲ್ಪ ದಿನ ಶ್ರೀ ವೀರಶೆಟ್ಟಿ ಕುಸನೂರ ಅವರಿಗೆ ಉಪಾಧ್ಯಕ್ಷರೆಂದು ನಾಮಕರಣ ಮಾಡಿದರು. ಅವರೂ ಕೂಡಾ ಸ್ವಲ್ಪ ಸಮಯದಲ್ಲಿ ಮಹಾವಿದ್ಯಾಲಯಕ್ಕೆ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಿದರು.

ಶ್ರೀ ಬಿ.ಟಿ. ಸಾಸನೂರವರು ೧೪ ವರ್ಷಗಳ ಸೇವೆಯಲ್ಲಿ – ನಾಲ್ಕು ವಿಂಗ್ಸಗಳನ್ನೊಳಗೊಂಡ ಕಟ್ಟಡ ತಯಾರಾಯಿತು. ಅವರು ಸೇವೆ ಸಲ್ಲಿಸುವಾಗ ಒಂದು ಅಂತರ್ ಕಾಲೇಜು ಕ್ರೀಡಾಕೂಟವು ಕೆ.ವಿ. ಧಾರವಾಡ

ನೇತೃತ್ವದಲ್ಲಿ ಜರುಗಿತು. ಆಗ ೫೪ ಎಕರೆ ಜಮೀನಿನಲ್ಲಿ ನಾಲ್ಕಾರು ದೊಡ್ಡ, ದೊಡ್ಡ ಗಿಡಗಳಿದ್ದವು. ಮೂರು ಹಾಳು ಬಾವಿಗಳಿದ್ದವು. ಇವುಗಳನ್ನೆಲ್ಲ ತೆಗೆಸಿ ಸರಿಪಡಿಸಲಾಯಿತು. ಹಾಳಬಾವಿಗಳನ್ನು ಮುಚ್ಚಿಸಿದ್ದಾಯಿತು. ೫೪ ಎಕರೆ ಭೂಮಿ ಎಲ್ಲವನ್ನು ಲೆವಲ್ ಮಾಡಿಸಿ ಸುತ್ತಲೂ ನೀರು ಹೋಗಲಿಕ್ಕೆ ಡ್ರೈನೇಜ, ಸ್ಪೋಟ್ಸಮೀಟ್ ನಡೆಯುವ ಗ್ರೌಂಡನಲ್ಲಿ ನೀರು ನಿಲ್ಲದಂತೆ ಮಾಡಿ ನೀರು ಹರಿದು ಹೋಗುವ ಹಾಗೆ ಮಾಡಿ ಕೊನೆಗೆ ಎಲ್ಲ ನೀರು ಸೈಕಲ್ ಶೆಡ್ಡಿನ ಹತ್ತಿರ ಇರುವ ತಡೆಗೋಡೆ ಬುಡದಿಂದ ಹೊರಗೆ ಹೋಗುವ ಹಾಗೆ ಮಾಡಿದರು. ಸ್ಪೋರ್ಟಮೀಟ್‌ಗೆ ಬೇಕಾಗುವ, ರನ್ನಿಂಗ್, ಟ್ರ್ಯಾಕ್, ಪೋಲ್‌ವಾಲ್ಟ್, ಲಾಂಗ್‌ಜಂಪ್, ಹೈಜಂಪ್, ಡಿಸಕಸ್ ಥ್ರೋ ಹ್ಯಾಮರ್ರ ಥ್ರೋ ಎಲ್ಲವುಗಳನ್ನು ಒದಗಿಸಿದ್ದರು. ಈ ಸ್ಪೋರ್ಟ್‌ಮೀಟ್‌ನಲ್ಲಿ ಅನೌನ್ಸ ಮಾಡಲಿಕ್ಕೆ ಪ್ರೊ. ಕೊಪ್ಪಾರ ಧಾರವಾಡ ಮತ್ತು ಪ್ರೊ. ಉಷಾ ಮೂರ್ತಿ ಅವರನ್ನು ಕರೆಸಲಾಯಿತು. ಸ್ಪೋರ್ಟಮೀಟ್ ಮಾಡಿದರೆಂದು ಕೊಂಡಾಡಿದರು.

ಬೀದರಕ್ಕೆ ಸ್ಪೋರ್ಟ್‌ಮೀಟ್ ಹೊಸದು, ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು ಭಾಗವಹಿಸಿ ತಮ್ಮಲ್ಲಿರುವ ಸಾಮರ್ಥ್ಯಗಳನ್ನು ಪ್ರದರ್ಶಿದರು. ಇದನ್ನು ನೋಡಿ-ಬೀದರ ಜನತೆ ಅತೀವ ಆನಂದ ಪಟ್ಟರು.

ಹ್ಯಾಂಡಿಂಗ ಓವರ್ ಚಾರ್ಜ ಆಫ್ ದ ಕಾಲೇಜು :

ಶ್ರೀ ಜಿ.ಟಿ. ಸಾಸನೂರುರವರು ೧೪ ವರ್ಷಗಳ ಕಾಲ ಅನುಪಮ, ಅದ್ವಿತೀಯ ಸೇವೆ ಸಲ್ಲಿಸಿದ ನಂತರ ಕರ್ನಾಟಕ ಪಬ್ಲಿಕ ಸರ್ವಿಸ್ ಕಮಿಷನಗೆ (ಕೆಪಿಎಸ್‌ಸಿ) ಗೆ ಮೆಂಬರ ಎಂದು ನಾಮಕರಣ ಆದರು. ಅವರು ಬೆಂಗಳೂರಿಗೆ ಹೋಗುವ ಪ್ರಸಂಗ ಬಂದಾಗ ಸೊಸೈಟಿಯ ಅದೇಶದ ಮೆರೆಗೆ ೭ನೇ ಜೂನ ೧೯೭೩ ರಂದು ಪ್ರೊ. ಎಸ್.ಜಿ. ಪಾಟೀಲರಿಗೆ ಚಾರ್ಜ್ ಕೊಡಲಾಯಿತು.

ಯು.ಜಿ.ಸಿ. ವತಿಯಿಂದ ಬಿಲ್ಡಿಂಗ್ ಗ್ರಾಂಟ್ಸ್ ಫಾರ ಎಕ್ಸೇನ್ಸಷನ ಫಾರ ಕನ್ಸ್ಟ್ರಕ್ಷನ್ ಆಫ್ ಲ್ಯಾಬೋರೇಟರಿ ಬಿಲ್ಡಿಂಗ್ ಮತ್ತು ಹಾಸ್ಟಲ ಕನ್ಸ್ಟ್ರಕ್ಷನ್ ಫೊರ ಬ್ಯಾಯ್ಸ್ ಬಂದಿತ್ತು. ಅದನ್ನು ಕೊಟ್ಟಂಥ ಎಲ್ಲ ಗ್ರಾಂಟ್ಸ್‌ಗಳನ್ನು ಉಪಯೋಗಿಸಲಾಯಿತು.

ಅದು ಅಲ್ಲದೇ ಫ್ಯಾಕಲ್ಟಿ ಇಂಪ್ರೂವ್‌ಮೆಂಟ್ಸ್ ಪ್ರೊಗ್ರಾಮದಲ್ಲಿ ಸಾಕಷ್ಟು ಜನ ಶಿಕ್ಷಕರನ್ನು ಎಂ.ಫೀಲ್ ಮಾಡಲಿಕ್ಕೆ ಮತ್ತು ಪಿ.ಎಚ್.ಡಿ. ಮಾಡಲಿಕ್ಕೆ ಡೆಪ್ಯೂಟ್ ಮಾಡಲಾಯಿತು. ಹೋದವರೆಲ್ಲರೂ ತಮ್ಮ ತಮ್ಮ ಪ್ರೊಜೆಕ್ಟ್ಸ್‌ಗಳನ್ನು ಮುಗಿಸಿ ಡಿಗ್ರಿಗಳನ್ನು ಪಡೆದು ವಾಪಸಾದರು.

ಯು.ಜಿ.ಸಿ. ಯಿಂದ ಬರತಕ್ಕ ಎಲ್ಲ ಧನಸಹಾಯವನ್ನು ಪಡೆದು ಈ ಮಹಾವಿದ್ಯಾಲಯವನ್ನು ಸರ್ವಾಂಗೀಣ ಬೆಳವಣಿಗೆ ಮಾಡಲು ಎಸ್.ಜಿ. ಪಾಟೀಲರು ಹಿಂದೆ ಬೀಳಲಿಲ್ಲ. ಈ ಕಾಲೇಜು ೧೯೬೦ ರಲ್ಲಿ ಪ್ರಾರಂಭ ಆದಾಗ ಕೇವಲ ೬೦ ವಿದ್ಯಾರ್ಥಿಗಳಿದ್ದರು. ಸುಮಾರು ೧೯೮೨-೧೯೮೫ ರಲ್ಲಿ ಎರಡು ಸಾವಿರ ಮೇಲ್ಪಟ್ಟು ಅಂದರೆ – ಸುಮಾರು ೨೪೦೦ ವಿದ್ಯಾರ್ಥಿಗಳನ್ನು ೬೦ ಶಿಕ್ಷಕರನ್ನು, ೪೦ ಇತರೆ ಸಿಬ್ಬಂದಿ ವರ್ಗದವರನ್ನು ಹೊಂದಿ ಬೀದರ ಜಿಲ್ಲೆಯಲ್ಲಿಯೇ ಒಳ್ಳೇ ಹೆಸರು ಪಡೆಯಲಿಕ್ಕೆ ಕಾರಣವಾಯಿತು.

ಎಚ್.ಕೆ.ಇ. ಸೊಸೈಟಿಯು ಮೊದಲಿಗೆ ಗುಲಬರ್ಗಾದಲ್ಲಿ ಇಂಜಿನೀಯರಿಂಗ ಕಾಲೇಜನ್ನು ಮೊದಲನೆಯದಾಗಿ, ಹಾಗೆ ಬೀದರಲ್ಲಿ ಕಲಾ ಹಾಗೂ ವಿಜ್ಞಾನ ಮಹಾವಿದ್ಯಾಲಯವನ್ನು ಎರಡನೇದಾಗಿ ಸುರು ಮಾಡಿತು. ಮುಂದೆ ಅದು ಹೆಮ್ಮರವಾಗಿ ಬೆಳೆದು ಸುಮಾರು ೪೦-೪೫ ಕಾಲೇಜುಗಳನ್ನು ನಡಿಸಿಕೊಂಡು ಹೋಗತಾ ಇದೆ. ಇದಕ್ಕೆಲ್ಲ ಸೊಸೈಟಿಯಲ್ಲಿ ಅಧ್ಯಕ್ಷರಾಗಿ ಬಹಳ ಜನರು ಸೇವೆ ಸಲ್ಲಿಸಿದ್ದಾರೆ. ಅವರಲ್ಲಿ ಫೌಂಡರಪ್ರೆಸಿಡೆಂಟರಾಗಿ ದಿವಂಗತ ಮಹಾದೇವಪ್ಪ ರಾಂಪೂರೆಯವರ

ಸೇವೆ ಅವಿಸ್ಮರಣೀಯ ಯಾಕೆಂದರೆ ಕೆಲವೇ ವರ್ಷಗಳಲ್ಲಿ ಈ ಸಂಸ್ಥೆಯನ್ನು ದೂರದೃಷ್ಟಿ ಇಟ್ಟುಕೊಂಡು–ಬೀದರಿನಿಂದ ಹಿಡಿದು ಬೆಂಗಳೂರದವರೆಗೆ ಬೆಳೆಸಿದರು. ಬೆಂಗಳೂರಲ್ಲಿ ಕಾಲೇಜು ಸ್ಥಾಪನೆ ಮಾಡುವ ವಿಚಾರ ಇಟ್ಟುಕೊಂಡು ಆಗ ಚೀಫ್ ಮಿನಿಸ್ಟರ ಆಗಿ ಸೇವೆ ಸಲ್ಲಿಸುವಂಥ ಶ್ರೀ ರಾಮಕೃಷ್ಣ ಹೆಗಡೆ ಅವರಿಂದ ಸೈಟನ್ನು ಸ್ಯಾಂಕ್ಷನ್ ತೆಗೆದುಕೊಂಡು ಅಂದೇ ಇಹಲೋಕವನ್ನು ತ್ಯಜಿಸಿದರು.

ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಗಣ್ಯರು

ಶ್ರೀ ಮಹಾದೇವಪ್ಪ ರಾಮಪುರೆ ಸಂಸ್ಥಾಪಕ ಅಧ್ಯಕ್ಷರು

ಶ್ರೀ ಸಂಗಣ್ಣ ಅಗಡಿ

ಶ್ರೀ ಪೂಜ್ಯ ಶರಣ ಬಸವಪ್ಪ ಅಪ್ಪ

ಶ್ರೀ ಎಸ್. ಶಾಂತಿ

ಶ್ರೀ ಸೂರ್ಯನಾರಾಯಣ

ಶ್ರೀ ಟಿ.ಜೆ. ರಾಮಕೃಷ್ಣ

ಡಾ. ಎ.ಬಿ. ಮಾಲಕರೆಡ್ಡಿ

ಡಾ. ಬಿ.ಜಿ. ಜಾವಳಿ

ಶ್ರೀ ಬಸವರಾಜಪ್ಪ ಅಪ್ಪ

ಶ್ರೀ ಬಸವರಾಜ ಭೀಮಳ್ಳಿ

ಶ್ರೀ ಶಶೀಲ ಜಿ. ನಮೋಶಿ

ಡಾ. ಭೀಮಾಶಂಕರ ಬಿಲಗುಂದಿ

ಮೊದಲ ರಾಜಕೀಯ ಗುರು: ಡಾ. ಬಿ.ಜಿ. ಜವಳಿ

ಮಾಜಿ ಮುಖ್ಯಮಂತ್ರಿ ದಿ. ವೀರೇಂದ್ರ ಪಾಟೀಲರ ಅಳಿಯ ಡಾ. ಬಿ.ಜಿ. ಜವಳಿಯುವರು ಎಂ. ಆರ್. ಮೆಡಿಕಲ್ ಕಾಲೇಜಿಗೆ ಪ್ರಾಚಾರ್ಯರಾಗಿದ್ದಾಗ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಗೆ ಡಾ. ಎ.ಬಿ. ಮಾಲಕರೆಡ್ಡಿಯವರು ಅಧ್ಯಕ್ಷರಾಗಿದ್ದರು. ಮೆಡಿಕಲ್ ಕಾಲೇಜಿನ ಪ್ರಾಚಾರ್ಯರು ಹಾಗೂ ಸಂಸ್ಥೆಯ ಅಧ್ಯಕ್ಷರಾದ ಡಾ. ಎ.ಬಿ. ಮಾಲಕರೆಡ್ಡಿಯವರ ಮಧ್ಯ ಕಾರಣಾಂತರಗಳಿಂದ ಭಿನ್ನಾಭಿಪ್ರಾಯ ಬಂದವು. ಡಾ. ಬಿ.ಜಿ. ಜವಳಿಯವರು ಪ್ರಾಚಾರ್ಯರ ಹುದ್ದೆಗೆ ರಾಜಿನಾಮೆ ನೀಡಿ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷರ ಸ್ಥಾನಕ್ಕೆ ಸ್ಪರ್ಧಿಸಲು ಮುಂದಾಗಿ ತಮ್ಮ ಪೆನಲ್‌ನಲ್ಲಿ ಸೇರಬೇಕೆಂದು ಇಂಟರ್ ಹೌಸ್ ಸರ್ಜನ್ ರಾಗಿ ವ್ಯಾಸಂಗ ಮಾಡುತ್ತಿದ್ದ ಬಸವರಾಜ ಪಾಟೀಲ ಅಷ್ಟೂರವರನ್ನು ಆವ್ಹಾನಿಸಿದರು. ಆದರೆ ಡಾ. ಬಸವರಾಜ ಪಾಟೀಲ ಅಷ್ಟೂರವರು ಈ ಇಬ್ಬರಿಗೂ ಆತ್ಮಿಯರಾಗಿದ್ದರು. ಹಾಗಾಗಿ ಯಾರ ಜೊತೆ ಸೇರಬೇಕೆಂದು ವಿಚಾರಿಸುತ್ತಿರುವಾಗ ಗೆಳೆಯರ ಜೊತೆ ಚರ್ಚಿಸಿ ಡಾ. ಬಿ.ಜಿ. ಜವಳಿಯವರ ಜೊತೆ ಸೇರಿ ಆಯ್ಕೆಯಾದರು. ಹಾಗಾಗಿ ಡಾ. ಬಸವರಾಜ ಪಾಟೀಲ ಅಷ್ಟೂರವರಿಗೆ ಡಾ. ಬಿ.ಜಿ. ಜವಳಿಯವರೆ ಮೊದಲ ರಾಜಕೀಯ ಗುರು ಎಂದೇ ಹೇಳಬೇಕು.

ಬಿವಿಬಿ ಕಾಲೇಜು ಅಭಿವೃದ್ಧಿ : ಡಾ॥ ಬಸವರಾಜ ಪಾಟೀಲರು

ಡಾ॥ ಬಸವರಾಜ ಪಾಟೀಲರು ವಿದ್ಯಾರ್ಥಿಯಾಗಿದ್ದಾಗಲೇ ಅವರು "ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಸದಸ್ಯತ್ವವನ್ನು ೧೯೭೭-೭೮ ರಲ್ಲಿ ಪಡೆದುಕೊಂಡರು. ಆವಾಗ ಸರ್ಕಾರವೂ ಸಂಸ್ಥೆಗಳ ಸದಸ್ಯತ್ವ ಪಡೆದುಕೊಳ್ಳಲು ಅನುಮತಿ ಕೊಟ್ಟಿತ್ತು. ಇದರಿಂದಾಗಿ ಪಾಟೀಲರು ಅವಾಗಲೇ ಸದಸ್ಯತ್ವವನ್ನು ಪಡೆದುಕೊಂಡಿದ್ದರು. ದಿ. ಮಹಾದೇವಪ್ಪಾ

ರಾಂಪೂರೆಯವರು ಹುಟ್ಟು ಹಾಕಿದ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯು ಅಡಿಯಲ್ಲಿ ೧೯೬೦ ರಲ್ಲಿ ಬಿ.ವಿ. ಭೂಮರಡ್ಡಿ ಮಹಾವಿದ್ಯಾಲಯವನ್ನು ಪ್ರಾರಂಭಿಸಿದರು. ಈ ಸಂಸ್ಥೆಗೆ ಧನ ಸಹಾಯ ಮಾಡಿದ ಮಹಾದಾಸೋಹಿಗಳಾದ ಗಜೇಂದ್ರ ಗಡದ ಎಣ್ಣೆ ವ್ಯಾಪಾರಿ, ಶ್ರೀ ಬಸಪ್ಪ ವೀರಪ್ಪನವರು ೫೧ ಸಾವಿರ ರೂಪಾಯಿಗಳು ದೇಣಿಗೆಯನ್ನಿತ್ತರು. ಅಂದು ನೆಟ್ಟಿದ ಸಸಿಯು ಇಷ್ಟು ಹೆಮ್ಮರವಾಗಿ ಬೆಳಯಲು ಪಾಟೀಲರು ಕೈಕೊಂಡ ಅಭಿವೃದ್ಧಿಪರ ಶೈಕ್ಷಣಿಕ ಕಾರ್ಯಚಟುವಟಿಕೆಗಳೆ ಕಾರಣ ಏಕೆಂದರೆ ಅವರು ಸ್ನಾತ್ತಕೋತ್ತರ ಪದವಿ (ಎಂ.ಎಸ್) ಯನ್ನು ಪಡೆಯುವ ವಿದ್ಯಾರ್ಥಿ ದಿಶೆಯಲ್ಲಿಯೇ ೧೯೮೧ ರಲ್ಲಿ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ತ್ರೈವಾರ್ಷಿಕ ಚುನಾವಣೆಗೆ ಸ್ಪರ್ಧಿಸಿ ಮೊದಲ ಪ್ರಯತ್ನ ಮಾಡುತ್ತಾರೆ. ನಂತರ ೧೯೮೫ ರಲ್ಲಿ ಮತ್ತೆ ಎಚ್.ಕೆ.ಇ. ಸಂಸ್ಥೆಯ ಆಡಳಿತ ಮಂಡಳಿಯ ಚುನಾವಣೆ ಸ್ಪರ್ಧಿಸಿ ಜಯಭೇರಿ ಭಾರಿಸುತ್ತಾರೆ. ಸತತವಾಗಿ ಐದು ಸಾರಿ ಅಂದರೆ ೧೯೮೫ ರಿಂದ ೧೯೯೭ರ ವರೆಗೆ ಮತ್ತು ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯಲ್ಲಿ (೧೯೯೭-೨೦೦೦) ಗೆದ್ದು ಹತ್ತು ಹಲವಾರು ಶೈಕ್ಷಣಿಕ ಕಾರ್ಯಗಳನ್ನು ಗೈದಿದ್ದಾರೆ. ಮತ್ತೆ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆ ೨೦೦೦ ದಲ್ಲಿ ಮತ್ತೆ ಚುನಾವಣೆ ಸ್ಪರ್ಧಿಸಿ ಜಯಗಳಿಸಿ ಸುಮಾರು ಹತ್ತು ಸಾರಿ (ಹತ್ತು ಟರ್ಮ) ಗೆಲವು ಸಾಧಿಸುತ್ತಾರೆ. ಅವರ ಆಡಳಿತಾವಧಿಯಲ್ಲಿ ಹಲವು ಹೊಸ ಹೊಸ ಕೋರ್ಸಗಳನ್ನು ಪ್ರಾರಂಭ ಮಾಡಿದ್ದಾರೆ. ಮೊದಲು ಕೇವಲ ಕಲಾ ವಿಭಾಗ ಮಾತ್ರ ಇತ್ತು. ನಂತರ ಇವರು ವಾಣಿಜ್ಯ ವಿಭಾಗ ಮತ್ತು ಶಿಕ್ಷಣ (ಬಿ.ಇಡ್) ಮಹಾವಿದ್ಯಾಲಯ ಪ್ರಾರಂಭಿಸಿದ್ದಾರೆ.

ಸುಮಾರು ೫೪ ಎಕರೆ ಭೂಮಿಯನ್ನು ಭೂಮರಡ್ಡಿ ಕಾಲೇಜು ಹೊಂದಿತು. ಆದರೆ ಅದರ ಸುತ್ತಲು ಕಂಪೌಂಡ ಇರಲಿಲ್ಲ. ಇಂತಹ ವಿಶಾಲವಾದ ಮೈದಾನವನ್ನು ಬೇರೆಯವರು ಅತಿಕ್ರಮಣ ಮಾಡಬಾರದೆಂದು

ಹೋರಾಟ ಮಾಡಿ ಒಳ್ಳೆ ಸುರಕ್ಷಿತವಾದ ಸುತ್ತಲೂ ತಡೆಗೋಡೆ ಕಟ್ಟಿಸಿದ್ದಾರೆ. ಕೋಟಿಗಟ್ಟಲೇ ಆಸ್ತಿಯನ್ನು ಈ ಸಂಸ್ಥೆಗೆ ಉಳಿಸಿಕೊಟ್ಟ ಕೀರ್ತಿ ಡಾ॥ ಬಸವರಾಜ ಪಾಟೀಲರಿಗೆ ಸಲ್ಲುತ್ತದೆ. ಮತ್ತೆ ಬಿ.ಎಡ್. (ಬಿ.ಇಡ್) ಸಂಸ್ಥೆಯ ಕಟ್ಟಡ, ವಿವಿಧ ವಿಭಾಗಗಳ ಮೇಲೆ ಮಹಡಿಗಳ ಎರಡನೇ ಅಂತಸ್ತು ಕಟ್ಟಡಗಳ ನಿರ್ಮಾಣ ಇವರ ಅವಧಿಯೇಯಲ್ಲಿಯೇ ನಿರ್ಮಾಣಗೊಂಡಿದೆ.

ಭೂಮರಡ್ಡಿ ಕಾಲೇಜಿನ ಅವರಣದಲ್ಲಿ ಪ್ರಾಚಾರ್ಯರು ವಸತಿಗೃಹ ಉಪನ್ಯಾಸಕರುಗಳ ವಸತಿ ಗೃಹಗಳು, ಬ್ಯಾಂಕ್ ಉಪಹಾರ ಗೃಹ, ಅತಿಥಿ ಗೃಹ, ಹಲವಾರು ಕಟ್ಟಡಗಳ ನಿರ್ಮಾಣ ಮಾಡಿದ್ದಾರೆ.

ಗಣಕಯಂತ್ರ, ಸ್ನಾತ್ತಕೋತ್ತರ ಕೇಂದ್ರ ಆರಂಭಿಸಿದಲ್ಲದೇ ಇತ್ತಿಚೆಗೆ ಇಂಗ್ಲೀಷ್ ಮಾಧ್ಯಮದ ಪಬ್ಲಿಕ್ ಸ್ಕೂಲ ಪ್ರಾರಂಭಿಸಿದ್ದಾರೆ. ಇವುಗಳಿಗಾಗಿ ಹೊಸ ಕಟ್ಟಡ ಕೂಡಾ ಕಟ್ಟಿಸಿದ್ದಾರೆ. ಸೋಜಿಗದ ಸಂಗತಿಯೆಂದರೆ ತಾವು ಕಲಿತಿರುವ ಮಹಾವಿದ್ಯಾಲಯದ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿ ಆಯ್ಕೆಗೊಂಡು ಸಂಸ್ಥೆಯ ಕೆಲಸ ಮಾಡುತ್ತಿರುವುದು ಹೆಮ್ಮೆಯ ಸಂಗತಿ.

ಈ ಮಹಾವಿದ್ಯಾಲಯವು ಪ್ರಗತಿ ಪಥದಲ್ಲಿ ಸಾಗುತ್ತಿರುವ ಸಂದರ್ಭದಲ್ಲಿ ೨೫ ವರ್ಷದ ಬೆಳ್ಳಿ ಮಹೋತ್ಸವ ಮತ್ತು ೫೦ ವರ್ಷಕ್ಕೆ ಸುವರ್ಣ ಮಹೋತ್ಸವದ ಆಚರಣೆಯ ಕೇಂದ್ರ ಬಿಂದು ಇವರೆ ಆಗಿದ್ದರು. ಅಂದರೆ ಇವರ ನೇತೃತ್ವದಲ್ಲಿ ನಡೆದಿರುವುದು ಹೆಮ್ಮೆಯ ಸಂಗತಿ.

ಪ್ರಥಮ ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮೌಲ್ಯಾಂಕನ ಸಮಿತಿಯವರು ಆಗಸ್ಟ್ ೨೪, ೨೫-೨೦೦೪ ರಂದು ಭೇಟಿ ಕೊಡಲು ಬರುವಾಗ ಸ್ವತಃ ತಾವೆ ಎದುರಿದ್ದು ಸತತ ಒಂದು ತಿಂಗಳವರೆಗೆ ಅಭಿವೃದ್ಧಿಯ ಕೆಲಸಗಳನ್ನು ಮಾಡಿಸಿದ್ದು ಇವರಲ್ಲಿರುವ ಕಾಯಕ ನಿಷ್ಠೆ ಎದ್ದು ಕಾಣುತ್ತದೆ. ಇವರ ಸತತ ಪರಿಶ್ರಮದಿಂದ ನ್ಯಾಕ್‌ನಲ್ಲಿ ಉತ್ತಮ ಕ್ರೆಡಿಟ್ ಪಡೆದಿದ್ದು

ಹೆಮ್ಮೆಯ ಸಂಗತಿ. ಹೀಗೆ ಬಿ.ವ್ಹಿ.ಬಿ. ಭೂಮರಡ್ಡಿ ಕಾಲೇಜನ್ನು ಕಟ್ಟಿ ಬೆಳೆಸಿದ ಕೀರ್ತಿ ಡಾ. ಬಸವರಾಜ ಜಿ. ಪಾಟೀಲರಿಗೆ ಸಲ್ಲುತ್ತದೆ. ಇವರ ಎಲ್ಲ ಕೆಲಸಕ್ಕೆ ಜೊತೆಯಾಗಿ ನಿಂತವರು ಬಿ.ಟಿ. ಸಾಸನೂರರು ಎಂಬುದನ್ನು ಮರೆಯುವಂತಿಲ್ಲ.

ಸಹಾಯ ಹಸ್ತಚಾಚಿ ಬಂದ ಎಷ್ಟೋ ಬಡ ವಿದ್ಯಾರ್ಥಿಗಳಿಗೆ, ಅವರು ಶೈಕ್ಷಣಿಕ ಶುಲ್ಕ ಭರಿಸಿ ಅವರ ಬದುಕನ್ನು ರೂಪಿಸಿದ ಅಂತಃಕರುಣಿಗಳು.

ಬೀದರ ಜಿಲ್ಲೆಯ ಹಲವಾರು ವಿದ್ಯಾರ್ಥಿಗಳಿಗೆ ವೈದ್ಯಕೀಯ, ತಾಂತ್ರಿಕ ವಿಷಯಗಳಲ್ಲಿ ಪ್ರವೇಶ ಒದಗಿಸಿದ್ದಾರೆ. ಅಲ್ಲದೇ ಸಾವಿರಾರು ಜನರಿಗೆ ಉದ್ಯೋಗ ಕೊಡಿಸುವ ಮೂಲಕ ಅವರ ಬದುಕಿಗೆ ದಾರಿ ದೀಪವಾಗಿದ್ದಾರೆ. ಹೀಗೆ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯಿಂದ ಪ್ರಾರಂಭವಾದ ಅಂಗ ಸಂಸ್ಥೆಗಳನ್ನು ಶೈಕ್ಷಣಿಕ ಪ್ರಗತಿಯ ಕಡೆಗೆ ಕೊಂಡೊಯ್ದ ಡಾ॥ ಬಸವರಾಜ ಪಾಟೀಲರ ಶ್ರಮ ಶ್ಲಾಘನೀಯವಾದುದು.

ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ

ಭಾರತ ಸ್ವಾತಂತ್ರಕ್ಕೂ ಮುನ್ನ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಆರಂಭವಾಗಿದ್ದು ಕರ್ನಾಟಕತ್ವ ಹಾಗೂ ರಾಷ್ಟ್ರೀಯತೆಯನ್ನು ಪ್ರತಿನಿಧಿಸುವ ಸದಾಶಯದೊಂದಿಗೆ ಈ ಸಂಸ್ಥೆ ಸ್ಥಾಪನೆಯಾಗಿದ್ದು ಗಮನಾರ್ಹ ಸಂಗತಿ. ಶಿಕ್ಷಣ ಎಲ್ಲರಿಗೂ ದಕ್ಕಬೇಕು ಅದು ಗುಣಾತ್ಮಕ ಹಾಗೂ ಮೌಲೀಕವಾಗಿರ ಬೇಕೆಂಬುದೇ ಸಂಸ್ಥೆಯ ಮೂಲ ಆಶಯ. ಬೀದರಿನಲ್ಲಿ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯನ್ನು ಮಾರ್ಚ್ ೧೯೪೧ರಲ್ಲಿ ಕರ್ನಾಟಕ ರಾಷ್ಟ್ರೀಯ ವಿದ್ಯಾಲಯವೆಂಬ ಹೆಸರಿನಿಂದ ಪ್ರಾರಂಭಿಸಲಾಯಿತು. ನಿಜಾಮ ಆಳ್ವಿಕೆಯ ಕಾರಣವಾಗಿ ಬೀದರಿನಲ್ಲಿ ಉರ್ದು ಆಡಳಿತ ಭಾಷೆಯಾಗಿತ್ತು.

ಮರಾಠಿ ಭಾಷಾ ಪ್ರಾಬಲ್ಯದ ಆ ಕಾಲದಲ್ಲಿ ಕನ್ನಡದ ಅಭಿಮಾನದ ದ್ಯೋತಕವಾಗಿ ಈ ಸಂಸ್ಥೆಯನ್ನು ಕಟ್ಟಲಾಗಿತ್ತು. ಅದರ ಸಂಸ್ಥಾಪಕ ಅಧ್ಯಕ್ಷರು ಶ್ರೀ ಶಿವರುದ್ರಪ್ಪ ಹಾಲಹಳ್ಳಿಯವರಾಗಿದ್ದರು. ಕನ್ನಡ ಮಾಧ್ಯಮದ ಆ ಶಾಲೆಯಲ್ಲಿ ಕೇವಲ ೧೬ ಜನ ವಿದ್ಯಾರ್ಥಿಗಳಿಂದ ಈ ಶಾಲೆಯನ್ನು ಬೀದರಿನ ಮಂಗಲಪೇಟದ ಕೊಟ್ರಯ್ಯ ಮಠದಲ್ಲಿ ಪ್ರಾರಂಭಿಸಲಾಗಿತ್ತು. ಈ ಸಂಸ್ಥೆಯ ಕರುಣಾ ಜನಕ ಸ್ಥಿತಿಯನ್ನು ಕಂಡ ದುಬಲಗುಂಡಿಯ ಫತೇಪುರ ಶರಣಪ್ಪನವರು ಈ ಕನ್ನಡ ಮಾಧ್ಯಮದ ಶಾಲೆಗೆ ೧೯೪೧ರಿಂದ ೧೯೫೧ರ ವರೆಗೆ ಹತ್ತು ವರ್ಷಗಳ ಕಾಲ ತಿಂಗಳಿಗೆ ೪೦೦ ರೂ. ದಂತೆ ಧನಸಹಾಯ ಮಾಡುತ್ತಾ ಬಂದರು. ಈ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಶಿವರುದ್ರಪ್ಪ ಹಾಲಹಳ್ಳಿ ವಕೀಲರ ಶತಪ್ರಯತ್ನದಿಂದಾಗಿ ೧೯೫೧ರಲ್ಲಿ ಹೈದ್ರಾಬಾದ್ ಸರ್ಕಾರ ಏಳನೆಯ ವರ್ಗದವರೆಗೆ ತರಗತಿಗಳನ್ನು ನಡೆಸಲು ಅನುಮತಿ ಕೊಟ್ಟಿತು. ಆಗ ಮಕ್ಕಳ ಸಂಖ್ಯೆ ೧೫೪ಕ್ಕೆ ಏರಿತು. ಮುಂದೆ ೧೯೫೩ರ ಆಗಸ್ಟ್ ೭ ರಂದು ಸ್ಥಳೀಯ ಕರ್ನಾಟಕ ವಾಚನಾಲಯ (ಇಂದಿನ ಬಸವ ಮಂಟಪ)ದಲ್ಲಿ ನಗರದ ಪ್ರಮುಖರು ಸೇರಿಕೊಂಡು ಒಂದು ಆಡಳಿತ ಮಂಡಳಿ ರಚಿಸಿಕೊಂಡರು. ಹೈದ್ರಾಬಾದಿನಲ್ಲಿ ವಕಾಲತ್ತು ಮಾಡುತ್ತಿದ್ದ ಆರ್.ವ್ಹಿ. ಬೀಡಪನವರ ಮನವೊಲಿಸಿ ಶ್ರೀ ಪ್ರಭುರಾವ ಕಂಬಳಿವಾಲೆ ಅವರನ್ನು ಈ ಸಂಸ್ಥೆಯ ಅಧ್ಯಕ್ಷರನ್ನಾಗಿ ಮಾಡಿದರು. ಮುಂದೆ ೧೩-೦೧-೧೯೫೯ರಂದು "ರಾಷ್ಟ್ರೀಯ ಶಿಕ್ಷಣ ಸಂಸ್ಥೆ" ಎಂದು ಸರಕಾರದಿಂದ ನೋದಣಿಯಾಯಿತು. ಆರ್. ವಿ. ಬಿಡಪ್‌ನವರು ಅಧ್ಯಕ್ಷರಾದರು. ರುದ್ರಪ್ಪನವರು ಉಪಾಧ್ಯಕ್ಷರಾದರು. ರುದ್ರಪ್ಪನವರ ನಿಧನಾನಂತರ ಹರಿಶ್ಚಂದ್ರ ಗೋಯೆಲ್‌ರನ್ನು ಸಂಸ್ಥೆಯ ಉಪಾಧ್ಯಕ್ಷರನ್ನಾಗಿ ಆರಿಸಲಾಯಿತು. ಶ್ರೀ ನಾಗಣ್ಣ ಜಾಬಶೆಟ್ಟಿ ಕೆಲಕಾಲ ಕಾರ್ಯದರ್ಶಿಗಳಾಗಿ, ನಂತರ ಖಜಾಂಚಿಯಾಗಿ ನೇಮಕ ಹೊಂದಿದ್ದರು. ನಂತರ ಹಾಲಹಳ್ಳಿಯವರು ಸಂಸ್ಥೆಯ ಕಾರ್ಯದರ್ಶಿಗಳಾಗಿದ್ದಂತೆ ಬಸವಂತರಾವ ಶೆಟಕಾರರು ಜಂಟಿ ಕಾರ್ಯದರ್ಶಿಗಳಾಗಿದ್ದರು.

ಸಂಸ್ಥೆಯ ರಜತ ಮಹೋತ್ಸವದ ಕಾಲಕ್ಕೆ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಟ್ರಸ್ಟನ್ನು ರೂಪಿಸಲಾಯಿತು. ಶಿವರುದ್ರಪ್ಪ ವಕೀಲ, ನಾಗಣ್ಣ ಜಾಬಶೆಟ್ಟಿ, ಹರಿಶ್ಚಂದ್ರ ಗೋಯೆಲ್ ಟ್ರಸ್ಟಿನ ಸದಸ್ಯರಾದರಲ್ಲದೆ ಚನ್ನಬಸಪ್ಪ ಹಾಲಹಳ್ಳಿ ಟ್ರಸ್ಟಿನ ಸೆಕ್ರೆಟರಿಗಳಾಗಿ ನಿಯುಕ್ತಗೊಂಡರು. ರುದ್ರಪ್ಪ ವಕೀಲರು ನಿಧನರಾದ ನಂತರ ಪ್ರಭುರಾವ ವಕೀಲ ಕಂಬಳಿವಾಲೆಯವರು ಸ್ವ-ಇಚ್ಛೆಯ ಮೇರೆಗೆ ರಾಜೀನಾಮೆ ಕೊಟ್ಟಿದ್ದಕ್ಕಾಗಿ ಭೀಮಣ್ಣ ಮಜಗೆಯವರನ್ನು ಶಾಶ್ವತ ಟ್ರಸ್ಟಿಗಳನ್ನಾಗಿ ಆರಿಸಲಾಯಿತು. ಮತ್ತೆ ೧೯೯೦ ರಲ್ಲಿ ಶಿವರಾಜ ಶೆಟಕಾರ, ಮಲ್ಲಿಕಾರ್ಜುನ ವಲಂಡೆ, ಉದಯಕುಮಾರ ಹಲವಾಯಿ, ಮಹೇಶಕುಮಾರ ಭದಭದೆ ವ್ಯವಸ್ಥಾಪಕ ಮಂಡಳಿಯ ಹೊಸ ಸದಸ್ಯರಾದರು.

೧೯೮೨ ರಲ್ಲಿ ಕೈಗಾರಿಕಾ ತರಬೇತಿ ಕೇಂದ್ರ, ಡಿಪ್ಲೊಮಾ, ಡಿ.ಬಿ.ಎಂ. ಕೋರ್ಸ್, ೧೯೮೪ ರಲ್ಲಿ ಫಾರ್ಮಸಿ ಕಾಲೇಜು. ೧೯೮೭ ರಲ್ಲಿ ಕಂಪ್ಯೂಟರ್ ಸೈನ್ಸ್ ಕೋರ್ಸ್, ೧೯೮೮ ರಲ್ಲಿ ನೀಲಾಂಬಿಕಾ ಹೆಣ್ಣು ಮಕ್ಕಳ ಪ್ರೌಢಶಾಲೆ, ೧೯೯೦ ರಲ್ಲಿ ಚಿಟಗುಪ್ಪಾ ಜಯಪ್ರಕಾಶ ನಾರಾಯಣ ವಿಜ್ಞಾನ ಕಾಲೇಜು ಹೀಗೆ ಅನೇಕ ಅಂಗ ಸಂಸ್ಥೆಗಳು ಹುಟ್ಟಿಕೊಂಡವು.

ಜುಲೈ ೧೯೯೭ರಲ್ಲಿ ಸಂಸ್ಥೆಯ ಚುನಾವಣೆಯಲ್ಲಿ ಬೀಡಪನವರು ಸೋತು ಡಾ. ಬಸವರಾಜ ಪಾಟೀಲ ಅಷ್ಟೂರ ಅವರು ಆರಿಸಿ ಬಂದರು. ಈ ಸೋಲನ್ನು ಬೀಡಪನವರು ಅತ್ಯಂತ ಕ್ರೀಡಾ ಮನೋಭಾವದಿಂದ ಸ್ವೀಕರಿಸಿದರು.

ಪ್ರೌಢಶಾಲೆಯಿಂದ ಆರಂಭವಾದ ಈ ಸಂಸ್ಥೆ ಉತ್ತರೋತ್ತರವಾಗಿ ಬೆಳೆದು ಸ್ನಾತಕೋತ್ತರ ಪದವಿ, ಸಂಶೋಧನಾ ಅಧ್ಯಯನದವರೆಗೂ ಬೆಳೆದಿದೆ. ಜೊತೆಗೆ ಹಲವು ವೃತ್ತಿಪರ ಕೋರ್ಸುಗಳು ಇಲ್ಲಿವೆ. ಸುಮಾರು ೨೫ಕ್ಕೂ ಹೆಚ್ಚು ಅಂಗಸಂಸ್ಥೆಗಳು ಹೆಮ್ಮರವಾಗಿ ಬೆಳೆದು ನಿಂತಿವೆ. ಈ ಸಂಸ್ಥೆಯ ಆರಂಭಿಕ ಬೆಳವಣಿಗೆಯಲ್ಲಿ ಆರ್. ವಿ. ಬಿಡಪ್, ಡಾ. ಚನ್ನಬಸಪ್ಪಾ ಹಾಲಹಳ್ಳಿರವರ ಪರಿಶ್ರಮವು ಇದೆ. ಮುಂದೆ ಈ ಸಂಸ್ಥೆಯ ಹಾಲಿ

ಅಧ್ಯಕ್ಷರಾಗಿರುವ ಡಾ. ಬಸವರಾಜ ಜಿ. ಪಾಟೀಲರು ಅಧ್ಯಕ್ಷರಾದ ಮೇಲೆ ಸಂಸ್ಥೆಗೆ ಹೊಸ ಕಾಯಕಲ್ಪ ಬಂದಿದೆ. "ಜನಸಾಮಾನ್ಯರಿಗೂ ಉನ್ನತ ಹಾಗೂ ಗುಣಾತ್ಮಕ ಶಿಕ್ಷಣ ಸಿಗಬೇಕೆಂದು ಅದು ಅವರ ಬದುಕನ್ನು ರೂಪಿಸುವಂತಿರಬೇಕು. ಅದಕ್ಕಾಗಿ ಸಂಸ್ಥೆಯ ಸರ್ವಾಂಗೀಣ ಅಭಿವೃದ್ಧಿ, ಆಧುನಿಕ ಮಾಹಿತಿ ತಂತ್ರಜ್ಞಾನದೊಂದಿಗೆ ಶೈಕ್ಷಣಿಕ ವಿಕಾಸ ಮಾಡುವುದು ಅದರೊಂದಿಗೆ ಈ ಭಾಗದ ಜನಮಾನಸದ ಆರ್ಥಿಕ, ಸಾಮಾಜಿಕ ಅಭಿವೃದ್ಧಿಯಾಗಬೇಕೆಂಬುದೇ ಪಾಟೀಲರ ಮುಖ್ಯ ಉದ್ದೇಶವಾಗಿದೆ. ಈ ಎಲ್ಲಾ ಸಂಗತಿಗಳ ಮೂಲಕ ಸಂಸ್ಥೆಯನ್ನು ಶೈಕ್ಷಣಿಕವಾಗಿ ಸಾಂಸ್ಕೃತಿಕವಾಗಿ ತಳಮಟ್ಟದಿಂದ ಕಟ್ಟುವ ದೂರದೃಷ್ಠಿ ಇವರದ್ದಾಗಿದೆ.

ಹೀಗಾಗಿ ೨೦೧೨ ರಿಂದ ಇಲ್ಲಿಯವರೆಗೆ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಚುನಾವಣೆಗೆ ಸ್ಪರ್ಧಿಸಿ, ನಿರಂತರ ಗೆಲುವನ್ನು ಸಾಧಿಸಿ ಎಲ್ಲಾ ಆಡಳಿತ ಮಂಡಳಿಯವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮೊದಲ ಫೌಂಡರಾದ ಆರ್.ವಿ. ಬಿಡ್ಡಪ್ಪರನವರ ಕನಸನ್ನು ಈಗ ಬೃಹತ್ ಪ್ರಮಾಣದಲ್ಲಿ ಸಂಸ್ಥೆಯನ್ನು ಪ್ರಗತಿ ಪಥದಲ್ಲಿ ಕೊಂಡೊಯುವುದರ ಮೂಲಕ ನನಸು ಮಾಡಿದ್ದಾರೆ.

ಸುಮಾರು ಒಂದು ದಶಕದಿಂದ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಅತ್ಯಂತ ಪ್ರಾಮಾಣಿಕತೆ, ದಕ್ಷತೆ, ಕಾಳಜಿಯಿಂದ ಮುತುವರ್ಜಿವಹಿಸಿ ಶೈಕ್ಷಣಿಕ ಪ್ರಗತಿಗಾಗಿ ದುಡಿಯುತ್ತಿದ್ದಾರೆ. ಅನೇಕ ಅಭಿವೃದ್ಧಿಯ ಕಾರ್ಯಗಳನ್ನು ಕೈಗೊಂಡಿದ್ದಾರೆ.

ಅನೇಕ ಹೊಸ ಕಟ್ಟಡಗಳ ನಿರ್ಮಾಣ, ನವೀಕರಣ, ಮಾಹಿತಿ ತಂತ್ರಜ್ಞಾನ ಒಳಗೊಂಡಂತೆ ಮೂಲಭೂತ ಸೌಕರ್ಯ ಹಾಗೂ ಹೊಸ ನೇಮಕಾತಿಗಳನ್ನು ಮಾಡಿಕೊಂಡು ಎಲ್ಲ ರೀತಿಯ ಸೌಕರ್ಯಗಳನ್ನು ಒದಗಿಸುತ್ತಾ ಇಡೀ ಹೈದ್ರಾಬಾದ ಕರ್ನಾಟಕದಲ್ಲಿಯೇ ಉತ್ತಮ ಶಿಕ್ಷಣ ಸಂಸ್ಥೆ ಎಂಬ ಮಟ್ಟಕ್ಕೆ ತಂದು ನಿಲ್ಲಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಕರ್ನಾಟಕ ಕಾಲೇಜಿಗೆ ಎರಡನೇ ಸಲವೂ ನ್ಯಾಕ್ (ಎನ್‌ಎಎಸಿ) "ಎ" ಗ್ರೇಡ್ ಪಡೆಯುವಲ್ಲಿ ಸಫಲವಾಗಿದ್ದು ೩.೨೪ ಸಿಜಿಪಿ ಪಡೆಯುವ ಮೂಲಕ ಹೈದ್ರಾಬಾದ ಕರ್ನಾಟಕ ವಿಭಾಗದಲ್ಲಿ ಈ ಗ್ರೇಡ್ ಹೊಂದಿರುವ ಮೊದಲ ಕಾಲೇಜಾಗಿರುವುದು ಈ ಎಲ್ಲ ಏಳಿಗೆಯ ಹಿಂದಿನ ಪರಿಶ್ರಮದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಡಿ. ಫಾರ್ಮಸಿ ಕೋರ್ಸಿನ ಬೇಡಿಕೆ ಹೆಚ್ಚಾದ ಕಾರಣ. ಚಿಟಗುಪ್ಪಾದಲ್ಲಿ ಹೊಸ ಫಾರ್ಮಸಿ ಕೋರ್ಸು, ಮತ್ತು ಪಬ್ಲಿಕ್ ಸ್ಕೂಲ್ ಸಹ ಆರಂಭಿಸಿದ್ದಾರೆ.

ಅಲ್ಲದೆ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಇಂಗ್ಲೀಷ್ ವಿಭಾಗಗಳ ಸಂಶೋಧನಾ ಕೇಂದ್ರ ಮತ್ತು ಯು.ಜಿ.ಸಿ. (UGC) ಧನ ಸಹಾಯ ಆಯೋಗದಿಂದ ವೃತ್ತಿ ಅಭಿವೃದ್ಧಿ ಕೋರ್ಸುಗಳನ್ನು ಆರಂಭಿಸಿದ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ.

ಭಾರತ ಸರ್ಕಾರದ ಸಂಯೋಜನೆಯೊಂದಿಗೆ, E-Waste Management Workshop (NIELIT) ಹಮ್ಮಿಕೊಳ್ಳಲು (NIELIT) ಕಲ್ಕತ್ತಾ ಇವರಿಂದ ರೂ. ೨೫ ಲಕ್ಷ ಹಣವನ್ನು ಮಂಜೂರು ಮಾಡಿಸಿದ್ದಾರೆ ಎರಡು ಪ್ರಮುಖ ಕಾರ್ಯಗಾರಗಳನ್ನು ಮಾಡಿಸಿದ್ದಾರೆ.

ಅಲ್ಲದೆ ಕ.ರಾ.ಶಿ. ಸಂಸ್ಥೆಯಲ್ಲಿ ಟೆಕ್ನೋಪಾರ್ಕ ಆರಂಭಿಸಿ, ಅದಕ್ಕಾಗಿ ಭಾರತ ಸರ್ಕಾರ ಆರ್.ಯು.ಎಸ್.ಎ. (RUSA) ಗೆ ಧನ ಸಹಾಯಕ್ಕಾಗಿ ರೂ. ೨ ಕೋಟಿಯ ಪ್ರಸ್ತಾವನೆ ಸಲ್ಲಿಸಿದರು. ಅದು ಮೊದಲ ಹಂತದಲ್ಲಿ ಆದ್ಯತೆಯಲ್ಲಿ ಆಯ್ಕೆಯಾಗಿರುವುದು. ಈ ಎಲ್ಲಾ ಕಾರ್ಯಗಳನ್ನು ನೋಡಿದಾಗ ಇವರಲ್ಲಿರುವ ಆಡಳಿತ ಚಾಣಕ್ಷತನ ಎದ್ದು ಕಾಣುತ್ತದೆ.

ಇವರ ಅವಧಿಯಲ್ಲಿ ಕೈಕೊಂಡ ಪ್ರಮುಖ ಕೆಲಸವೆಂದರೆ ಫಾರ್ಮಸಿ ಮೈದಾನದಲ್ಲಿ ಒಂದುವರೆ ಕೋಟಿ ರೂಪಾಯಿ ಖರ್ಚು ಮಾಡಿ ಒಳಾಂಗಣ ಕ್ರೀಡಾಂಗಣದ ಬ್ರಹತ್ ಪ್ರಮಾಣದ ಉತ್ತಮ ಕಟ್ಟಡವನ್ನು ನಿರ್ಮಿಸಿದ್ದಾರೆ.

ಶ್ರೀ ಅಮರನಾಥ ಪಾಟೀಲ ಅವರ ಎಂ.ಎಲ್.ಸಿ. ನಿಧಿಯಿಂದ ರೂ. ೧೦ ಲಕ್ಷ ಅನುದಾನ ಪಡೆದು ಫೋಸ್ ಮತ್ತು ಎನ್.ಪಿಟಿ.ಇ.ಎಲ್. ಕೋರ್ಸುಗಳನ್ನು ನಡೆಸಲು Skill Development ಪ್ರಯೋಗಾಲಯಗಳಿಗೆ ಬೇಕಾಗುವ ಗೋದ್ರೇಜ್ ಪೀಠೋಪಕರಣಗಳನ್ನು ಒದಗಿಸಿದ್ದಾರೆ.

ಫಾರ್ಮಸಿ ಕಾಲೇಜು ಒಳಗೊಂಡಂತೆ ಬಹುತೇಕ ಎಲ್ಲಾ ಅಂಗ ಸಂಸ್ಥೆಯ ಕಾಲೇಜುಗಳಲ್ಲಿ ಗುಣಾತ್ಮಕ ಶಿಕ್ಷಣ ಸಿಗುವಂತೆ ಮತ್ತು ವಿಶೇಷವಾಗಿ ಸಂಶೋಧನೆಗೆ ಒತ್ತು ಕೊಟ್ಟು (DST) ಯುಜಿಸಿ ಮತ್ತು ಐಸಿಎಸ್‌ಎಸ್‌ಆರ್ ಗಳಿಂದ ಧನ ಸಹಾಯಕ್ಕೆ ಪ್ರಸ್ತಾವನೆ ಸಲ್ಲಿಸುವುದರ ಜೊತೆಗೆ ಕರ್ನಾಟಕ ಕಾಲೇಜು ಅಭಿವೃದ್ಧಿಗಾಗಿ ಡಿಬಿಟಿ ಯಿಂದ ರೂ. ೮ ಲಕ್ಷ ಮಂಜೂರ ಮಾಡಿಸಿರುವುದು ಇವರ ಪ್ರಯತ್ನದ ಫಲವಾಗಿದೆ. ಅಲ್ಲದೆ ಕರ್ನಾಟಕ ಪದವಿ ಕಾಲೇಜಿನ ವಿವಿಧ ಕೋರ್ಸ್‌ಗಳ ಅಭಿವೃದ್ಧಿಗಾಗಿ ಡಿ.ಬಿ.ಟಿ. ಸ್ಟಾರ್ ಕಾಲೇಜು ಯೋಜನೆಯಡಿಯಲ್ಲಿ ರೂ. ೬೬ ಲಕ್ಷಕ್ಕಾಗಿ ಪ್ರಸ್ತಾವನೆ ಸಲ್ಲಿಸಿದ್ದಾರೆ.

ನ್ಯಾಕ್ (ಎನ್‌ಎಎಸಿ) ಮಾನ್ಯತೆ ಪಡೆಯಲು ೨೦೧೭-೧೮ರ ಶೈಕ್ಷಣಿಕ ವರ್ಷದಲ್ಲಿ ಹಲವಾರು ಮಹತ್ವದ ಯೋಜನೆಗಳನ್ನು ಪೂರ್ಣಗೊಳಿಸಿದ್ದಾರೆ. ಅದರಲ್ಲಿ ಪ್ರಮುಖವಾಗಿ ೧೮ ಪ್ರಯೋಗಾಲಯಗಳು ತರಗತಿ ಕೋಣೆಗಳ ನವೀಕರಣ, ಕಾಲೇಜಿನ ಮುಖ್ಯ ದ್ವಾರಗಳ ನವೀಕರಣ, ಹಸಿರು ಉದ್ಯಾನ ನಿರ್ಮಾಣ, ಕಾಲೇಜಿನ ಮುಂಭಾಗದ ಆವರಣದಲ್ಲಿ ನೆಲಗಟ್ಟು (ಪಿಎವಿಇಆರ್‌ಎಸ್) ಅಳವಡಿಸುವಂತಹ ಮುಂತಾದ ಅಭಿವೃದ್ಧಿಪರ ಕೆಲಸಗಳು ಮಾಡಿದ್ದಾರೆ.

ಫಾರ್ಮಸಿ ಕಾಲೇಜು ಹಾಗೂ ಪಬ್ಲಿಕ್ ಶಾಲೆಯು ಬೆಳ್ಳಿ ಮಹೋತ್ಸವಗಳನ್ನು ಅರ್ಥಪೂರ್ಣವಾಗಿ ಅದ್ದೂರಿಯಿಂದ ಆಚರಿಸಿ ಈ ಮಹೋತ್ಸವಕ್ಕೆ ರಾಷ್ಟ್ರೀಯ ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾದ

ಅಧ್ಯಕ್ಷರು ಹಾಗೂ ಜೆ.ಎಸ್.ಎಸ್. ಮೈಸೂರ ವಿಶ್ವವಿದ್ಯಾಲಯದ ಕುಲಪತಿಗಳು ಆದ ಡಾ॥ ಬಿ.ಸುರೇಶ ಸೇರಿದಂತೆ ರಾಷ್ಟ್ರೀಯ ವೈದ್ಯ ವಿಜ್ಞಾನ ವಿದ್ವಾಂಸರು ಭಾಗವಹಿಸುವಂತಹ ಒಳ್ಳೆಯ ಅವಕಾಶ ಒದಗಿಸಿಕೊಟ್ಟಿದ್ದಾರೆ.

ಕರ್ನಾಟಕ ಕಾಲೇಜಿನಲ್ಲಿ ಹಿಂದೆ ಕೇವಲ ಮೂರು (೩) ಪಿ.ಜಿ. ಕೋರ್ಸಗಳಿದ್ದವು. ಹೊಸದಾಗಿ ನಾಲ್ಕು ಪಿ.ಜಿ. ಕೋರ್ಸ್‌ಗಳನ್ನು ಮತ್ತು ಒಂದು ಗಣಕ ವಿಜ್ಞಾನ ಸಂಶೋಧನಾ ಕೇಂದ್ರವನ್ನು ಮತ್ತು ಪ್ರಾಣಿ ಶಾಸ್ತ್ರ ವಿಭಾಗವೂ ಕೂಡಾ ಪ್ರಾರಂಭ ಮಾಡಿದ್ದಾರೆ.

ಯುಜಿಸಿ, ಎನ್‌ಪಿಟಿಇಎಲ್, ಜಿಯುಜಿ, ಕೆಎಚ್‌ಇಎಲ್ ಇವರುಗಳಿಂದ ಸುಮಾರು ೧೮ ವಿವಿಧ ಸಮಾವೇಶ, ವಿಚಾರ ಸಂಕಿರಣ ಸಲುವಾಗಿ ರೂ. ೧೬.೮೯ ಲಕ್ಷ ಧನ ಸಹಾಯ ಸಂಸ್ಥೆಗೆ ಒದಗಿಸಿಕೊಟ್ಟಿದ್ದಾರೆ.

ಇಡಿ ಗುಲ್ಬರ್ಗಾ ವಿಶ್ವವಿದ್ಯಾಲಯ ವ್ಯಾಪ್ತಿಯೊಳಗಿನ ೩೬೦ ಕಾಲೇಜುಗಳಲ್ಲಿ ಗಣಕವಿಜ್ಞಾನದಲ್ಲಿ ಅಂತರ್ ರಾಷ್ಟ್ರೀಯ ವಿಚಾರ ಸಂಕಿರಣ ಏರ್ಪಡಿಸಿದ ಮೊಟ್ಟ ಮೊದಲನೆಯ ಕಾಲೇಜು ಎಂಬುದು “ಹೆಮ್ಮೆಯ ವಿಷಯ.

ಪಾಟೀಲರ ಅವಧಿಯಲ್ಲಿ ಎಲ್.ಕೆ.ಜಿ. ಯಿಂದ ಪಿ.ಜಿ. ಕೋರ್ಸುಗಳ ವಿದ್ಯಾರ್ಥಿಗಳು ಅಗ್ರ ಶ್ರೇಣಿಯಲ್ಲಿ ಉತ್ತೀರ್ಣರಾಗುವಂತೆ ಮತ್ತು ಎಮ್.ಎಸ್.ಸಿ. ಕಂಪ್ಯೂಟರ್ ಸೈನ್ಸ್ ಬಿ.ಸಿ.ಎ. ಬಿ.ಎಸ್ಸಿ. ವಿದ್ಯಾರ್ಥಿಗಳ ರಾಜ್ಯಪಾಲರಿಂದ ಚಿನ್ನದ ಪದಕ ಪಡೆದುಕೊಂಡದ್ದು, ಹೆಮ್ಮೆ ಸಂಗತಿ.

ಕರ್ನಾಟಕ ಕಾಲೇಜ ಕನ್ನಡ ಸಂಶೋಧನಾ ಕೇಂದ್ರದಿಂದ ಅನೇಕ ವಿದ್ಯಾರ್ಥಿಗಳು ಎಂ.ಫಿಲ್. ಹಾಗೂ ಪಿಎಚ್.ಡಿ. ಪದವಿಧರರಾಗಿ ಹೊರ ಹೊಮ್ಮಿದು ಹೆಮ್ಮೆಯ ಸಂಗತಿಯಾಗಿದೆ.

ಇಷ್ಟೆ ಅಲ್ಲದೆ ಪಠ್ಯೇತರ ಚಟುವಟಿಕೆಗಳಲ್ಲಿಯ ವಿದ್ಯಾರ್ಥಿಗಳು ಭಾಗವಹಿಸುವಂತೆ ಪ್ರೋತ್ಸಾಹವನ್ನು ನೀಡುತ್ತಾರೆ. ಇದರಿಂದ ಎನ್.ಸಿ.ಸಿ. ಎನ್.ಎಸ್.ಎಸ್. ಮತ್ತು ವಿವಿಧ ಚರ್ಚಾ ಸ್ಪರ್ಧೆಗಳಲ್ಲಿ ರಾಜ್ಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ನೂರಾರು ಬಹುಮಾನ, ಪ್ರಮಾಣ ಪತ್ರ, ಪದಕ, ಕಪ್‌ಗಳು ಪಡೆದುಕೊಂಡು ಬಂದಿರುವುದು ಇವರು ಪಠ್ಯೇತರ ಚಟುವಟಿಕೆಗಳಿಗೆ ಕೊಟ್ಟ ಮಹತ್ವ ಎದ್ದು ಕಾಣುತ್ತದೆ.

ವಿಶೇಷವಾಗಿ ವಿವಿಧ ಕಾರ್ಯಕ್ರಮಗಳಲ್ಲಿ ರಾಷ್ಟ್ರೀಯ ಅಂತರರಾಷ್ಟ್ರೀಯ ಖ್ಯಾತಿವೆತ್ತ ವಿದ್ವಾಂಸರು, ವಿಜ್ಞಾನಿಗಳು ಸಂಸ್ಥೆಗೆ ಭೇಟಿ ನೀಡಿರುವರು. ಮುಖ್ಯವಾಗಿ ಭಾರತ ರತ್ನ ಪ್ರೊ. ಸಿ.ಎನ್. ಆರ್ ರಾವ. ಅಮೇರಿಕಾದ ಖ್ಯಾತ ವಿಜ್ಞಾನಿಗಳಾದ ಯುಜೀನ್ ಹಾಗೂ ನಾಸಾದ ಅನಾ. ಇಟಾಲಿಯ ವಿಟೋ ಆಂಟಿನಿ, ಎನ್.ಸಿ.ಇ. ಆರ್.ಟಿ. ಮುಖ್ಯಸ್ಥ ಪ್ರೊ. ಸಂತೋಷ ಪಾಂಡಾ, ಮೆಲಬಾರ್ನ್ ವಿಶ್ವವಿದ್ಯಾಲಯದ ಡಾ. ರಾಜಕುಮಾರ ಬುಯ್ಯಾ ಇಂಡಿಯನ್ ಇನ್ಸ್ ಟ್ಯೂಟ್ ಆಫ್ ಇನ್ ಫಾರ ಮೇಷನ್ ಟೆಕ್ನಾಲೋಜಿ ಅಲಹಬಾದ ನಿರ್ದೇಶಕರಾದ ಡಾ.ಪಿ. ನಾಗಭೂಷಣ ಕಂಪ್ಯೂಟರ ವಿಜನ್ ಆಂಡ್ ಪ್ಯಾಟರ್ನ್ ಇಂಡಿಯನ್ ಸ್ಟಾಟಿಕಲ್ ಇನ್‌ಸ್ಟ್ಯೂಟ್ ಕಲ್ಕತ್ತಾದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾದ ಬಿ.ಬಿ. ಚೌದರಿ ಮೊದಲಾದ ಪ್ರಮುಖ ಗಣ್ಯ ವ್ಯಕ್ತಿಗಳು ನಮ್ಮ ಸಂಸ್ಥೆಗೆ ಬರುವಂತೆ ಮಾಡಿ ಸಂಸ್ಥೆಗೆ ಅವರ ಮಾರ್ಗದರ್ಶನ ಪಡೆಯುವಂತಹ ಸದಾವಕಾಶ ಸಿಕ್ಕಿದ್ದು ಅವರ ಅವಧಿಯಲ್ಲಿಯೇ.

ಕರ್ನಾಟಕ ಕಾಲೇಜಿನಲ್ಲಿ ಮಳೆ ನೀರು ಕೊಯ್ಲು, ಸೋಲಾರ ಹಾಗೂ ಪ್ರತ್ಯೇಕ ವಿದ್ಯುತ್ ಪರಿವರ್ತಕ ವ್ಯವಸ್ಥೆ ಹಾಗೂ ಎಲ್ಲಾ ಅಂಗ ಸಂಸ್ಥೆಗಳಲ್ಲಿ ಬಯೋಮೆಟ್ರಿಕ್ ಅಳವಡಿಸುವಂತಹ ಕೆಲಸ ಮಾಡಿರುವುದಲ್ಲದೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಉತ್ತಮ ಉಪಹಾರ ಗೃಹದ ವ್ಯವಸ್ಥೆ ಮಾಡಿದ್ದಾರೆ.

ದೂರದೃಷ್ಟಿ:

ಒಂದು ಸಂಸ್ಥೆಯ ಅಭಿವೃದ್ಧಿ ಅದು ಹೊಂದಿರುವ ಮೂಲಭೂತ ಸೌಕರ್ಯಗಳನ್ನು ಅವಲಂಬಿಸಿರುತ್ತದೆ. ಆದ್ದರಿಂದ ಬಹುತೇಕ ಅಂಗ ಸಂಸ್ಥೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಡುವುದ ರೊಂದಿಗೆ ಅನೇಕ ಹೊಸ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ಕರ್ನಾಟಕ ಪದವಿ ಕಾಲೇಜು ಆವರಣದಲ್ಲಿ ಕಾಲೇಜಿನ ೫೦ನೇ ವರ್ಷದ ಸುವರ್ಣ ಮಹೋತ್ಸವ ಸವಿನೆನಪಿಗಾಗಿ **ಪಿ.ಜಿ. ಬ್ಲಾಕ್ ಗೋಲ್ಡನ್ ಜುಬ್ಲಿ ಬಿಲ್ಡಿಂಗ್, ಕರ್ನಾಟಕ ಪದವಿ ಪೂರ್ವ ಕಾಲೇಜಿನ ೫೦ನೆ ವರ್ಷದ ಸುವರ್ಣ ಮಹೋತ್ಸವ ಸವಿನೆನಪಿಗಾಗಿ ಪ್ರತ್ಯೇಕವಾದ ಹೊಸ ಕಟ್ಟಡ, ಚಿಟಗುಪ್ಪಾದಲ್ಲಿ ನರ್ಸಿಂಗ್ ಕಾಲೇಜು ಕಟ್ಟಡ,** ಫಾರ್ಮಸಿ ಕಾಲೇಜಿನ ಎದುರು **ವಾಣಿಜ್ಯ ಮಳಿಗೆಗಳು,** ಫಾರ್ಮಸಿ ಕಾಲೇಜಿನ ಸೆಲ್ಲರ್‌ನಲ್ಲಿ **ಪರೀಕ್ಷಾ ಭವನ** ತಲೆ ಎತ್ತಿ ನಿಲ್ಲುತ್ತಿವೆ.

ಕರ್ನಾಟಕ ಪದವಿ ಕಾಲೇಜು ಆವರಣದಲ್ಲಿ ಪ್ರತಿ ತಿಂಗಳು ೪೫ ರಿಂದ ೬೦ ಸಾವಿರ ರೂಪಾಯಿಗಳ ವಿದ್ಯುತ್ ಬಿಲ್ಲು ಬರುತ್ತಿದ್ದ ಕಾರಣ ಸುಮಾರು ೨೦ ಲಕ್ಷ ರೂಪಾಯಿ ವ್ಯಚ್ಚ ಮಾಡಿ ಸೌರ ಘಟಕ (ಸೋಲಾರ ಉನಿಟ್) ಅಳವಡಿಸಿ ಪ್ರತಿ ವರ್ಷ ೫ ರಿಂದ ೬ ಲಕ್ಷ ರೂಪಾಯಿ ಉಳಿತಾಯವಾಗುತ್ತಿದೆ. ಇದೆಲ್ಲ ಡಾ॥ ಬಸವರಾಜ ಪಾಟೀಲರ ಅವರ ದೂರದೃಷ್ಟಿಯ ಫಲಗಳಾಗಿವೆ.

ಸಂಸ್ಥೆಯಲ್ಲಿ ಶಿಸ್ತು ಮತ್ತು ಮಕ್ಕಳಲ್ಲಿ ರಾಷ್ಟ್ರಪ್ರೇಮ ಬೆಳೆಸಲು ಕಡ್ಡಾಯ ರಾಷ್ಟ್ರಗೀತೆ ನಡೆಸುತ್ತಿರುವುದು ಇವರಲ್ಲಿರುವ ರಾಷ್ಟ್ರಪ್ರೇಮ ಎದ್ದು ಕಾಣುತ್ತದೆ.

ಗುಲ್ಬರ್ಗ ವಿಶ್ವವಿದ್ಯಾಲಯದ ಮಾನ್ಯ ಕಾಲಪತಿಗಳು ಕರ್ನಾಟಕ ಕಾಲೇಜಿನ ಈ ಎಲ್ಲಾ ಅಭಿವೃದ್ಧಿಗಳನ್ನು ಪರಿಗಣಿಸಿ ಹೈದ್ರಾಬಾದ ಕರ್ನಾಟಕ ವಿಭಾಗದಲ್ಲಿಯೇ ಉತ್ತಮ "ಲೀಡ್ ಕಾಲೇಜು" ಎಂದು ಪ್ರಶಂಶಾ ಪತ್ರ ನೀಡಿರುವುದು ಡಾ॥ ಬಸವರಾಜ ಪಾಟೀಲರ ಆಡಳಿತಾವಧಿಯಲ್ಲಿಯೇ.

ಇಷ್ಟೆ ಅಲ್ಲದೆ ಬಡ ವಿದ್ಯಾರ್ಥಿಗಳಿಗಾಗಿ ಅನ್ನಪೂರ್ಣ ಯೋಜನೆಯ ಅಡಿ ಅನ್ನದಾಸೋಹ, ಬಡ ವಿದ್ಯಾರ್ಥಿಗಳ ನಿಧಿಯಿಂದ ಧನ ಸಹಾಯ ಮುಂತಾದ ಪ್ರೋತ್ಸಾಹದಾಯಕ ಕಾರ್ಯ ಮಾಡಿದ್ದಾರೆ. ಎಲ್ಲಾ ಅಂಗ ಸಂಸ್ಥೆಗಳ ಶೈಕ್ಷಣಿಕ ಗುಣಮಟ್ಟ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಉನ್ನತ ಸಲಹೆ ಸೂಚನೆಗಳನ್ನು ಕೊಡುತ್ತಾ ಬಂದಿದ್ದಾರೆ.

ಶ್ರೀಯುತರು ಮಾತಾಡಿ ಬಿಡುವವರಲ್ಲ ಆಡಿದಂತೆ ಮಾಡಿ ತೋರುವವರು "ನುಡಿದಂತೆ ನಡೆ" ಇವರದು, ಮಿತ ಭಾಷಿಕರು, ನೇರ ನಡೆ-ನುಡಿಗೆ ಹೆಸರಾದವರು, ಎಂದೂ ಆಡಂಬರಕ್ಕೆ, ಹೊಗಳಿಕೆಗೆ ಎಡೆ ಮಾಡಿಕೊಟ್ಟವರಲ್ಲ. ಸರಳ ಸಾತ್ವಿಕ ಬದುಕು ಇವರದು ದೀರ್ಘ ಕಾಲದವರೆಗೆ ನಾನೇ ಅಧಿಕಾರದ ಚುಕ್ಕಾಣಿ ಹಿಡಿಯಬೇಕೆಂಬ "ಅಧಿಕಾರದ ಹಪಾಹಪಿತನದ ದಾಹ, ಹಂಬಲ ಅವರಿಗಿಲ್ಲ. ಅದಕ್ಕಾಗಿಯೇ ೨೦೧೨ರಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿ ಬಂದ ಪ್ರಥಮದಲ್ಲಿಯೇ ಇವರು ಮೊದಲು ಕೈಗೆತ್ತಿಕೊಂಡ ಪ್ರಗತಿಯ ಕೆಲಸವೆಂದರೆ ಸಂಸ್ಥೆಯ ಬೈಲಾಜನ್ನೇ ಬದಲಾವಣೆ ಮಾಡಿದ್ದು, ಏಕೆಂದರೆ ದೀರ್ಘಕಾಲದದವರೆಗೆ ಯಾವ ಅಧ್ಯಕ್ಷರುಗಳು ಮತ್ತು ಉಪಾಧ್ಯಕ್ಷರುಗಳು ಮುಂದುವರೆಯಬಾರದೆಂದು. ಈವೊಂದು ಅವಕಾಶವೂ ಎಲ್ಲರಿಗೂ ದೊರೆಯಬೇಕೆಂದು ಅಧಿಕಾರವಧಿಯನ್ನು "ಎರಡು ಅವಧಿಗಳಿಗೆ" ಮಾತ್ರ ಸೀಮಿತಗೊಳಿಸಿದ್ದಾರೆ. ಏಕೆಂದರೆ ಪ್ರಗತಿ ನಿಂತ ನೀರಾಗದೆ ಹರಿಯುವ ನೀರಾಗಬೇಕೆಂದು ಬಯಸಿದ್ದಾರೆ. ಕಾರಣ ಕಾಲ ಕಾಲಕ್ಕೆ ಹೊಸ ಹೊಸ, ಬೇರೆ ಬೇರೆ ವ್ಯಕ್ತಿಗಳು ಆರಿಸಿ ಬಂದರೆ ಅವರವರ ಅಭಿವೃದ್ಧಿಯ ಆಲೋಚನಾ ಕ್ರಮ ಬೇರೆಯಾಗಿರುತ್ತದೆ. ಇದರಿಂದ ಸಂಸ್ಥೆಯು ಪ್ರಗತಿ ಪಥದ ಕಡೆಗೆ ಕೊಂಡೊಯ್ಯಲು ಸಾಧ್ಯವಾಗುತ್ತದೆ ಎಂಬುದರಲ್ಲಿ ಅವರ ಸಮಷ್ಟಿ ಪ್ರಜ್ಞೆಯ ಮನಸ್ಥಿತಿ ಎದ್ದು ಕಾಣುತ್ತದೆ.

ಏಕೆಂದರೆ ದೂರದೃಷ್ಟಿ, ಆಲೋಚನಾ ಕ್ರಮ ಧ್ಯೇಯೋದ್ದೇಶಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತವೆ. ಆದುದರಿಂದ ಎಲ್ಲರಿಗೂ ಅವಕಾಶ ಸಿಕ್ಕಾಗ ಸಂಸ್ಥೆ ಇನ್ನು ಉನ್ನತ ಮಟ್ಟದಲ್ಲಿ ಪ್ರಗತಿ ಹೊಂದಲಿಕ್ಕೆ ಸಾಧ್ಯವಾಗಬಹುದೆಂದು ಆವೊಂದು ಉದ್ದೇಶದಿಂದ ಸಂಸ್ಥೆಯ ನಿಬಂಧನೆ (ಬೈಲಾಜ್) ಬದಲಾವಣೆ ಮಾಡಿದ್ದೇನೆ ಎಂದು ತಮ್ಮ ನಿಲುವನ್ನು ಸಮರ್ಥಿಸುತ್ತಾರೆ.

"ಇನ್ನೊಂದು ಬದಲಾವಣೆಯ ಕೆಲಸವೆಂದರೆ ಸದಸ್ಯತ್ವದ ಸಂಖ್ಯೆ ಹೆಚ್ಚಿಸಿರುವುದು" ಏಕೆಂದರೆ ಮೊದಲಿರುವ ಆಜೀವ ಸದಸ್ಯರುಗಳು ವಯಸ್ಸಾಗಿ ಸ್ವರ್ಗವಾಸಿಯಾಗಿದ್ದು ಆಜೀವ ಸದಸ್ಯತ್ವದ ಸಂಖ್ಯೆ ಕಡಿಮೆಯಾಗಿರುವುದರಿಂದ ಮತ್ತು ಹೊಸ ತಲೆ ಮಾರಿನ ಹೊಸ ಹೊಸ ಅಭಿವೃದ್ಧಿಯ ವಿಚಾರಗಳಿಂದ ಕೂಡಿದ ಯುವಕರಿಗೂ ಕೂಡಾ ಅವಕಾಶ ಸಿಗಲಿ ಎನ್ನುವ ಉದ್ದೇಶದಿಂದ "ಒನ್ ಪ್ಲಸ್ ಒನ್" ರಂತೆ ಆಜೀವ ಸದಸ್ಯತ್ವ ಪಡೆದುಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದು, ಇವರ ಅವಧಿಯಲ್ಲಿಯೇ ಎಂದು ಹೇಳಬಹುದು.

ಹೀಗೆ ಹತ್ತು ಹಲವಾರು ಪ್ರಗತಿಯ ಕೆಲಸಗಳನ್ನು ಕೈಗೊಂಡಿದ್ದಾರೆ. ಛಲವಿರಬೇಕು ಶರಣಂಗೆ ಪರ ಧನವನೊಲ್ಲೆನೆಂಬ ಶರಣರ ವಾಣಿಯಂತೆ ಲಂಚ ವಂಚನೆಗೆ ಅವಕಾಶ ಕೊಡದೆ ಅತ್ಯಂತ ಪ್ರಾಮಾಣಿಕತೆಯಿಂದ ಅಚ್ಚುಕಟ್ಟುತನದಿಂದ, ಶಿಸ್ತಿನಿಂದ ಅತ್ಯಂತ ಪ್ರಬುದ್ಧತೆಯಿಂದ 'ಸಂಸ್ಥೆಯ ಕೆಲಸ ದೇವರ ಕೆಲಸ'ವೆಂದು ನಿಷ್ಠೆಯಿಂದ ಕೆಲಸ ನಿರ್ವಹಿಸುತ್ತಾ ಬಂದಿರುವುದು ಸರ್ವವಿದಿತ ಸಂಗತಿ ಆದ್ದರಿಂದ ಇವರ ಬಗ್ಗೆ ಅತ್ಯಂತ ಜನಮಾನಸಕ್ಕೆ ಗೌರವದ ಭಾವನೆಯಿದೆ.

ಮದರ್ ಥೆರೆಸಾ ಎಜ್ಯುಕೇಶನ್ ಫೌಂಡೇಶನ್

"ಜ್ಞಾನವೇ ಶಕ್ತಿ" ಎಂಬಂತೆ ಈ ಜ್ಞಾನವನ್ನು ಪಡೆಯುವುದು ಶಿಕ್ಷಣ ಸಂಸ್ಥೆಗಳಿಂದ ಜನತೆಯ ಅಜ್ಞಾನ- ಅಂಧಕಾರವನ್ನು ಹೋಗಲಾಡಿಸ ಬೇಕಾದರೆ ಶಿಕ್ಷಣ ಸಂಸ್ಥೆಗಳ ಅವಶ್ಯಕತೆ ತುಂಬಾನೆ ಇದೆಯೆಂದು ಮನಗಂಡ ಅವರು ಹಲವಾರು ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರಾಗಿ, ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಅನುಭವವದ ಮೇಲೆ ಸ್ವತಂತ್ರವಾದ ಶಿಕ್ಷಣ ಸಂಸ್ಥೆ ಸ್ಥಾಪಿಸಬೇಕೆಂದು ಅಪೇಕ್ಷೆಪಟ್ಟರು. ಅದಕ್ಕೆ ಕಾರಣ ಶೈಕ್ಷಣಿಕವಾಗಿ ಜನತೆಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ನೆರವಾಗಲು ಸಾಧ್ಯ ಎಂಬುದಾಗಿದೆ. ಅದಕ್ಕಾಗಿ "ಮದರ್ ಥೆರೆಸಾ ಎಜ್ಯುಕೇಶನ್ ಫೌಂಡೇಶನ್" ಸಂಸ್ಥೆಯನ್ನು ಹುಟ್ಟು ಹಾಕಿ ಪ್ರೌಢ ಶಾಲೆ ಮತ್ತು ಡಿ. ಫಾರ್ಮಸಿ ಮುಂತಾದ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಇದರ ಮೂಲಕ ಅನೇಕ ವಿದ್ಯಾರ್ಥಿಗಳಿಗೆ ಒಳ್ಳೆಯ ಶಿಕ್ಷಣ ನೀಡುತ್ತಿದ್ದಾರೆ. ಈ ಸಂಸ್ಥೆಯಿಂದ ಹೊರಬಂದ ವಿದ್ಯಾರ್ಥಿಗಳು ಉತ್ತಮವಾದ ಜೀವನವನ್ನು ರೂಪಿಸಿಕೊಳ್ಳುತ್ತಾರೆ ಎಂಬುದರಲ್ಲಿ ಎರಡು ಮಾತಿಲ್ಲ. ಈ ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲಾ ರೀತಿಯ ಮೂಲ ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಉತ್ತಮವಾದ ಕಟ್ಟಡ ಉತ್ತಮ ಉಪನ್ಯಾಸಕರುಗಳ ವ್ಯವಸ್ಥೆಗೊಳಿಸಿ ಯಾವುದೇ ಕೊರತೆಯಿಲ್ಲದೆ ಸಂಸ್ಥೆಯು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದಾರೆ. ಈ ಸಂಸ್ಥೆಯಿಂದ ಅನೇಕ ವಿದ್ಯಾರ್ಥಿಗಳು ವಿದ್ಯಾ ಪಡೆದು ಹೊರ ಹೋಗುತ್ತಿದ್ದಾರೆ.

ಇತರೆ ಸಂಘ ಸಂಸ್ಥೆಗಳಿಂದ – ಶೈಕ್ಷಣಿಕ ವಿಕಾಸ :

"ಅತ್ತಿತ್ತ ಸುತ್ತುತ್ತ, ಹೊತ್ತು ನೀ ಕಳೆಯದಿರು
ಹೊತ್ತು ಬೆಲೆಯುಳ್ಳದ್ದು, ಮುತ್ತಿಗಿಂತ
ಮುತ್ತು ಕಳಕೊಂಡಾಗ ಹುಡುಕಲದು ಸಿಕ್ಕಿತು
ಹೊತ್ತು ಕಳೆದೊಡೆ ಸಿಗದು ಬೋಳು ಬಸವಾ"

ಉರುಳಿ ಹೋದ ಕಾಲ ಮರಳಿ ಬರುವುದಿಲ್ಲ. ಎಂಬಂತೆ ಸಿಕ್ಕ ಸಮಯವನ್ನು ವ್ಯರ್ಥವಾಗಿ ಕಳೆಯದೆ ಸಮಾನ ಮನಸ್ಕರಾದವರೊಂದಿಗೆ ಕೂಡಿ ಹಲವಾರು ಯೋಜನೆಗಳನ್ನು ಹಾಕಿಕೊಂಡು ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಅವುಗಳ ಮೂಲಕ ಅಭಿವೃದ್ಧಿಯ ಕಾರ್ಯಗಳನ್ನು ಮಾಡುವುದರ ಮೂಲಕ ಉಳಿದ ಸಮಯವನ್ನು ಸದುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಬಹುಮುಖಿಯಾಗಿ ಬೀದರ ಜಿಲ್ಲೆಯ ಭಾರತೀಯ ವೈದ್ಯಕೀಯ ಸಂಘದ ಅಧ್ಯಕ್ಷರಾಗಿ ಮತ್ತು ಲಯನ್ಸ್ ಕಬ್ ಬೀದರನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದು, ಹಲವಾರು ಸಂಘ ಸಂಸ್ಥೆಗಳ ಮೂಲಕ ಹಲವು ಯೋಜನೆಗಳೊಂದಿಗೆ ಗಂಭೀರವಾಗಿ ಚಿಂತಿಸುವ ಆಲೋಚಿಸುವ ವ್ಯಕ್ತಿತ್ವ ರೂಪಿಸಿಕೊಂಡಿರುವರು.

ಡಾ॥ ವಿಶ್ವನಾಥ ಪ್ರಭಾರವರು ಸೇರಿದಂತೆ ಹಲವಾರು ವೈದ್ಯರುಗಳು ತಮ್ಮ ೮ ಗಂಟೆಯ ಸೇವೆಯ ನಂತರ ಯಾವುದಾದರೊಂದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಆಲೋಚಿಸಿ "ಸಿಟಿಜನ್ ಸೊಸಾಯಿಟಿಯನ್ನು" ಹುಟ್ಟು ಹಾಕಿ ಅದರ ಮೂಲಕ ಬಡ ವಿದ್ಯಾರ್ಥಿಗಳಿಗೆ ದತ್ತುಕ ತೆಗೆದುಕೊಂಡು ಆ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಹಾಯವನ್ನು ಮಾಡುವ ಉದ್ದಾತ್ತ ಗುಣ ಇವರದು "ಸಿಟಿಜನ್ ಸೊಸಾಯಿಟಿ" ಮೂಲಕ ಒಂದು ಒಳಾಂಗಣ ಆಟದ (ಮೈದಾನ) ಕಟ್ಟಡ ಕಟ್ಟಿಸಿದ್ದಾರೆ. ಬಡ ಮಕ್ಕಳು ಸಹಾಯಕ್ಕಾಗಿ ಕೇಳಿಕೊಂಡು ಬಂದಾಗ ಅನೇಕ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕಾಗಿ ಸಹಾಯ ಮಾಡಿದ್ದಾರೆ. ೭ ಜನ ಇಂಜಿನಿಯರುಗಳು ಮತ್ತು ೩ ವಿದ್ಯಾರ್ಥಿಗಳು ಮೆಡಿಕಲ್ ಪೂರೈಸಿ ಅವರು ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

"ಭಾರತೀಯ ವೈದ್ಯಕೀಯ ಸಂಘದ ಅಧ್ಯಕ್ಷರಾಗಿ ಹಲವಾರು ಕೆಲಸ ಕಾರ್ಯಗಳನ್ನು ನಿರ್ವಹಿಸಿದ್ದಾರೆ. ಅದಕ್ಕೊಂದು ಕಟ್ಟಡ ಇಲ್ಲದಕ್ಕಾಗಿ ೧೯೯೦ ರಲ್ಲಿ ಐಎಂಎ. ಸಂಸ್ಥೆಗೆ ಚೇರ್ಮನ್ನರಾಗಿ ನೇಮಕಗೊಂಡ ಆ ಸಂದರ್ಭದಲ್ಲಿ

ಐ.ಎಂ.ಎ. ಕಟ್ಟಡವನ್ನು ಇವರ ಅಧ್ಯಕ್ಷತೆಯಲ್ಲಿಯೇ ನಿರ್ಮಾಣಗೊಂಡಿದೆ. ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ "ಮುನಿಯಮ್ಮನವರ ಅವಧಿಯಲ್ಲಿ ಕ್ರಿ.ಶ. ೧೯೯೭ ರಿಂದ ೨೦೦೦ದ ವರೆಗೆ "ಗುಲಬರ್ಗಾ ವಿಶ್ವವಿದ್ಯಾಲಯದ "ಅಕಾಡೆಮಿ ಕೌನ್ಸಿಲ ಸದಸ್ಯರಾಗಿ ನೇಮಕಗೊಂಡು ಅನೇಕ ಶೈಕ್ಷಣಿಕ ಪ್ರಗತಿಪರ ಕೆಲಸ ಮಾಡಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ.

ಗೆಳೆಯರ ಲೋಕ :

ಡಾ॥ ಬಸವರಾಜ ಪಾಟೀಲರು ಬ್ಯಾಲದಿಂದಲೇ ಎಲ್ಲರೊಂದಿಗೆ ಸ್ನೇಹದಿಂದ ಒಡಗೂಡುವ, ಗೆಳೆಯರೊಂದಿಗೆ ಆತ್ಮೀಯವಾಗಿ ಬೆರೆಯುವ ಸ್ನೇಹ ಜೀವಿಯಾಗಿದ್ದಾರೆ. ಚಿಕ್ಕವರಿರುವಾಗ ಬಾಲ್ಯ ಸ್ನೇಹಿತರೊಂದಿಗೆ ಒಡಗೂಡಿ ಗಿಲ್ಲಿದಾಂಡು, ಲಗೋರಿ, ಕಬ್ಬಡಿ ಖೋ, ಖೋ, ಮುಂತಾದ ದೇಸಿ ಆಟಗಳನ್ನು ಆಡುತ್ತಾ ಕಾಲ ಕಳೆದಿದ್ದು ಇನ್ನು ಅವರು ಮರೆತಿಲ್ಲ. ನಂತರ ಪ್ರೌಢ ಶಾಲೆ ಗೆಳೆಯರು, ಮತ್ತು ಅವರು ಸ್ನಾತ್ತಕೋತ್ತರ ಪದವಿಯನ್ನು ನಿರ್ವಹಿಸುವಾಗ ವೈದ್ಯಗೆಳೆಯರ ಒಡನಾಟದೊಂದಿಗೆ ಹಲವು ಕಡೆ ಪ್ರವಾಸಕ್ಕೆ ಹೋಗಿರುವುದುಂಟು ಅಲ್ಲದೆ ಅವರ ಸಮಾನ ಮನಸ್ಕರಾದ ಆತ್ಮೀಯ ಗೆಳೆಯರು ಡಾ॥ ಚಂದ್ರಶೇಖರ ಮಡಕಿ, ಡಾ॥ ವಿಜಯಕುಮಾರ ಬಿರಾದಾರ, ವೈಜಿನಾಥ ಚಕೋತೆ, ಡಾ॥ ಮೋಹನ ಕುಲ್ಕರ್ಣಿ,ಡಾ॥ ಅಮೃತ ದೇಶಮುಖ ಇವರೆಲ್ಲರೂ ವೈದ್ಯರಾಗಿ ನಿವೃತ್ತಿಯನ್ನು ಹೊಂದಿದ್ದಾರೆ. ಅದರಲ್ಲಿ ಡಾ॥ ಚಂದ್ರಶೇಖರ ಮಡಕಿ ಮಾತ್ರ ಈಗ ನಮ್ಮೊಂದಿಗಿಲ್ಲ ಎಂಬ ನೋವು ಅವರಿಗಿದೆ. ಡಾ॥ ವೈಜಿನಾಥ ಚಕೋತೆ ಅವರು ಅಮೇರಿಕಾದಲ್ಲಿದ್ದಾರೆ. ಎಲ್ಲಾ ಗೆಳೆಯರು ಕೂಡಿಕೊಂಡು ಆತ್ಮೀಯರಾಗಿ ಒಡನಾಡುವುದರ ಜೊತೆಗೆ ಅನೇಕ ಅಭಿವೃದ್ಧಿಯ ಕಾರ್ಯಗಳನ್ನು ಮಾಡುತ್ತಿದ್ದಾರೆ.

ಸಮಕಾಲೀನರ ಅಭಿಪ್ರಾಯ

ಹಿತ್ತಲ ಗಿಡ ಯಾವತ್ತೂ ಮದ್ದಲ್ಲ ಎಂಬ ಗಾದೆ ಮಾತಿನಂತೆ ತಮ್ಮ ನೆಲದಲ್ಲಿನ, ಸುತ್ತಲಿನ ಸಾಧಕರಿಗೆ ಗೌರವ, ಮನ್ನಣೆ ಸಿಗಲಾರದೆಂಬ ಸಿದ್ಧ ಗ್ರಹಿಕೆಗಳಿವೆ. ಆದರೆ ಡಾ. ಬಸವರಾಜ ಜಿ. ಪಾಟೀಲರ ಬಗ್ಗೆ ಈ ಮೇಲಿನ ಗ್ರಹಿಕೆಗಳು ಅಪವಾದವಾಗಿ ಕಾಣಿಸುತ್ತವೆ. ಅವರು ಮಾತನಾಡಿದರೆ ಅದು ಶಾಸನದಂತೆ ಅವರಿಗೆ ಮೈಯೆಲ್ಲಾ ಕೀವಿ. ಸಮಾನ ಮನಸ್ಕರಿಗೆ, ಸಮಾನ ವಯಸ್ಕರಿಗೆ ಅವರ ಬದುಕಿನ ಸೂಕ್ಷ್ಮಾತೀ ಸೂಕ್ಷ್ಮ ಸಂಗತಿಗಳು ಗೊತ್ತಿರುವಂತೆ ದೂರದವರಿಗೂ ಅವರ ವ್ಯಕ್ತಿತ್ವದ ಪರಿಚಯವಿದೆ. ಅದು ಎಷ್ಟು ಮಹತ್ವದ್ದೆಂದರೆ, "ಮಹಾತ್ಮರ ಜತೆ ಜತೆಯಲ್ಲಿಯೇ ಅವರನ್ನು ಅರ್ಥ ಮಾಡಿಕೊಳ್ಳುವಂಥ ಅವರನ್ನು ಬೆಂಬಲಿಸುವಂಥ ಅಥವಾ ಅವರ ಮರಣಾನಂತರ ಅವರ ಸಂದೇಶವನ್ನು ಪ್ರಚಾರ ಮಾಡುವಂಥ ಶಿಷ್ಯರೋ, ಹಿತೈಷಿಗಳೋ ಹುಟ್ಟಿಕೊಳ್ಳುತ್ತಾರೆ. ಬುದ್ಧನಿಗೆ ಆನಂದ ಉಪಾಲಿಯರು, ಯೇಸುವಿಗೆ ಮ್ಯಾಥ್ಯೋ, ಮಾರ್ಕ್, ಲ್ಯೂಕ್, ಜಾನ್ ಆದಿ ಶಿಷ್ಯರು, ಮಾರ್ಕ್ಸ್‌ರಿಗೆ ಎಂಗೆಲ್ಸ್, ಬಸವಣ್ಣನಿಗೆ ಚೆನ್ನಬಸವಣ್ಣ, ಹಡಪದ ಅಪ್ಪಣ್ಣ ಮೊದಲಾದವರು. ಹರಿಹರನಿಗೆ ರಾಘವಾಂಕ, ಸಿದ್ಧನಂಜೇಶ ಗಾಂಧೀಜಿಗೆ ಮಹಾದೇವ ದೇಸಾಯಿ, ಪ್ಯಾರೆಲಾಲ ಮೊದಲಾದ ಆತ್ಮೀಯರು. ಶ್ರೀ ರಾಮಕೃಷ್ಣ ಪರಮಹಂಸರಿಗೆ, ಸ್ವಾಮಿ ವಿವೇಕಾನಂದರು ದೊರೆಯದಿದ್ದರೆ, ಆ ಮಹಾತ್ಮರ ಮಹತ್ವ, ದರ್ಶನ ಮುಂದಿನ ಪೀಳಿಗೆಗೆ ಅಲಭ್ಯವಾಗುತ್ತಿತ್ತು. ಅವರು ರಹಸ್ಯಾತ್ಮಕ ಸಮಸ್ಯೆಯಾಗಿಯೇ ಉಳಿಯುತ್ತಿದ್ದರೆಂದು ತೋರುತ್ತದೆ. ಅವರ ಜೀವನ ಪರಿಚಯ ಅಪೂರ್ಣವಾಗಿಯೇ ಉಳಿಯುತ್ತಿತ್ತೆಂದು ಕಾಣುತ್ತದೆ. ಸಮಾನ ಮನೋಧರ್ಮದ ಸೂಕ್ಷ್ಮವೀಕ್ಷಣ ಗ್ರಹಣ ಸಾಮರ್ಥ್ಯದ

ನಿಕಟವಾಸಿಗಳಿಗೆ ಅವರ ಬದುಕಿನ ಸೂಕ್ಷ್ಮಾತಿ ಸೂಕ್ಷ್ಮ ವಿವರಗಳು ಲಭಿಸುವುದಾದರೆ ಸಾಕ್ಷಿ ಪ್ರಜ್ಞೆಯ ದೂರ ವಾಸಿಗಳಿಗೆ ಅವರ ಬದುಕಿನ ಇತರ ಮಗ್ಗಲುಗಳ ಪರಿಚಯವಾಗುತ್ತದೆ. ಪೂಜ್ಯ ಭಾವನೆಯಿಂದಾಗಿ ಹತ್ತಿರದವರಿಗೆ ಅವರ ಬದುಕಿನ ಬೆಳಕಿನ ಭಾಗ ಕಾಣುವಂತೆ, ನಿರ್ವಿಕಾರ ಮನೋಭಾವದಿಂದಾಗಿ ದೂರದವರಿಗೆ ಅವರ ಬದುಕಿನ ಕತ್ತಲೆಯ ಭಾಗವೂ ಕಾಣಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ತತ್ಕಾಲೀನ ಮನಃಸ್ಥಿತಿ, ಸಂಸ್ಕಾರ, ಸಂದರ್ಭಗಳಿಗನುಗುಣವಾಗಿ ಮತ್ತೊಬ್ಬ ವ್ಯಕ್ತಿಯ ಗುಣಾವಗುಣಗಳನ್ನು ಗ್ರಹಿಸುತ್ತಾನೆ ಎನ್ನುವುದು ಸಮನಾದರೂ, ಒಬ್ಬ ಮಹಾಪುರುಷನ ನೆಲೆ ಬೆಲೆಗಳ ತುಲನಕ್ಕೆ ವಿವಿಧಾಭಿಪ್ರಾಯಗಳು ಉಪಯುಕ್ತವಾಗುತ್ತವೆ ಎಂಬುದಂತು ನಿಜ"(ದೇಜಗೌರವರ ಬಸವೇಶ್ವರ ಮತ್ತು ಕಾರ್ಲ್‌ಮಾರ್ಕ್ಸ್, ಪು-೧೦೦) ಈ ದಿಶೆಯಲ್ಲಿ ಡಾ. ಬಸವರಾಜ ಜಿ. ಪಾಟೀಲರ ನೈಜವಾದ ವ್ಯಕ್ತಿತ್ವವನ್ನು ಗುರುತಿಸಲು ಅವರ ಸಮಕಾಲೀನರು ಕಂಡಂತೆ ನೀಡಿರುವ ಅಭಿಪ್ರಾಯಗಳು ಮಹತ್ವದ ದಾಖಲೆಗಳಾಗುತ್ತವೆಂಬುದರಲ್ಲಿ ಎರಡು ಮಾತಿಲ್ಲ.

ಡಾ. ಬಸವರಾಜ ಜಿ. ಪಾಟೀಲ ಅವರದ್ದು ಬಹುಮುಖ ಪ್ರತಿಭೆಯುಳ್ಳ ಜನಹಿತದ ವ್ಯಕ್ತಿತ್ವ. ಸಮಾಜೋ-ಧಾರ್ಮಿಕ ಬೆಳವಣಿಗೆಯಲ್ಲಿ ಸಹಿಷ್ಣುತೆ ಮತ್ತು ಪರಸ್ಪರ ಸಹಭಾಗಿತ್ವದ ಅಂಶಗಳು ಶಿಕ್ಷಣದ ಅಭಿವೃದ್ಧಿಗೆ ಕಾರಣವೆಂದರಿತವರು. ಈ ದಿಶೆಯಲ್ಲಿ ಅವರು ಸದಾ ಕ್ರಿಯಾಶೀಲರಾಗಿದ್ದಾರೆ. ದಕ್ಷತೆ, ಪ್ರಾಮಾಣಿಕತೆ ಗುಣಗಳಿಂದಾಗಿ ಅವರ ದೂರದೃಷ್ಟಿ ಸಮಾಜಮುಖಿಯಾಗಿದ್ದು ಜನಹಿತದ ತಳಹದಿಗೆ ಪೂರಕವಾಗಿದೆ. ಸಾತ್ವಿಕ ತತ್ತ್ವಾಧಾರಿತ ಬದುಕಿನೊಂದಿಗೆ ಹೋರಾಟದ ನೆಲೆ, ಸಾಮಾಜಿಕ ಸಮತೆ, ಸಾಂಸ್ಕೃತಿಕ ಸಹೃದಯತೆ ಬೆಳೆಸುತ್ತಲೇ ಮಾನವೀಯತೆಯನ್ನು ಸದಾ ಸಂರಕ್ಷಿಸುವ ಮಹಾಮೇಧಾವಿಯಂತೆ ಕಂಡುಬರುತ್ತಿರುವ ಜೀವನ ಸಾಧನೆಗಳು ಅನನ್ಯವಾಗಿವೆ. ಸಮಕಾಲೀನ ಬಂಧು-ಬಾಂಧವರ, ಸಾಹಿತಿ-ಸಹೃದಯರ, ಸಮಾಜೋ-ರಾಜಕೀಯ ಚಿಂತಕರ ಅಭಿಪ್ರಾಯಗಳು ಗಮನಾರ್ಹವಾಗಿವೆ.

ಸಮಾಜದ ಹಿತಚಿಂತಕ :

ಶ್ರೀ ಬಸವರಾಜ ಪಾಟೀಲ ಅಷ್ಟೂರ ಕೇವಲ ವ್ಯಕ್ತಿಯಲ್ಲ. ಶಿಕ್ಷಣ ಕ್ಷೇತ್ರದ ಪ್ರಚಂಡ ಶಕ್ತಿಯಾಗಿದ್ದಾರೆ. ಸಮಾಜದ ಹಿತಚಿಂತಕರಾಗಿದ್ದಾರೆ. ಅಖಂಡವಾಗಿ ನಲವತ್ತು ವರ್ಷಗಳಿಂದ ತಮ್ಮನ್ನೇ ತಾವು ಅರ್ಪಿಸಿಕೊಂಡು ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಮಾಡುತ್ತಿದ್ದಾರೆ. ಶೈಕ್ಷಣಿಕ ರಂಗದಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಯಾವಾಗಲೂ ಸಮಾಜದ ಬಗ್ಗೆ ಚಿಂತನೆ ಮಾಡುತ್ತಾರೆ. ಹತ್ತು ಹಲವು ಯೋಜನೆ ಮಾಡುತ್ತ ಸಮಾಜಕ್ಕೆ ಸೇವೆ ಮಾಡುತ್ತಾರೆ.

ಉನ್ನತ ಸ್ಥಾನಕ್ಕೇರಿದರೂ ಅಹಂ ಒಂದಿಷ್ಟು ಸುಳಿದಿಲ್ಲ. 'ನಾ' 'ನಾ' ಎಂಬ ಭಾವವಿಲ್ಲ. 'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ', 'ಸದುವಿನಯವೇ ಸದಾಶಿವನ ಒಲುಮೆ' ಅಪ್ಪ ಬಸವಗುರುವಿನ ವಾಣಿ ನಿತ್ಯ ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆ. ಯಾರೇ ಹೋದರೂ ಪ್ರೀತಿ ಅಂತಃಕರಣದಿಂದ ಮಾತನಾಡುತ್ತಾರೆ. ಮಾತು ಕಡಿಮೆ ಕಾರ್ಯ ಹೆಚ್ಚು ಮಾಡುತ್ತಾರೆ. ಸದ್ದುಗದ್ದಲವಿಲ್ಲದ ಸೇವೆ ಮಾಡುತ್ತಾರೆ. ಪ್ರಚಾರ ಪ್ರಿಯರಲ್ಲ. ಆಡಂಬರ ಹಿಡಿಸುವುದಿಲ್ಲ. ಪದವಿ ಪುರಸ್ಕಾರಕ್ಕಾಗಿ ಹಪಾಹಪಿ ಪಟ್ಟವರಲ್ಲ. ಸರಳತೆ, ಸಹಜತೆ, ಪ್ರಾಮಾಣಿಕತೆ ಬದುಕಿನುದ್ದಕ್ಕೂ ಪಾಲಿಸಿಕೊಂಡು ಬಂದಿದ್ದಾರೆ. ತಮ್ಮದೇ ಆದ ವ್ಯಕ್ತಿತ್ವಗಳಿಸಿಕೊಂಡಿದ್ದಾರೆ. ರಾಜಕೀಯದಲ್ಲಿದ್ದರೂ ಇಲ್ಲದಂತೆ ಇದ್ದಾರೆ. ಆದರೆ ಅವರ ಅಂತರಂಗದಲ್ಲಿ ತುಂಬಾ ಶಿಕ್ಷಣದ ಪ್ರಗತಿ, ಜಿಲ್ಲೆಯ ಅಭಿವೃದ್ಧಿ ತುಂಬಿಕೊಂಡಿದ್ದಾರೆ. ಜನಸೇವೆಯೇ ದೇವಸೇವೆ ಎಂಬ ತತ್ವ ಆಚರಣೆಯಲ್ಲಿ ಕಾಣುತ್ತೇವೆ.

ಕನ್ನಡ ಸಾಹಿತ್ಯ ಪರಿಷತ್ತು ಅವರ ಬಗ್ಗೆ ಒಂದು ಗ್ರಂಥ ಪ್ರಕಟಿಸುತ್ತಿರುವುದು ಸಂತಸದ ವಿಷಯ. ನಮ್ಮಲ್ಲಿ ಅದೆಷ್ಟೋ ಕಾರ್ಯ ಮಾಡಿದ್ದರೂ ದಾಖಲೆ ಇಲ್ಲದ ಸಲುವಾಗಿ ಕಾಲನಗರ್ಭದಲ್ಲಿ ಮಾಯವಾಗುವುದೇ ಹೆಚ್ಚು. ಇದ್ದಾಗಲೇ ಅವರ ಸೇವೆ ಗುರುತಿಸಿ ಗ್ರಂಥ

ರೂಪದಲ್ಲಿ ತರುವುದು ಅಪರೂಪದ ಕಾರ್ಯ. ಅದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಅಭಿನಂದನೆ.

ಶ್ರೀ ಬಸವರಾಜ ಪಾಟೀಲ ಅಷ್ಟೂರ ಇನ್ನೂ ಹೆಚ್ಚು ಹೆಚ್ಚು ಕಾರ್ಯ ಮಾಡಲಿ. ಅವರಿಗೆ ಆಯುಷ್ಯ ಆರೋಗ್ಯ ಬಸವತಂದೆಯುವರು ಕರುಣಿಸಲೆಂದು ಹೃದಯಪೂರ್ವಕ ಹಾರೈಸುತ್ತೇವೆ.

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು
ಹಿರೇಮಠ ಸಂಸ್ಥಾನ,
ಭಾಲ್ಕಿ ಜಿ:ಬೀದರ

ಸಜ್ಜನ ರಾಜಕಾರಣಿ :

ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ ಅವರು ಅಪರೂಪದ ಸಜ್ಜನ ರಾಜಕಾರಣಿ. ದಕ್ಷತೆ ಪ್ರಾಮಾಣಿಕತೆಗೆ ಹೆಸರಾದವರು. ಅವರು ನನಗೆ ತೀರಾ ಆಪ್ತರು. ರಾಜಕಾರಣದಲ್ಲಿದ್ದರೂ ರಾಜಿ ಮಾಡಿಕೊಳ್ಳದ ನಿಸ್ಪ್ರಹ ಹೃದಯವಂತರಾದ ಕಾರಣ ದ್ವೇಷ ರಾಜಕಾರಣ ಮಾಡದವರು. ಅವರೊಬ್ಬ ಮಹಾ ಮುತ್ಸದ್ದಿ. ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸುವ ಮೂಲಕ ಜನಹಿತ ಕಾರ್ಯ ಮಾಡುತ್ತಿದ್ದಾರೆ. ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅವರ ಬಗ್ಗೆ ಪುಸ್ತಕ ಹೊರತರುತ್ತಿರುವುದು ಅಭಿಮಾನದ ಸಂತಸದ ಸಂಗತಿ. ಕೆಲಸ ಮಾಡಿದವರನ್ನು ಸಮಾಜ ಮರೆಯಲಾರದು ಎಂಬುದಕ್ಕೆ ಈ ಕೃತಿ ನಿದರ್ಶನವಾಗಲಿ. ಅವರಿಂದ ಸಮಾಜಕ್ಕೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸೇವೆ ಸಲ್ಲಲೆಂದು ಶುಭ ಹಾರೈಸುವೆ.

ಜಗದೀಶ ಶೆಟ್ಟರ
ಮಾಜಿ ಮುಖ್ಯಮಂತ್ರಿಗಳು

ಅದಮ್ಯ ಶಿಕ್ಷಣ ಪ್ರೇಮಿ :

ಅದಮ್ಯ ಶಿಕ್ಷಣ ಎಂದರೆ ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ. ಅಹಂನಿರಸನದ ಔದಾರ್ಯ ಗುಣ, ಹೃದಯ ಶ್ರೀಮಂತಿಕೆ ಅವರ ಬದುಕಿನ ಆಸ್ತಿಗಳು. ದಕ್ಷತೆ, ಪ್ರಾಮಾಣಿಕತೆ ಮೈವೆತ್ತಿದಂತೆ ಅವರ ವ್ಯಕ್ತಿತ್ವ. ಮಿತ ಮೃದು ಭಾಷೆಯಾದ ಅವರು ಕ್ರೀಯಾಶೀಲತೆಗೆ ಹೇಳಿ ಮಾಡಿಸಿದಂತಿರುವರು. ಅವರ ನೇತೃತ್ವದಲ್ಲಿ ಬೀದರ ಶಿಕ್ಷಣ ರಂಗ ಏಳಿಗೆಯ ಹಾದಿಯಲ್ಲಿದೆ. ಬೀದರ ಅಭಿವೃದ್ಧಿ ಚಿಂತಕರಲ್ಲಿ ಒಬ್ಬರಾದ ಪಾಟೀಲರು ಹೊಸತನ್ನು ಆಲೋಚಿಸುವ ಮತ್ತು ಅದನ್ನು ಕಾರ್ಯರೂಪಕ್ಕೆ ತರುವ ಜಾಯಮಾನ ಅವರದ್ದು. ಅವರಿಂದ ಶಿಕ್ಷಣ ರಂಗ ಇನ್ನಷ್ಟು ಹೆಚ್ಚಿನ ಪ್ರಗತಿಯನ್ನು ಸಾಧಿಸಲೆಂದು ಶುಭಕೋರುವೆ.

ಪಂಚಾಕ್ಷರಿ ಪುಣ್ಯಶೆಟ್ಟಿ,

ಹಿರಿಯ ಸಾಹಿತಿಗಳು, ಬೀದರ

ಜಾತ್ಯತೀತ ನಿಲುವು :

ಶಿಕ್ಷಣ ಪ್ರೇಮಿಗಳಾದ ಡಾ. ಬಸವರಾಜ ಜಿ. ಪಾಟೀಲ ಅವರು, ಶ್ರೀಮಂತ ಮನೆತನದಲ್ಲಿ ಹುಟ್ಟಿ ಬೆಳೆದು, ಎಂ.ಎಸ್ ಪದವಿ ಮುಗಿಸಿದರೂ ಅಹಂಕಾರ ಅವರ ಸಮೀಪ ಕೂಡ ಸುಳಿಯುವುದಿಲ್ಲ. ಜಾತ್ಯತೀತ ನಿಲುವಿಗೆ ಬದ್ಧರಾದ ಅವರು ಸ್ವಜನ ಪಕ್ಷಪಾತದ ರಾಜಕೀಯ ಮಾಡದೆ, ಮೇಲುಕೀಳೆಂದು ನೋಡದೆ, ಬಸವಾದಿ ಶರಣರ ನಾಡಿಗೆ ತಕ್ಕ ಗುಣಗಳನ್ನು ಮೈಗೂಡಿಸಿಕೊಂಡು ಈ ಭಾಗದ ಹೆಮ್ಮೆಯ ಪುತ್ರರಾಗಿದ್ದು ನಿಜಕ್ಕೂ ಹೆಮ್ಮೆಯ ವಿಷಯ.

ನಾನು ವ್ಯಾಸಂಗ ಮಾಡಿದ್ದು ಬಹು ಮುಖ್ಯವಾಗಿ ನನ್ನನ್ನು ರೂಪಿಸಿದ್ದು ಹೈದರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಬೀದರನ ಬಿ.ವಿ.ಭೂಮರೆಡ್ಡಿ ಕಾಲೇಜು. ಡಾ. ಬಸವರಾಜ ಜಿ. ಪಾಟೀಲರವರು ಹೈದರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಗೆ ಅನೇಕ ಸಲ ಆಡಳಿತ ಮಂಡಳಿಯ ಸದಸ್ಯರಾಗಿ ಆಯ್ಕೆಯಾದ

ಮೇಲೆ ಬಿ.ವಿ.ಭೂಮರೆಡ್ಡಿ ಕಾಲೇಜನ್ನು ತುಂಬಾ ಅಭಿವೃದ್ಧಿಗೊಳಿಸಿದ್ದಾರೆ. ಬದಲಾದ ಕಾಲಗತಿಗೆ ತಕ್ಕಂತೆ ಈ ಕಾಲೇಜನ್ನು ಆಧುನೀಕರಣ ಗೊಳಿಸಿ ಶಿಕ್ಷಣದ ಗುಣಮಟ್ಟ ಹೆಚ್ಚಿಸಿದ್ದು ಅವರ ಕ್ರಿಯಾಶೀಲತೆಗೆ ಸಾಕ್ಷಿಯಾಗಿದೆ.

ಕಲ್ಯಾಣ ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ತನ್ನದೆ ಆದ ಛಾಪನ್ನು ಮೂಡಿಸಿರುವ ಇವರು ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿಯೂ ಸುಮಾರು ವರುಷಗಳಿಂದ ಸೇವೆ ಸಲ್ಲಿಸುತ್ತಿರುವ ಅವರು ಹಲವಾರು ವಿಧಾಯಕ ಕಾರ್ಯಗಳನ್ನು ಮಾಡಿದ್ದಾರೆ. ಆ ಕಾರಣಕ್ಕಾಗಿಯೇ ಕರಾಶಿ ಸಂಸ್ಥೆ ಅನೇಕ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಜಗತ್ತಿಗೆ ನೀಡಿದೆ. ಈ ಭಾಗದಲ್ಲಿಯೇ ಅತ್ಯುತ್ತಮ ಒಳಾಂಗಣ ಕ್ರಿಡಾಂಗಣ ಕಟ್ಟಿಸಿದ್ದು ಅದಕ್ಕೆ ಸಂಸದರ ಅನುದಾನದಲ್ಲಿ ಒಂದಿಷ್ಟು ಸಹಾಯ ಮಾಡಲು ಸಾಧ್ಯವಾಗಿದ್ದು ಸಹ ನನ್ನ ಸುದೈವ.

ಕರಾಶಿ ಸಂಸ್ಥೆಯಲ್ಲಿ ಓದಿದ ವಿದ್ಯಾರ್ಥಿಗಳು ಇಂದು ದೇಶದಾದ್ಯಂತ ಒಳ್ಳೆಯ ಹೆಸರು ಕಿರ್ತಿ ಗಳಿಸಿದ್ದಾರೆ ಎಂದರೆ ಅದು ಹೆಮ್ಮೆಯ ಸಂಗತಿ. ಡಾ. ಬಸವರಾಜ ಜಿ. ಪಾಟೀಲ್, ರವರು ಶಿಕ್ಷಣ ಪ್ರೇಮಿಯ ಜೊತೆಗೆ ನಾಡು, ನುಡಿ, ದೇಶ, ಸಂಸ್ಕೃತಿ, ಸಂರಕ್ಷಣೆಯ ವಿಷಯ ಬಂದಾಗ ಎಲ್ಲರೊಂದಿಗೆ ಅವರು ಕೈಜೊಡಿಸಿ ಇವುಗಳ ಸಂರಕ್ಷಣೆಗೆ ನಿಲ್ಲುವುದು, ಅವುಗಳನ್ನು ಉಳಿಸಿ ಬೆಳೆಸುವುದರಲ್ಲಿ ಇವರ ಪಾತ್ರವು ಬಹುಮುಖ್ಯವಾಗಿರುತ್ತದೆ.

ಅನೇಕ ಬಡಮಕ್ಕಳಿಗೆ ಉಚಿತ ಶಿಕ್ಷಣ ನೀಡಿ ಹೃದಯ ಶ್ರೀಮಂತಿಕೆ ತೋರಿದವರಾಗಿದ್ದಾರೆ. ೪ ದಶಕಗಳ ಕಾಲ ಶಿಕ್ಷಣ ಕ್ಷೇತ್ರದಲ್ಲಿ ಇವರ ನೇತೃತ್ವದಲ್ಲಿ ಶಿಕ್ಷಣ ಸಂಸ್ಥೆಯು ನಡೆಸಿಕೊಂಡು ಬಂದಿರುವುದು ಸಾಮಾನ್ಯದ ಮಾತಲ್ಲಾ, ಇವರಲ್ಲಿ ತಾಳ್ಮೆ, ಜಾಣ್ಮೆ, ಹೃದಯ ಶ್ರೀಮಂತಿಕೆ ಇವೆಲ್ಲವುಗಳು ಇವರ ಯಶಸ್ಸಿನ ಸಾಧನಗಳಾಗಿವೆ ಎಂದರೆ ಅತಿಶಯೊಕ್ತಿಯಾಗಲಾರದು ಎಂಬುದು ನನ್ನ ಅಭಿಪ್ರಾಯ.

ಡಾ.ಬಸವರಾಜ ಜಿ. ಪಾಟೀಲರವರಿಗೆ ದೇವರು ಮುಂದಿನ ದಿನಗಳಲ್ಲಿಯೂ ಇನ್ನಷ್ಟು ಹೆಚ್ಚಿನ ಯಶಸ್ಸು ನೀಡಿ, ಅವರಿಂದ ನಮ್ಮ ನಾಡಿಗೆ ವಿಶೇಷವಾಗಿ ಕಲ್ಯಾಣ ಕರ್ನಾಟಕದ ಶಿಕ್ಷಣ ಕ್ಷೇತ್ರ ಇನ್ನಷ್ಟು ಅಭಿವೃದ್ಧಿಗೊಳ್ಳಲಿ ಎಂದು ಹರಸುತ್ತೇನೆ.

ಭಗವಂತ ಖೂಬಾ
ಕೇಂದ್ರ ನವೀಕರಿಸಬಹುದಾದ ಇಂಧನ ಮೂಲ
ಹಾಗೂ ರಾಸಾಯನಿಕ ಮತ್ತು ರಸಗೊಬ್ಬರ ರಾಜ್ಯಸಚಿವರು
ಭಾರತ ಸರಕಾರ

ಹೃದಯ ಶ್ರೀಮಂತಿಕೆ :

ಬೀದರ ಜಿಲ್ಲೆಯ ಹೆಸರಾಂತ ಶಿಕ್ಷಣ ತಜ್ಞರಾದ ಡಾ. ಬಸವರಾಜ ಜಿ. ಪಾಟೀಲರು ನಿಷ್ಠಾವಂತರು ಮತ್ತು ತಮ್ಮ ಕರ್ತವ್ಯ ಪ್ರಜ್ಞೆಗೆ ಹೆಸರಾದವರು. ಅವರ ದಕ್ಷತೆ, ಪ್ರಾಮಾಣಿಕತೆ ಮತ್ತು ಬಡಜನರ ಬಗ್ಗೆ ಅವರುಳ್ಳ ಒಲವಿನಿಂದಾಗಿ ಅವರ ಹೃದಯಶ್ರೀಮಂತಿಕೆ ಅರಿವು ಸರ್ವವೇದ್ಯ.

ಬಾಲ್ಯದಿಂದಲೇ ಅವರಿಗೆ ಶಿಕ್ಷಣದ ಬಗ್ಗೆ ಅಪಾರ ಒಲವಿದ್ದ ಕಾರಣ ಎಂ.ಎಸ್ ಪದವಿಯನ್ನು ಪೂರೈಸಿದರು. ಮನಸ್ಸು ಮಾಡಿದ್ದರೆ ಲಾಭದಾಯಕ ವೃತ್ತಿಯಾದ ವೈದ್ಯ ವೃತ್ತಿಯನ್ನು ಮುಂದುವರಿಸಬಹುದಿತ್ತು. ಆದರೆ ಲಾಭಮೂಲದ ವೈದ್ಯಕೀಯ ವೃತ್ತಿಯತ್ತ ಹೆಚ್ಚು ಗಮನ ಕೊಡದೇ ಸಮಾಜ ಸೇವೆಗೆ ನಿಂತಿರುವುದು ಸಂತೋಷದ ವಿಷಯ.

ರಾಜಕೀಯದ ಒಲವಿದ್ದರೂ ರಾಜಕೀಯ ಮಾಡದೇ, ಎಲ್ಲರನ್ನೂ ಒಳಗೊಳ್ಳುವ ಯಾರನ್ನೂ ಮೇಲು ಕೀಳೆಂದು ನೋಡದೆ, ಬಸವಾದಿ ಶರಣರ ತತ್ವಗಳಂತೆ ಗುಣಗಳನ್ನು ಮೈಗೂಡಿಸಿಕೊಂಡು ಈ ಭಾಗದ ಹೆಮ್ಮೆಯ ಪುತ್ರರಾಗಿದ್ದು ಸದಾ ಸಮಾಜ ಸೇವೆಗೆ ನಿಂತಿರುವುದು ನಿಜಕ್ಕೂ ಹೆಮ್ಮೆಯ ವಿಷಯ.

ಬೀದರ ಜಿಲ್ಲೆಯಲ್ಲಿ ಶೈಕ್ಷಣಿಕ ಹೆದ್ದಾರಿಗಳನ್ನು ನಿರ್ಮಿಸಿಕೊಟ್ಟಿರುವ ಹೆಚ್.ಕೆ.ಇ. ಸಂಸ್ಥೆಯ ಬಿ.ವಿ.ಭೂಮರೆಡ್ಡಿ ಕಾಲೇಜು. ಈ ಸಂಸ್ಥೆಗೆ ಡಾ. ಬಸವರಾಜ ಜಿ. ಪಾಟೀಲ ಅವರು ಆಡಳಿತ ಮಂಡಳಿಯ ಸದಸ್ಯರಾಗಿ ಅನೇಕ ಸಲ ಆಯ್ಕೆಯಾಗುವ ಮೂಲಕ ಬಿ.ವಿ.ಭೂಮರೆಡ್ಡಿ ಕಾಲೇಜನ್ನು ತುಂಬಾ ಅಭಿವೃದ್ಧಿಗೊಳಿಸಿದ್ದಾರೆ. ಇಲ್ಲಿ ಓದಿರುವ ಅನೇಕ ವಿದ್ಯಾರ್ಥಿಗಳು ತಮ್ಮ ತಮ್ಮ ಬದುಕನ್ನು ರೂಪಿಸಿಕೊಂಡು ಜೀವನ ನಿರ್ವಹಿಸುತ್ತಿದ್ದಾರೆ. ಈ ಕಾಲೇಜನ್ನು ಕಾಲಕಾಲಕ್ಕೆ ಅಭಿವೃದ್ಧಿಗೊಳಿಸಿ, ಆಧುನಿಕ ತಂತ್ರಜ್ಞಾನವನ್ನೊಳಗೊಂಡಂತೆ ಶಿಕ್ಷಣದ ಗುಣಮಟ್ಟ ಬದಲಾವಣೆಗೂ ಕಾರಣೀಭೂತರಾಗಿದ್ದಾರೆ.

ಅದರ ಜೊತೆ ಜೊತೆಗೆ ಕೆ.ಆರ್.ಇ. ಸಂಸ್ಥೆಯ ಅಧ್ಯಕ್ಷರಾಗಿಯೂ ಅನೇಕ ವರುಷಗಳಿಂದ ಸೇವೆ ಸಲ್ಲಿಸುತ್ತಿರುವ ಅವರು ಅಲ್ಲಿಯೂ ಕೂಡ ಮಹತ್ತರ ಬದಲಾವಣೆಗಳ ಮೂಲಕ ಅತ್ಯುತ್ತಮ ಕೆಲಸ ಕಾರ್ಯಗಳನ್ನು ನಿರ್ವಹಿಸಿ ಸದಾ ಸೈ ಎನಿಸಿಕೊಂಡಿದ್ದಾರೆ. ಶೈಕ್ಷಣಿಕವಾಗಿ ಈ ಭಾಗದ ಉನ್ನತಿಗೆ ಸದಾ ಕ್ರಿಯಾಶೀಲ ಮನಸ್ಥಿತಿಯೊಂದಿಗೆ ಕೆಲಸ ಮಾಡುವ ಶ್ರೀ ಬಸವರಾಜ ಜಿ. ಪಾಟೀಲರ ಕರ್ತೃತ್ವ ಶಕ್ತಿಯಿಂದಾಗಿ ಈ ಸಂಸ್ಥೆಯೂ ಅನೇಕ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ನಾಡಿಗೆ ನೀಡಿದೆ ಎನ್ನುವುದು ಸಂತೋಷದ ಸಂಗತಿಯೇ ಸರಿ. ಕ.ರಾ.ಶಿ. ಸಂಸ್ಥೆಗೆ ಸೇರಿದ ಕರ್ನಾಟಕ ಫಾರ್ಮಸಿ ಕಾಲೇಜಿನ ಆವರಣದಲ್ಲಿ ಉತ್ತಮ ಒಳಾಂಗಣ ಕ್ರೀಡಾಂಗಣ ಕಟ್ಟಿಸಿದ್ದಾರೆ.

ಡಾ. ಬಸವರಾಜ ಜಿ. ಪಾಟೀಲ್, ರವರು ತಮ್ಮ ಶೈಕ್ಷಣಿಕ ಸೇವೆಯ ಜೊತೆ ಜೊತೆಗೆ ನಾಡು, ನುಡಿ, ನೆಲ, ಜಲ, ಸಾಹಿತ್ಯ, ಸಂಸ್ಕೃತಿಯ ಬಲವರ್ಧನೆಗೂ ಸದಾ ಕಾಲ ಕೈಜೋಡಿಸುತ್ತಾರೆ. ಅನೇಕ ಬಡಮಕ್ಕಳಿಗೆ ಉಚಿತ ಶಿಕ್ಷಣವನ್ನೂ ನೀಡಿರುವುದಲ್ಲದೆ ಅವರ ಬದುಕು ರೂಪಿಸುವ ಮತ್ತು ಅವಶ್ಯಕತೆ ಇರುವಲ್ಲಿ ದಾನ ಧರ್ಮಾದಿಗಳನ್ನು ಕೊಡಮಾಡಿದ

ಪಾಟೀಲರದ್ದು ನಿಜಕ್ಕೂ ಕೊಂಡಾಡಬಹುದಾದ ಕಾರ್ಯಗಳಿವೆ. ಅವರಲ್ಲಿರುವ ಸರಳ ಮತ್ತು ಸಹಜ ಜೀವನ, ಮತ್ತು ಹೃದಯ ಶ್ರೀಮಂತಿಕೆಯೇ ಅವರನ್ನು ಈ ಎತ್ತರಕ್ಕೆ ತಂದು ನಿಲ್ಲಿಸಿವೆ ಎಂದರೆ ತಪ್ಪಾಗಲಿಕ್ಕಿಲ್ಲ.

ಡಾ.ಬಸವರಾಜ ಜಿ. ಪಾಟೀಲರವರ ಶೈಕ್ಷಣಿಕ ಮತ್ತು ಸಮಾಜ ಸೇವೆ ಹೀಗೆಯೇ ಮುಂದುವರೆಯಲಿ, ಅವರಿಂದಾಗಿ ಕಲ್ಯಾಣ ಕರ್ನಾಟಕದಲ್ಲಿನ ಶೈಕ್ಷಣಿಕ ಅಭಿವೃದ್ಧಿಗೆ ಇನ್ನಷ್ಟು ವೇಗ ಸಿಗಲಿ ಎಂದು ಹಾರೈಸುತ್ತೇನೆ.

ಪ್ರಭು ಬಿ. ಚವ್ಹಾಣ
ಪಶು ಸಂಗೋಪನೆ, ವಕ್ಫ್, ಹಜ್ ಮತ್ತು
ಬೀದರ ಜಿಲ್ಲಾ ಉಸ್ತುವಾರಿ ಸಚಿವರು.

ಕಾಯಕ ನಿಷ್ಠತೆ

ಆದರ್ಶ, ಸರಳ ಸಜ್ಜನಿಕೆಗೆ ಹೆಸರಾದ ಡಾ. ಬಸವರಾಜ ಜಿ.ಪಾಟೀಲ ಅಷ್ಟೂರ ಅವರದ್ದು ಅಪರೂಪದ ವ್ಯಕ್ತಿತ್ವ, ನನಗೆ ತೀರಾ ಆಪ್ತರು. ರಾಜಕಾರಣದಲ್ಲಿದ್ದರೂ ರಾಜಕೀಯ ಮಾಡದ ಶುದ್ಧ ಹಸ್ತದ ಮಹಾಮುತ್ಸದ್ದಿಗಳವರು. ಬಸವಾದಿ ಶರಣರ ಜಾತ್ಯತೀತ ನಿಲುವು, ದಾಸೋಹ ಜೀವನ, ಕಾಯಕ ನಿಷ್ಠತೆ, ಪ್ರಾಮಾಣಿಕತೆಗಳೆ ಜೀವನ ಮೌಲ್ಯವೆಂದು ನಂಬಿ ನಿಜಾಚರಣೆಯಲ್ಲಿ ತಂದವರು. ಶಿಕ್ಷಣದಲ್ಲಿ ಬದಲಾವಣೆ ಆಗಬೇಕು, ಬಡವರಿಗೆ, ದೀನ-ದಲಿತರಿಗೆ, ಮಹಿಳೆಯರಿಗೆ ಹೀಗೆ ಎಲ್ಲ ವರ್ಗದವರಿಗೂ ಗುಣಾತ್ಮಕ ಶಿಕ್ಷಣ ಸಿಗಬೇಕೆಂಬ ಸದಾಶಯದಿಂದ ನಾಲ್ಕು ದಶಕಗಳ ಅವರ ಸಾಮಾಜಿಕ, ಶೈಕ್ಷಣಿಕ ಸೇವೆ ಅನುಪಮವಾದದ್ದು. ಬೀದರನಲ್ಲಿ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಹಾಗೂ ಬಿ.ವಿ. ಭೂಮರೆಡ್ಡಿ ಕಾಲೇಜಿನ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಇವರದ್ದು ಸಿಂಹ ಪಾಲು. ಪಾಟೀಲವರ ೪೦ ವರ್ಷಗಳ ಪ್ರಗತಿಯ ಸಾಧನೆ ಸಾಮಾನ್ಯ ಸಂಗತಿಯಲ್ಲ.

ಅಂತೆಯೆ ಶೈಕ್ಷಣಿಕ, ಸಾಂಸ್ಕೃತಿಕ ಚಿಂತಕರಾದ ಡಾ. ಬಸವರಾಜ ಜಿ.ಪಾಟೀಲ ಅಷ್ಟೂರ ಅವರ ಜೀವನ ಸಾಧನೆ ಕುರಿತು ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಾಂಸ್ಕೃತಿಕ ಚಿಂತಕರ ಮಾಲಿಕೆಯಲ್ಲಿ ಪುಸ್ತಕ ತರಲು ಮುಂದಾಗಿದ್ದು ಅಭಿನಂದನಾರ್ಹ ಸಂಗತಿ. ಇದೊಂದು ಅಕ್ಷರ ರೂಪದ ಸಾಂಸ್ಕೃತಿಕ ದಾಖಲೆ. ಯಾವತ್ತು ಹೊಸತನ್ನು ಆಲೋಚಿಸುವ ಮತ್ತು ಅದನ್ನು ಕಾರ್ಯರೂಪಕ್ಕೆ ತರುವ ಪಾಟೀಲರು ಹಲವಾರು ವಿಧಾಯಕ ಕಾರ್ಯ ಮಾಡುತ್ತಿದ್ದಾರೆ. ಈ ಕೃತಿಯ ಮೂಲಕ ಅವರ ಜೀವನ ಸಾಧನೆ ಇತರರಿಗೂ ಸತ್ಪ್ರೇರಣೆಯಾಗಲಿ. ಅವರಿಂದ ಇನ್ನಷ್ಟು ಈ ಭಾಗದ ಶೈಕ್ಷಣಿಕ ಅಭಿವೃದ್ಧಿಯಾಗಲಿ. ಅವರ ಬದುಕು ಹಸನಾಗಿ ಎಲ್ಲಾ ಯಶಸ್ಸು ದೊರೆಯಲೆಂದು ಶುಭ ಹಾರೈಸುವೆ.

ಈಶ್ವರ ಬಿ. ಖಂಡ್ರೆ

ಕಾರ್ಯಾಧ್ಯಕ್ಷರು, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಬೆಂಗಳೂರು,

ಶಾಸಕರು, ಭಾಲ್ಕಿ

Motivational Leader :

I am very pleased to be speaking about Dr Basavaraj G Patil, the inspirational force behind many people. He has made lot of contribution for the development of HKE society and KRE Society. Under his president ship many new educational institutional under KRE society have been started and many old colleges have upgraded for PG courses.

His leadership has taken both the societies to the new heights with this innovative approach for the education like value based education. He has raised the standard of education and competitive spirit among the students of Hyderabad Karnataka region through modern learning techniques and ensuring their participation in co-curricular, ex-

tra-curricular and extension activities he also inculcated research culture among the staff and students. His helping and kind attitude has made him the motivational leader for the young students and the employees of both the societies. He is the best Administrator and has proved best by successfully running all the institutions under KRE and HKE society.

His commitment and continues hard work has motivated entire society to work punctual with dedication which will outshine the Hyderabad Karnataka region.

I value him as the perfect motivational leader and a good administrator and a true leader for the better future of this part of Karnataka.

Dr. Chandrakant Gudage
Chairman
Gudage Hospital, Bidar

ಮಹಾಮುತ್ಸದ್ದಿ :

ಡಾ, ಬಸವರಾಜ ಪಾಟೀಲರು ಮತ್ತು ನಾನು ಜೀವದ ಗೆಳೆಯರು. ನಮ್ಮ ತಂದೆ ಹಾಗೂ ಅವರ ತಂದೆಯವರ ಒಡನಾಟವೂ ಇದ್ದ ಕಾರಣ ನಾವು ಕುಟುಂಬ ಸ್ನೇಹಿತರು. ನಮ್ಮ ಪ್ರಾಥಮಿಕ ಶಾಲಾ ಶಿಕ್ಷಣದಿಂದಲೆ ಒಂದೆ ಶಾಲೆಯಲ್ಲಿ ಜೊತೆಯಾಗಿ ಓದಿದವರು. ಮುಂದೆ ನಾನು ಉದ್ಯಮದತ್ತ ಬಂದರೆ ಅವರು ಶೈಕ್ಷಣಿಕ ಕ್ಷೇತ್ರಕ್ಕೆ ಬಂದರು. ತುಂಬಾ ಆತ್ಮಿಯತೆಯ ಸ್ವಭಾವ, ಸಹಕಾರ ಮನೋಭಾವ, ಸಹಭಾಗಿತ್ವದ ಗುಣ ಅವರ ಬದುಕಿನ ಅಂತಃಶಕ್ತಿ. ಸಮಾಜದ ಕಟ್ಟಕಡೆಯ ವ್ಯಕ್ತಿ ಸಹಾಯ ಯಾಚಿಸಿದರೂ ನೆರವಾಗುತ್ತಾರೆ. ಅಬಾಲ ವೃದ್ಧರವರೆಗೆ ಯಾವುದೇ ಭೇದಭಾವ ಮಾಡದೆ, ಮೇಲು ಕೀಳಿಲ್ಲದ ಸಮದೃಷ್ಟಿಯಿಂದ ನೋಡುವರು. ಎಲ್ಲರೊಂದಿಗೆ ಬೆರೆವ ಉದಾರ ಹೃದಯ ವೈಶಾಲ್ಯತೆ ಅವರಿಗಿದೆ. ಪಾಟೀಲ ಪರಿವಾರ ಅಂದರೆ

ಗೌಡರ ಮನೆತನದಿಂದ ಬಂದವರಾದರೂ ಅವರೆಂದೂ ಸಿಟ್ಟು ಮಾಡಿದ್ದು ನಾನು ನೋಡಿಲ್ಲ. ಶಾಂತ ಸ್ವಭಾವ. ದೃಢ ಸಂಕಲ್ಪ, ಹಿಡಿದುದನ್ನು ಮಾಡುವ ಛಲದ ಹಟವಂತಿಕೆ ಅವರಲ್ಲಿ ಎದ್ದು ಕಾಣುತ್ತದೆ. ಸದಾ ಜನಹಿತದ ಬಗ್ಗೆ ಆಲೋಚಿಸುವರೊಬ್ಬ ಮಹಾಮುತ್ಸದ್ದಿಯಾಗಿ ಕಾಣುತ್ತಾರೆ.

ಡಿ.ವಿ.ಸಿಂದೋಲ

ಉದ್ಯಮಿಗಳು ಹಾಗೂ

ಆಡಳಿತ ಮಂಡಳಿ ಸದಸ್ಯರು, ಕರಾಶಿ ಸಂಸ್ಥೆ, ಬೀದರ

ಪಾರದರ್ಶಕ ವ್ಯಕ್ತಿತ್ವ:

ಸರಳ, ಸೌಮ್ಯ, ನೇರ, ನಿಷ್ಠುರ ಗುಣಗಳನ್ನು ರೂಢಿಸಿಕೊಂಡ **ಡಾ. ಬಸವರಾಜ ಪಾಟೀಲ ಅಷ್ಟೂರ** ನಾಡು ಕಂಡ ಅಪರೂಪದ ವ್ಯಕ್ತಿತ್ವ. ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಮತ್ತು ಆಡಳಿತಾತ್ಮಕ ಕ್ಷೇತ್ರಗಳಲ್ಲಿ ದಣಿವರಿಯದ ದುಡಿಮೆಗೆ ಮಾದರಿಯಾಗಿ ಬೆಳೆದಿದ್ದಾರೆ. ಎಲ್ಲಿಯೂ ತಮ್ಮ ವ್ಯಕ್ತಿತ್ವಕ್ಕೆ ಕಪ್ಪು ಚುಕ್ಕೆ ತರದ ರೀತಿಯಲ್ಲಿ ತನು-ಮನ-ಧನಗಳಲ್ಲಿ ಪರಿಶುದ್ಧತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಅದಕ್ಕಾಗಿಯೇ ಶ್ರೀಯುತರ ಮಾತು ಮತ್ತು ಕೃತಿಯಲ್ಲಿ ಒಂದು ಅಸಾಧಾರಣ ನೈತಿಕ ಗತ್ತು ಮತ್ತು ಮೌಲಿಕ ಶಕ್ತಿ ಹುದುಗಿರುವುದು ಅವರ ಸಮೀಪದ ವಲಯದಲ್ಲಿ ಇರುವವರೆಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ.

ಈ ಭಾಗದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಗಿರುವ ಹೈದ್ರಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿ, ವಿವಿಧ ಶಿಕ್ಷಣ ಸಂಸ್ಥೆಗಳ ಸಂಚಾಲಕರಾಗಿ, ಕಾರ್ಯದರ್ಶಿಯಾಗಿ ಕಳೆದ ಎರಡೂವರೆ ದಶಕಗಳಿಂದ ಅನುಪಮ ಸೇವೆ ಸಲ್ಲಿಸುತ್ತಿದ್ದಾರೆ.

ಡಾ. ಬಸವರಾಜ ಪಾಟೀಲ ಅಷ್ಟೂರವರು ಬೀದರನ ಅನೇಕ

ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ನೂರಾರು ಬಡ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಎಲ್ಲ ಹಂತದಲ್ಲಿ ಸಹಾಯ, ಸಹಕಾರ ಮತ್ತು ಪ್ರೋತ್ಸಾಹ ನೀಡುತ್ತಿರುವ ಅಪರೂಪದ ಶಿಕ್ಷಣ ತಜ್ಞರಾಗಿದ್ದಾರೆ. ಹೀಗಾಗಿಯೇ ಕಳೆದ ಮೂರು ಅವಧಿಗೆ ಇವರು ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ನಿರಂತರವಾಗಿ ಸೇವೆ ಸಲ್ಲಿಸುತ್ತ ಬಂದಿದ್ದಾರೆ. ತಮ್ಮ ಶಿಕ್ಷಣ ಸಂಸ್ಥೆಗಷ್ಟೇ ಅಲ್ಲದೇ ಸ್ಥಳೀಯ ಎಲ್ಲ ವಿದ್ಯಾಸಂಸ್ಥೆಗಳಿಗೆ ಸ್ಫೂರ್ತಿಯ ಚಿಲುಮೆಯಾಗಿದ್ದಾರೆ.

ತಾವು ವಿದ್ಯಾಭ್ಯಾಸ ಮಾಡಿದ ಬಿ.ವಿ.ಬಿ. ಕಾಲೇಜಿನ ಆಡಳಿತ ಮಂಡಳಿಯ ಸಂಯೋಜಕರಾಗಿ, ಈ ಮಹಾವಿದ್ಯಾಲಯವು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ನ್ಯಾಕ್ ಸಂಸ್ಥೆಯಿಂದ 'ಎ' ಶ್ರೇಣಿ ಪಡೆಯುವಲ್ಲಿ ಪ್ರಮುಖ ಪ್ರೇರಕ ಶಕ್ತಿಯಾಗಿದ್ದಾರೆ. ಕಠಿಣ ಪರಿಶ್ರಮಶೀಲ ಸ್ವಭಾವ, ಪ್ರಾಮಾಣಿಕ ಮತ್ತು ಪಾರದರ್ಶಕ ವ್ಯಕ್ತಿತ್ವ ಹೊಂದಿರುವ, ಅನುಪಮ ಶಿಕ್ಷಣ ಪ್ರೇಮಿಯಾಗಿರುವ ಇವರು ಶೈಕ್ಷಣಿಕ ರಂಗದಲ್ಲಿ, ಸಮಯ ಪ್ರಜ್ಞೆ, ಕರ್ತವ್ಯನಿಷ್ಠೆ ಮತ್ತು ಸಮರ್ಪಣೆಯಿಂದ ಸೇವೆ ಸಲ್ಲಿಸುತ್ತಿರುವವರಿಗೆಲ್ಲ ಆದರ್ಶ ಪ್ರಾಯರಾಗಿದ್ದಾರೆ ಮತ್ತು ದಿಕ್ಸೂಚಿಯಂತಿದ್ದಾರೆ ಎಂದರೆ ಅತಿಶಯೋಕ್ತಿ ಆಗಲಾರದು.

ಶ್ರೀಯುತರ ಜೀವನದ ವೈಯಕ್ತಿಕ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ಸದಾ ಸುಖ, ಶಾಂತಿ, ಸಂತೃಪ್ತಿ, ಸಮೃದ್ಧಿ ಮತ್ತು ಶ್ರೇಯಸ್ಸು ಲಭಿಸಲಿ ಎಂದು ಪ್ರಾರ್ಥಿಸುವೆ.

ಡಾ. ಎಸ್.ಕೆ. ಸಾತನೂರ
ಪ್ರಾಚಾರ್ಯರು
ಬಿ.ವಿ.ಬಿ ಕಾಲೇಜು, ಬೀದರ

ಸಜ್ಜನ ಶಿಕ್ಷಣ ಪ್ರೇಮಿ

ಆದರಣೀಯ ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ ಅವರು ಒಬ್ಬ ಸಜ್ಜನ ಶಿಕ್ಷಣ ಪ್ರೇಮಿ. ಕಲ್ಯಾಣ ಕರ್ನಾಟಕದಲ್ಲಿ ಚಿರ ಪರಿಚಿತರು ಸ್ನೇಹ ಜೀವಿ ಇವರ ಪ್ರಾಮಾಣಿಕ ಶಿಕ್ಷಣ ಸೇವೆಯಿಂದ ನಮ್ಮ ಜಿಲ್ಲೆ ಶ್ರೀಮಂತವಾಗಿದೆ.

ಕನ್ನಡ ನಾಡು ನುಡಿಗೆ ಇವರ ಸಹಾಯ ಸದಾ ಸ್ಮರಣೀಯ, ಗಡಿ ಜಿಲ್ಲೆ ಬೀದರ ಮಹಾರಾಷ್ಟ್ರ, ತೆಲಂಗಾಣ ಪ್ರದೇಶಕ್ಕೆ ಹೊಂದಿಕೊಂಡಿದ್ದು ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಬಿ.ವಿ.ಬಿ. ಮಹಾವಿದ್ಯಾಲಯ ಬೀದರ ಜಿಲ್ಲೆಯನ್ನು ರಾಜಕೀಯವಾಗಿ ಧಾರ್ಮಿಕವಾಗಿ, ಸಾಮಾಜಿಕವಾಗಿ ಎಷ್ಟೊ ಜನರನ್ನು ನಾಡಿನ ಸೇವೆಗೆ ನೀಡಿದ ಕಾಲೇಜು. ಇದರ ಆಡಳಿತ ಮಂಡಳಿ ಸದಸ್ಯರಾಗಿ ಸೋಲಿಲ್ಲದ ಸರದಾರ ಡಾ. ಬಸವರಾಜ ಪಾಟೀಲ ಅಷ್ಟೂರ ಅವರು.

ಕೆ.ಆರ್.ಈ. ಶಿಕ್ಷಣ ಸಂಸ್ಥೆ ಅಧ್ಯಕ್ಷರಾಗಿ ತಮ್ಮ ಶೈಕ್ಷಣಿಕ ಕ್ಷೇತ್ರದ ಅನುಭವದಿಂದ ಆಧುನಿಕರಿಸಿ ಅಭಿವೃದ್ಧಿಗೊಳಿಸಿ ಪಾರದರ್ಶಕ ಆಡಳಿತ ನೀಡಿ ಇತಿಹಾಸ ಸೃಷ್ಟಿಸಿದ್ದು, ಡಾ. ಅಷ್ಟೂರ ಅವರು.

ಡಾ. ಬಸವರಾಜ ಪಾಟೀಲ ಅಷ್ಟೂರ ಅವರ ಒಡನಾಟ ನನಗೆ ವಿದ್ಯಾರ್ಥಿ ಜೀವನದಿಂದಲೇ ಬಂತು.

ಬಿ.ವ್ಹಿ.ಬಿ. ಮಾಹಾವಿದ್ಯಾಲಯದಲ್ಲಿ ನಾನು ಡಿಗ್ರಿ ಓದುವಾಗ ಅಂದಿನಿಂದ ಇಂದಿಗೂ ನಮ್ಮ ಒಡನಾಟ, ಆತ್ಮೀಯತೆ ಅವರ ಮಾರ್ಗದರ್ಶನ ಸದಾ ನಮ್ಮ ಮೇಲಿದೆ. ಇವರ ಸಹಕಾರದಿಂದ ನನ್ನ ಎಷ್ಟೋ ಗೆಳೆಯರಿಗೆ ಆಪ್ತರಿಗೆ ಜೀವನೋಪಾಯ ಸಿಕ್ಕಿದೆ. ಎಷ್ಟೋ ಜನರ ಬಾಳಿನ ದೀಪ ಬೆಳಗಾಗಿದ್ದು ಸ್ಮರಿಸಬೇಕು. ನೇರ ನಡೆ ನುಡಿ, ಸತ್ಯಕ್ಕೆ ಇವರು ಕನ್ನಡಿ ಇದ್ದಂತೆ.

ವಚನ ಕ್ರಾಂತಿ ಕನ್ನಡ ದಿನ ಪತ್ರಿಕೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿ ಅವರು ನನ್ನನು ಹಾರೈಸಿದ ಆಶೀರ್ವಾದಿಂದ ನಮ್ಮ ಪತ್ರಿಕೆಗೆ ಅವರ ಇಂದಿಗೂ ಅಧಾರ ಸ್ಥಂಬವಾಗಿ ಹಿರಿಯರಾಗಿ ನಮ್ಮ ಸರ್ವತೋಮುಖ ಅಭಿವೃದ್ಧಿಗೆ ಇವರ ಅರ್ಶಿವಾದವಿದೆ. ೧೭ನೇ ಸಾಹಿತ್ಯ ಸಮ್ಮೇಳನದ ನಿಮಿತ್ಯ ಪ್ರಕಟಸಲಿರುವ ಸಾಹಿತ್ಯ ಮಾಲೆಯಲ್ಲಿ ಡಾ. ಬಸವರಾಜ ಪಾಟೀಲ ಹೆಸರಿನ ಆಯ್ಕೆ ಅರ್ಥಪೂರ್ಣವಾಗಿದೆ. ಎಂದು ಹೇಳಲು ವಚನ ಕ್ರಾಂತಿ ಕನ್ನಡ ಪ್ರಾದೇಶಿಕ ದಿನ ಪತ್ರಿಕೆ ಸಂಪಾದಕರಾಗಿ ಹೇಳಲು ನಾನು ಹರ್ಷಿಸುತ್ತೇನೆ.

ಬಾಬು ವಾಲಿ

ಅಧ್ಯಕ್ಷರು,

ಬೀದರ ನಗರಾಭಿವೃದ್ಧಿ ಪ್ರಾಧಿಕಾರ, ಬೀದರ

ಸಂಪಾದಕರು, ವಚನ ಕ್ರಾಂತಿ

ಜೀವಕಾರುಣ್ಯದ ವ್ಯಕ್ತಿತ್ವ

ಸಹೋದರ ಬಸವರಾಜ ಅವರದ್ದು ವಿಶೇಷವಾದ ವ್ಯಕ್ತಿತ್ವ ಅವರೊಬ್ಬ ಮಹಾನ್ ವೈದ್ಯರಾಗಬೇಕೆಂಬುದು ನಮ್ಮ ತಂದೆಯವರ ಕನಸಾಗಿತ್ತು. ಆದರೆ ಬಾಲ್ಯದಿಂದಲೇ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡ ಕಾರಣ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ವಲಯದತ್ತ ವಾಲಿದರು. ಅವರ ಶೈಕ್ಷಣಿಕ ಸಾಧನೆ ಅಪೂರ್ವ, ಆದರೆ ವಾಸ್ತವವಾಗಿ ಅವರಿಗೆ ಸಿಗಬೇಕಾದ ಸ್ಥಾನ ಸಿಗಲಿಲ್ಲ. "ಚಾಂದಪೆ ಜಾನೆ ಶೋಚೆ ಥೆ ಲೇಕಿನ ಘರಕೆ ಛತ್ ಪರ ಹಿ ರಹಗಯಾ" ಎನ್ನುವಂತೆ ಅವರು ಚಂದ್ರನ ಮೇಲೆ ಹೋಗಬಹುದೆಂಬ ನಿರೀಕ್ಷೆಯಲ್ಲಿದ್ದೇವು ಆದರೆ ಮನೆಯ ಛಾವಣಿಯ ಮೇಲೆ ಮಾತ್ರ ಹೋದಂತಾಗಿದೆ. ರಾಜಕೀಯವಾಗಿ ಅವರಿಗೆ ದೈವ ಬಲವಿಲ್ಲ. ಹಾಗಂತ ಅವರೆಂದೂ ದ್ವೇಷ ರಾಜಕೀಯ ಮಾಡಿದವರಲ್ಲ.

ಕೌಟುಂಬಿಕವಾಗಿ ನಮ್ಮ ಇಡೀ ಪರಿವಾರದಲ್ಲಿ ಅದಮ್ಯ ಕುಟುಂಬ ಪ್ರೀತಿ, ಜೀವ ಕಾರುಣ್ಯದ ವ್ಯಕ್ತಿತ್ವ ಹೊಂದಿದವರು. ಯಾರೆ ಸಂಬಂಧಿಕರಾಗಲಿ, ಬಡವರಾಗಲಿ ಸಹಾಯ ಕೇಳಿ ಬಂದರೆ, ಎಂಥ ಸಂದರ್ಭದಲ್ಲೂ ನೆರವಾಗುವರು. ಇವತ್ತಿಗೂ ನಮ್ಮ ಮನೆ ಬೇರೆಬೇರೆಯಾದರೂ ಮನಸ್ಸು ಮಾತ್ರ ಒಂದೇ. ಹಾಗಾಗಿ ಎಲ್ಲರೂ ಸಂತೋಷವಾಗಿದ್ದೇವೆ. ಯಾವುದೇ ರೀತಿಯ ಸಭೆ ಸಮಾರಂಭಗಳಿದ್ದರೂ ಹಾಜರಾಗಿ, ಪರಿವಾರದ ಜನರಿಗೆ ಸಮಯ ನೀಡಿ ಎಲ್ಲರೊಂದಿಗೆ ಬೆರೆತು ಸಂಭ್ರಮಿಸುತ್ತಾರೆ. ಅವರಿಂದ ಈ ಸಮಾಜಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಸೇವೆ ಸಲ್ಲಲೆಂದು ಶುಭ ಹಾರೈಸುವೆ.

ರಾಜಶೇಖರ ಜಿ. ಪಾಟೀಲ ಅಷ್ಟೂರ್

ಸಹೋದರರು

ಸಮಾಜಕ್ಕೆ ಸಂದೇಶ

ಅನ್ನ ದೇವರ ಮುಂದೆ ಇನ್ನು ದೇವರುಂಟೆ" ಎಂಬ ಸರ್ವಜ್ಞನ ಮಾತಿನಂತೆ ದೇವರಕ್ಕಿಂತ ಶ್ರೇಷ್ಠವಾದದ್ದು ಅನ್ನ (ಆಹಾರ) ಅದಕ್ಕಾಗಿ ಉಣ್ಣುವ ತಟ್ಟೆಯಲ್ಲಿ ಬೇಕಾದಷ್ಟೆ ಬಡಸಿಕೊಂಡು ಉಣ್ಣಬೇಕು. ಹೆಚ್ಚಿಗೆ ಬಡಿಸಿಕೊಂಡು ಶೋಕಿಗಾಗಿ ಉಣ್ಣದೆ ಚೆಲ್ಲಬಾರದು. ಏಕೆಂದರೆ ಒಂದ್ಹೊತ್ತಿನ ಊಟಕ್ಕಾಗಿ ಪರಿತಪ್ಪಿಸುವಂತಃ ಅನೇಕ ಬಡಜನರು ನಮ್ಮ ಭಾರತ ದೇಶದಲ್ಲಿದ್ದಾರೆ. ಆದ್ದರಿಂದ ಹೆಚ್ಚಿಗೆ ಬಡಿಸಿಕೊಂಡು ಹೆಚ್ಚು ಮಾಡಿ ಬೀದಿಗೆ ಚೆಲ್ಲಬಾರದು. ಮತ್ತೆ ನಮಗೆ ಉನ್ನತ ಹುದ್ದೆ ಸಿಕ್ಕರೆ ಅಥವಾ ಯಾವುದೇ ಶುಭಕಾರ್ಯ ಘಟಿಸಿದ್ದರೆ ಗುಡಿಗೆ ಹೋಗಿ (ಟೆಂಗು) ಕಾಯಿ ಕರ್ಪೂರ ಮಾಡದೆ, ಅದೆ ದುಡ್ಡನ್ನು ಬಡವರಿಗಾಗಿ ಮತ್ತು ದೀನ ದುಃಖಿಗಳಿಗೆ 'ಕೊಟ್ಟರೆ ದೇವರಿಗೆ ಸಲ್ಲುತ್ತದೆ' ಎಂದು ಹೇಳುತ್ತಾರೆ. ಮತ್ತು ದೇವರುಗಳಿಗೆ ಹರಕೆ ಹೊರೂವುದು ಬಿಡಬೇಕು. ಏಕೆಂದರೆ "ನನ್ನ ಬಯಕೆ ಈಡೇರಲಿ ನಾನು ನಿನಗೊಂದು ಸೀರೆ ಏರಸ್ತಿನಿ ಎಂದು ಹರೆಕೆ ಹೊತ್ತು ಅಂದುಕೊಂಡುದ್ದು ಕಾಕತಾಳಿಯಂತೆ ಆದರೆ ಭವಾನಿಗೆ ಹೋಗಿ ಸೀರೆ

ಉಡಿಸಿದರೆ ಅಲ್ಲಿನ ಪೂಜಾರಿಗಳು ಭಕ್ತಾದಿಗಳು ಕೊಟ್ಟ ಸೀರೆಗಳು ಮಾರಾಟ ಮಾಡುತ್ತಾರೆ. ಅದಕ್ಕಾಗಿ ಮೌಢ್ಯತೆಯಿಂದ ಮಾಡುವ ಭಕ್ತಿಗಿಂತ ಅರಿವಿನಿಂದ ಅವಶ್ಯವಿರುವ ಬಡ ಜನರಿಗೆ ಸಹಾಯ ಮಾಡಿದ್ದರೆ ಅದುವೆ "ಜನ ಸೇವೆಯೇ ಜನಾರ್ಧನನ ಸೇವೆ" ಎಂದು ಸಮಾಜಕ್ಕೆ ಸಂದೇಶ ನೀಡುತ್ತಾರೆ.

ಯುವ ಜನಾಂಗಕ್ಕೆ ಸಂದೇಶ

"ಇಂದಿನ ಯುವ ಜನತೆಯಲ್ಲಿ ದೇಶ ಪ್ರೇಮ, ಭಕ್ತಿ, ರಾಷ್ಟ್ರ ಗೌರವ ಕಡಿಮೆಯಾಗುತ್ತಿದೆ. ಆದ್ದರಿಂದ ಯುವಕರು ಹೆಚ್ಚಿನ ದೇಶ ಪ್ರೇಮ, ಗೌರವ ಬೆಳೆಸಿಕೊಳ್ಳಬೇಕು. ಮತ್ತು ಎಷ್ಟೇ ಶ್ರೀಮಂತರಿದ್ದರೂ ಶ್ರೀಮಂತಿಕೆ ಕೊನೆಗೆ ಬರುವುದಿಲ್ಲ. ಅರಿವು, ಜ್ಞಾನವೇ ಕೊನೆಗೆ ಬರುವುದು ಅದಕ್ಕಾಗಿ "ನಾಲೇಜ ಇಜ್ ಪಾವರ್ ಜ್ಞಾನವೇ ಶಕ್ತಿ" ಅದಕ್ಕಾಗಿ ಪ್ರತಿಯೊಬ್ಬರು ವಿದ್ಯಾಭ್ಯಾಸ ಮಾಡಬೇಕು. ಆ ದೃಷ್ಟಿಯಿಂದಲೇ ನಾನು ರಾಜಕೀಯ ಕಡೆ ಒಲವು ಇದ್ದರೂ ಕೂಡಾ ಅದನ್ನು ಬಿಟ್ಟು ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡಲಿಕ್ಕೆ ಮುಂದಾದದ್ದು ಎಂದು ಯುವ ಜನಾಂಗಕ್ಕೆ ಸಂದೇಶ ನೀಡಿದರು.

ಪ್ರಶಸ್ತಿ ಮತ್ತು ಗೌರವ ಸನ್ಮಾನ

"ಕಾಯಕದಲ್ಲಿ ನಿರತನಾದರೆ ಲಿಂಗಪೂಜೆಯಾದರು ಮರೆಯಬೇಕು" ಎನ್ನುವ ಶರಣರ ವಾಣಿಯಂತೆ" ಅತ್ಯಂತ ವಿನಯ-ವಿನಮ್ರತೆಗಳೊಂದಿಗೆ, ಕಾಯಕ ನಿಷ್ಠೆ ದಾಸೋಹ ತತ್ವದಲ್ಲಿ ನಂಬಿಕೆ ಇಟ್ಟು ಬದುಕುತ್ತಿರುವ ಡಾ॥ ಪಾಟೀಲರದ್ದು ಮಾತಿಗಿಂತ ಕೃತಿ ಲೇಸಾದ ಬದುಕು. ತಾವು ಮಾಡಿದ್ದು ಯಾರಿಗೂ ಹೇಳಿಕೊಳ್ಳುವುದಿಲ್ಲ. ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ ಏಡಿಸಿಕಾಡಿತು. ಶಿವನ ಡಂಗುರ"ವೆಂಬ ಮಾತಿಗೆ ಬದ್ಧರಾಗಿ ನಿಷ್ಕಾಮ ಸೇವೆ ಸಲ್ಲಿಸುವುದು ಇವರ ಸ್ವಭಾವ ಆಡಂಬರಕ್ಕಾಗಿ, ತೋರಿಕೆಗಾಗಿ, ಪ್ರಶಸ್ತಿಗಾಗಿ ಎಂದೂ ದುಡಿದವರಲ್ಲ ಇನ್ನೊಬ್ಬರಿಗೆ ಮಾಡಿದ ಸೇವೆ " ಮಾಡಿ ಮರೆತು ಬಿಡಬೇಕು" ಎನ್ನುವ ಸ್ವಭಾವ ಇವರದು.

ಇಂದು ಪ್ರಶಸ್ತಿಗಾಗಿ ಹಪಹಪಿಸುವ ಎಷ್ಟೋ ಜನರನ್ನು ಕಾಣುತ್ತೇವೆ. ಪ್ರಶಸ್ತಿಗಳನ್ನು ಮಾರುವ ಸಂಸ್ಥೆಗಳು ಕೂಡ ಹುಟ್ಟಿಕೊಂಡಿರುವುದು ನೋಡುತ್ತೇವೆ. ಕೆಲವರಂತೂ ಹಾರಾ ತುರಾಯಿ ಶಾಲು ಸನ್ಮಾನ ಪತ್ರ ಪ್ರಶಸ್ತಿಗಳನ್ನು ತಾವೇ ಸಿದ್ಧಪಡಿಸಿ, ಪಡೆದುಕೊಳ್ಳುವವರು ಇದ್ದಾರೆ. ಅಲ್ಲದೆ ರಾಜ್ಯ ಮಟ್ಟದ ರಾಷ್ಟ್ರ ಮಟ್ಟದ ಪ್ರಶಸ್ತಿಗಳು ರಾಜಕೀಯ ಹಿತೈಸಿಗಳಿಗೆ ಸೀಮಿತವಾಗಿರುವುದು ಕಾಣುತ್ತೇವೆ. ಆದರೆ ಪಾಟೀಲರು ಈ ಪ್ರಶಸ್ತಿಗಳ ಹಿಂದೆ ಬಿದ್ದವರಲ್ಲ. ಪ್ರಶಸ್ತಿಗಳು ಅವರನ್ನು ಹುಡುಕೊಂಡು ಬಂದರೂ ಕೂಡಾ ಬೇಡವೆಂದು ನಿರಾಕರಿಸಿದ ಉದಾಹರಣೆ ಉಂಟು, ಒಂದು ಸಾರಿ ಬೀದರಿನ ಜಿಲ್ಲಾಡಳಿತದವರು ಇವರ ವೈದ್ಯಕೀಯ ಮತ್ತು ಶೈಕ್ಷಣಿಕ ಸೇವೆಯನ್ನು ಪರಿಗಣಿಸಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ" ಆಯ್ಕೆ ಮಾಡಿ ಪ್ರಶಸ್ತಿ ಕೊಡಲು ಮುಂದೆ ಬಂದರೆ, ವೈದ್ಯಕೀಯ ವೃತ್ತಿಯಲ್ಲಿ ಸೇವೆಯನ್ನು ಸಲ್ಲಿಸುವಂತಹ ಅನೇಕ ಹಿರಿಯರಿದ್ದಾರೆ. ಅವರಿಗೆ ಕೊಡಿ ಎಂದು ನಯ ವಿನಯದಿಂದ ನನಗೆ ಬೇಡವೆಂದವರು.

ಆದರೆ ಬಸವಕಲ್ಯಾಣದ ಅನುಭವ ಮಂಟಪ "ಶರಣ ಕಮ್ಮಟವು" ಡಾ॥ ಬಸವರಾಜ ಪಾಟೀಲ ನೇತೃತ್ವದಲ್ಲಿ ಅದ್ದೂರಿಯಾಗಿ ಬೃಹತ್ ಪ್ರಮಾಣದಲ್ಲಿ ಕಾರ್ಯಕ್ರಮ ಮಾಡಿದ್ದಕ್ಕಾಗಿ ಇವರು ಧಾರ್ಮಿಕವಾಗಿ ಕೈಕೊಂಡ ದಾಸೋಹ ಸೇವೆಯನ್ನು ಪರಿಗಣಿಸಿ ಚಿತ್ರದುರ್ಗದ ಮುರುಘಾ ಮಠದ ಮುರುಘಾ ಶರಣರ ಅವರು ನಡೆಸುವ ಶರಣ ಸಂಸ್ಕೃತಿ ಉತ್ಸವದಲ್ಲಿ ಡಾ॥ ಬಸವರಾಜ ಪಾಟೀಲರಿಗೆ ವೈದ್ಯಶ್ರೀ ಪ್ರಶಸ್ತಿ ನೀಡಿ ಗೌರವಿಸಿ ಸನ್ಮಾನ ಮಾಡಿದರು. ಪ್ರಶಸ್ತಿ ಬೇಡವೆಂದು ಇವರು ನಿರಾಕರಿಸಿದರೂ ಸ್ವಾಮೀಜಿಯವರು ಬಿಡಲಿಲ್ಲ ಅವರ ಪ್ರೀತಿಗೆ ಮಣಿದು ಪ್ರಶಸ್ತಿ ಸ್ವೀಕರಿಸಿದರು. ಹೀಗೆ ಹಲವು ಸಭೆ ಸಮಾರಂಭಗಳಲ್ಲಿ ಗೌರವ ಸನ್ಮಾನಗಳು ನಡೆದಿವೆ. ಅವರ ಆತ್ಮೀಯತೆಗೆ ಮಣಿದು ಸನ್ಮಾನಗಳು ನಿರಾಕರಿಸಲಾಗಲಿಲ್ಲ.

ಹೀಗೆ ನಿರಾಡಂಬರವಾದ ಸಾರ್ಥಕ ಬದುಕು ನಡೆಸುತ್ತಿರುವ ಡಾ॥ ಬಸವರಾಜ ಪಾಟೀಲರು ನಿಜಕ್ಕೂ ಅಭಿನಂದನಾರ್ಹರು.

ಡಾ॥ ಬಸವರಾಜ ಜಿ. ಪಾಟೀಲರ ಬದುಕಿನ ಪ್ರಮುಖ ಘಟನೆಗಳು

ಜನನ	ಃ	೪-೪-೧೯೫೬
ಪ್ರಾಥಮಿಕ, ಪ್ರೌಢ ಶಾಲೆ	ಃ	೧೯೬೦ ರಿಂದ ೧೯೭೦ ಎನ್.ಎಫ್.ಎಚ್.ಎಸ್. ಶಾಲೆ
ಪಿಯುಸಿ	ಃ	೧೯೭೧ ರಲ್ಲಿ ಭೂಮರಡ್ಡಿ ಕಾಲೇಜು ಬೀದರ.
ಬಿ.ಎಸ್ಸಿ	ಃ	೧೯೭೧-೧೯೭೩ ಭೂಮರಡ್ಡಿ ಕಾಲೇಜು, ಬೀದರ.
ಎಂ.ಬಿ.ಬಿ.ಎಸ್., ಎಂ.ಎಸ್.	ಃ	೧೯೭೪-೧೯೮೦ ರಲ್ಲಿ ರಾಂಪುರೆ ವೈದ್ಯಕೀಯ ಕಾಲೇಜು ಗುಲ್ಬರ್ಗಾ.
ಮದುವೆ	ಃ	೨೯-೧೨-೧೯೮೩
ಸ್ಟೂಡೆಂಟ್ ಯುನಿಯನ್ ಉಪಾಧ್ಯಕ್ಷರಾಗಿನೇಮಕ	ಃ	೧೯೭೭-೭೮ ರಲ್ಲಿ
ಹೌಸ್ ಸರ್ಜನ್‌ರೆಂದು ನೇಮಕ ಮತ್ತು ಇಂಟರನೆಟ್ ಅಸೋಸಿಯೇಸ್ ಪ್ರಸಿಡೆಂಟ್	ಃ	೧೯೭೯-೮೦ ರಲ್ಲಿ
ಎಚ್.ಕೆ.ಇ. ಸಂಸ್ಥೆಯ ಸದಸ್ಯತ್ವ ಪಡೆದುಕೊಂಡದ್ದು	ಃ	೧೯೭೭-೭೮

ಎಚ್.ಕೆ.ಇ. ಆಡಳಿತ ಮಂಡಳಿಯ ಸದಸ್ಯರಾಗಿ ಆಯ್ಕೆ	:	೧೯೮೫
ಕೆ.ಆರ್.ಇ. ಸಂಸ್ಥೆಯ ಅಧ್ಯಕ್ಷರಾಗಿ ಆಯ್ಕೆ	:	೧೯೯೭-೨೦೦೦
ಕೆ.ಆರ್.ಇ. ಸಂಸ್ಥೆಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವುದು	:	೨೦೧೨ – ಇಲ್ಲಿಯವರೆಗೆ
ವೈದ್ಯಕಿಯ ವೃತ್ತಿ ಆರಂಭ	:	೧೯೮೦
ವಿದೇಶ ಪ್ರವಾಸ	:	೧೯೮೨ ಮನೆಲಾ, ಸಿಂಗಾಪುರ, ಹಾಂಕಾಂಗ್, ಬ್ಯಾಂಕ್‌ಕಾಂಗ್, ೧೯೮೩ ಖಠ್ಮಂಡು, ೧೯೮೭ ರಷ್ಯಾ, ದುಬಾಯಿ, ಮಕಾವ್ ಬೈರಾನ್ ಇಂಡೋ ಸೋವಿಯತ್ ರಿಲೆಸ್ಸೆನಶಿಪ್‌ಗಾಗಿ ರಷ್ಯಾಕ್ಕೆ ಪ್ರವಾಸ : ೧೯೮೭
ಬೀದರ ಜಿಲ್ಲಾ ಭಾರತೀಯ ವೈದ್ಯಕೀಯ ಸಂಘದ ಅಧ್ಯಕ್ಷತೆ ಐ.ಎಂ.ಎ. ಕಟ್ಟಡ	:	೧೯೯೧-೯೨
ವೈದ್ಯಶ್ರೀ ಪ್ರಶಸ್ತಿ	:	೧೯೯೭
ಕಾಂಗ್ರೆಸ್ ಪಾರ್ಟಿಯ		

ಸಹ ಕಾರ್ಯದರ್ಶಿಯಾಗಿ
ನೇಮಕ : ೧೯೯೮

ಬಿ.ಜೆ.ಪಿ. ಗೆ ಸೇರಿಕೊಂಡಿದ್ದು : ೨೦೦೫

ಗುಲ್ಬರ್ಗಾ ವಿಶ್ವವಿದ್ಯಾಲಯದ
ಅಕಾಡೆಮಿಕ್ ಕೌನ್ಸಿಲ ಸದಸ್ಯರಾಗಿ
ಸರ್ಕಾರದಿಂದ ನೇಮಕ: ೧೯೯೭-೨೦೦೨

ಭೂಮರೆಡ್ಡಿ ಕಾಲೇಜಿನಲ್ಲಿ
"ಮುಷ್ಠಿ ಧಾನ್ಯ" ಸಂಗ್ರಹ
ಕಾರ್ಯ ಪ್ರಾರಂಭ : ೨೦೧೮-೧೯

ಕರ್ನಾಟಕ ಕಾಲೇಜಿನಲ್ಲಿ
ಅನ್ನದಾಸೋಹ ಪ್ರಾರಂಭ : ೨೦೧೮-೧೯

ಆಕರ ಗ್ರಂಥಗಳು

ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ
ಸುವರ್ಣ ಮಹೋತ್ಸವ ನೆನಪಿನ ಸಂಚಿಕೆ.೧೯೯೩

ತತ್ವನಿಷ್ಠ ರಾಜಕೀಯ ಧುರೀಣ ಆರ್. ವಿ. ಬೀಡಪ್
ಪ್ರೊ. ವೀರಂದ್ರ ಸಿಂಪಿ ೨೦೦೧

ಸುರ್ಣ ಸಿರಿ: ಬಿ.ವಿ. ಭೂಮರೆಡ್ಡಿ ಕಾಲೇಜು
ಸುವರ್ಣ ಮಹೋತ್ಸವ ನೆನಪಿನ ಸಂಚಿಕೆ. ೨೦೧೦


BIDAR





ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ, ಹಾಗೂ ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆಯ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯ ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿ ಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ. ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು, ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ.

ಬಹುಮುಖ್ಯವಾಗಿ ಸ್ಥಳೀಯ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಅನೇಕ ಮಹನೀಯರ ಪರಿಶ್ರಮವಿದೆ. ಸಮಾಜೋಸಾಂಸ್ಕೃತಿಕ ಏಳಿಗೆಗಾಗಿ ತಮ್ಮನ್ನು ಗಂಧದ ಕೊರಡಂತೆ ಸವೆಸಿಕೊಂಡಿದ್ದಾರೆ. ಅಂಥವರ ಜೀವನ ಸಾಧನೆ ಕಾಲಗರ್ಭದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ ಸಾಂಸ್ಕೃತಿಕ ಚಿಂತಕರು ಮಾಲಿಕೆ ಆರಂಭಿಸಲಾಗಿದೆ. ಇದು ಚಾರಿತ್ರಿಕವಾಗಿ ಮಹತ್ವದ ಯೋಜನೆಯಾಗಿದೆ.

ಉದಯೋನ್ಮುಖ ಸಾಹಿತಿಗಳಾದ ಶ್ರೀಮತಿ ವಿದ್ಯಾವತಿ ಬಲ್ಲೂರ ಅವರು ಬರೆದ ಶಿಕ್ಷಣ ಚಿಂತಕರು ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ ಜೀವನ ಸಾಧನೆ ಎಂಬ ಪುಸ್ತಕ ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. ಡಾ. ಬಸವರಾಜ ಜಿ. ಪಾಟೀಲ ಅಷ್ಟೂರ ಈ ಭಾಗದಲ್ಲಿ ಶೈಕ್ಷಣಿಕವಾಗಿ ಬಹುದೊಡ್ಡ ಕ್ರಾಂತಿ ಮಾಡಿರುವರು. ಅನೇಕ ಶಿಕ್ಷಣ ಸಂಸ್ಥೆಗಳ ಏಳಿಗೆಗೆ ದುಡಿದು ಶಿಕ್ಷಣದ ಶ್ರೇಯೋಭಿವೃದ್ದಿಗಾಗಿ ದುಡಿಯುತ್ತಿದ್ದಾರೆ ಶ್ರೀಯುತರ ಬದುಕು ಬರಹ ಕುರಿತ ಚಿಂತನೆ ಮಾಡುವುದು, ಅದನ್ನು ಪುಸ್ತಕ ರೂಪದಲ್ಲಿ ಹೊರತರುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವೆಂದು ಭಾವಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕೈಂಕರ್ಯ ಪೂರೈಸುತ್ತಿದೆ. ಆದ್ದರಿಂದ ಸಹೃದಯರು ಸಹಸ್ಪಂದಿಸಿ ಈ ಪುಸ್ತಕ ಓದುವ ಮೂಲಕ ಅಕ್ಷರ ಪ್ರೀತಿ ಮೆರೆದರೆ ಪರಿಷತ್ತಿನ ಶ್ರಮ ಸಾರ್ಥಕವೆಂದು ಭಾವಿಸಲಾಗಿದೆ.

ಸುರೇಶ ಚನಶೆಟ್ಟಿ

ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ